ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಂದಾನಗೆ ಅಗ್ರಸ್ಥಾನ
ಭಾರತ ತಂಡದ ಬ್ಯಾಟರ್ ಸ್ಮೃತಿ ಮಂದಾನ ಐಸಿಸಿ ಮಹಿಳಾ ಏಕದಿನ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಏರಿದ್ದಾರೆ

ತಗ್ಗಲಿದೆ ಸಿಮೆಂಟ್ ಬೇಡಿಕೆ
ಮುಂಗಾರು ಮಳೆ ಬೇಗನೆ ಶುರುವಾಗಿರುವುದರಿಂದ ಸಿಮೆಂಟ್ ಬೇಡಿಕೆಯು ತಗ್ಗಬಹುದು ಎಂದು ರೇಟಿಂಗ್ಸ್ ಸಂಸ್ಥೆ ಇಂಡ್‌–ರಾ ಅಂದಾಜು ಮಾಡಿದೆ

ಸೆನ್ಸೆಕ್ಸ್ 81,583 | ನಿಫ್ಟಿ 24,853 | ಚಿನ್ನ (Std. 10g) ₹1,03,770 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,12,900 (ಬೆಂಗಳೂರು)

6 ‘ಡ್ರೀಮ್‌ಲೈನರ್’ ಸಂಚಾರ ರದ್ದು

ತಾಂತ್ರಿಕ ದೋಷ, ವಿಮಾನಗಳ ಅಲಭ್ಯತೆ ಕಾರಣ ಎಂದು ಸ್ಪಷ್ಟೀಕರಣ ನೀಡಿದ ಏರ್ ಇಂಡಿಯಾ

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್/ಮುಂಬೈ/ಕೋಲ್ಕತ್ತ: ಅಂತರ ರಾಷ್ಟ್ರೀಯ ಮಾರ್ಗದಲ್ಲಿ ಸಂಚರಿಸುವ, ಏರ್ ಇಂಡಿಯಾ ಸಂಸ್ಥೆಗೆ ಸೇರಿದ 6 ‘ಡ್ರೀಮ್‌ಲೈನರ್’ ವಿಮಾನಗಳ ಹಾರಾಟವು ಮಂಗಳವಾರ ರದ್ದಾಗಿದೆ.

ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ವಿಮಾನದ ದುರಂತದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ದೆಹಲಿಯಿಂದ ಪ್ಯಾರಿಸ್‌ಗೆ ತೆರಳಬೇಕಿದ್ದ ‘ಎಐ143’ ವಿಮಾನದಲ್ಲಿ ಹಾರಾಟಕ್ಕೆ ಮುಂಚೆ ನಡೆಸಿದ ಪರೀಕ್ಷೆ ವೇಳೆ ತಾಂತ್ರಿಕ ದೋಷ ಪತ್ತೆಯಾಗಿದೆ. ತಾಂತ್ರಿಕ ದೋಷ ಸರಿಪಡಿಸಲು ಹೆಚ್ಚಿನ ಸಮಯ ಬೇಕಿದ್ದು, ಪ್ಯಾರಿಸ್‌ನ ಚಾರ್ಲ್ಸ್ ಡಿ ಗಾಲ್ ವಿಮಾನ ನಿಲ್ದಾಣದಲ್ಲಿ ರಾತ್ರಿ ವೇಳೆ ವಿಮಾನ ಹಾರಾಟಕ್ಕೆ ನಿರ್ಬಂಧವಿದೆ. ಹೀಗಾಗಿ ಹಾರಾಟ ರದ್ದುಗೊಳಿಸಲಾಗಿದೆ ಎಂದು ಸಂಸ್ಥೆ ಸ್ಪಷ್ಟನೆ ನೀಡಿದೆ.

ಅಹಮದಾಬಾದ್–ಲಂಡನ್ ನಡುವಿನ ‘ಎಐ159’ರ ಸಂಚಾರವು ವಿಮಾನದ ಅಲಭ್ಯತೆಯಿಂದಾಗಿ ರದ್ದುಗೊಂಡಿದೆ ಎಂದು ಸಂಸ್ಥೆ ತಿಳಿಸಿದೆ. ಈ ವಿಮಾನದ ಹಾರಾಟ ರದ್ದಾಗಲು ತಾಂತ್ರಿಕ ದೋಷ ಕಾರಣ ಎಂಬ ವಿಚಾರದಲ್ಲಿ ಹುರುಳಿಲ್ಲ ಎಂದೂ ತಿಳಿಸಿದೆ. ಅಹಮದಾಬಾದ್ ದುರಂತದ ಬಳಿಕ ಈ ಮಾರ್ಗದ ವಿಮಾನದ ಕೋಡ್ ಅನ್ನು ‘ಎಐ171’ರಿಂದ ‘ಎಐ159’ಗೆ ಬದಲಿಸಲಾಗಿದೆ.

ಇನ್ನು ಲಂಡನ್‌ನಿಂದ ಅಮೃತಸರಕ್ಕೆ ಬರಬೇಕಿದ್ದ ‘ಎಐ170’ ವಿಮಾನದ ಹಾರಾಟವನ್ನೂ ಮಂಗಳವಾರ ರದ್ದುಗೊಳಿಸಲಾಗಿದೆ. ಇರಾನ್ ಹಾಗೂ ಇಸ್ರೇಲ್ ನಡುವಿನ ಯುದ್ಧದಿಂದಾಗಿ ಇರಾನ್ ತನ್ನ ವಾಯುಪ್ರದೇಶವನ್ನು ನಿರ್ಬಂಧಿಸಿರುವ ಕಾರಣ ಈ ವಿಮಾನದ ಸಂಚಾರ ರದ್ದುಗೊಳಿಸಿರುವುದಾಗಿ ಏರ್ ಇಂಡಿಯಾ ಮಾಹಿತಿ ನೀಡಿದೆ.

‘ದೆಹಲಿ–ದುಬೈ ನಡುವೆ ಸಂಚರಿಸುವ ‘ಎಐ915’ ವಿಮಾನ, ದೆಹಲಿ–ವಿಯೆನ್ನಾ ನಡುವಿನ ‘ಎಐ153’ ಹಾಗೂ ಬೆಂಗಳೂರು–ಲಂಡನ್ ನಡುವೆ ಸಂಚರಿಸುವ ‘ಎಐ133’ ವಿಮಾನಗಳ ಹಾರಾಟವೂ ಮಂಗಳವಾರ ರದ್ದಾಗಿದೆ.

▶10

ತಾಂತ್ರಿಕ ದೋಷ– ಕೋಲ್ಕತ್ತದಲ್ಲೇ ಉಳಿದ ವಿಮಾನ

ಸ್ಯಾನ್ ಫ್ರಾನ್ಸಿಸ್ಕೋದಿಂದ ಕೋಲ್ಕತ್ತ ಮಾರ್ಗವಾಗಿ ಮುಂಬೈಗೆ ಸಾಗುತ್ತಿದ್ದ ಏರ್ ಇಂಡಿಯಾ ವಿಮಾನವು ಕೋಲ್ಕತ್ತದಲ್ಲೇ ಹಾರಾಟ ಸ್ಥಗಿತಗೊಳಿಸಿದೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಟಾಪ್‌ಓವರ್ ವೇಳೆ ವಿಮಾನದ ಒಂದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದ ಕಾರಣ ಪ್ರಯಾಣಿಕರನ್ನು ಕೆಳಗಿಳಿಸಲಾಗಿದೆ. ಕೆಲವು ಪ್ರಯಾಣಿಕರಿಗೆ ಬೇರೆ ವಿಮಾನಗಳಲ್ಲಿ ಮುಂಬೈಗೆ ತೆರಳಲು ವ್ಯವಸ್ಥೆ ಮಾಡಲಾಗಿದ್ದು, ಉಳಿದವರಿಗೆ ಹೋಟೆಲ್‌ಗಳಲ್ಲಿ ವಸತಿ ಕಲ್ಪಿಸಿರುವುದಾಗಿ ಸಂಸ್ಥೆ ಹೇಳಿದೆ.

ಇಂಡಿಗೊ ವಿಮಾನ ತುರ್ತು ಭೂಸ್ಪರ್ಶ

ಕೊಚ್ಚಿಯಿಂದ ದೆಹಲಿಗೆ ತೆರಳುತ್ತಿದ್ದ ಇಂಡಿಗೊ ವಿಮಾನವು ಮಂಗಳವಾರ ಮಹಾರಾಷ್ಟ್ರದ ನಾಗ್ಪುರ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಬಾಂಬ್ ಬೆದರಿಕೆಯ ಸಂದೇಶ ಬಂದ ಕಾರಣ ತುರ್ತು ಭೂಸ್ಪರ್ಶ ಮಾಡಿದ್ದಾಗಿ ವಿಮಾನಯಾನ ಸಂಸ್ಥೆ ತಿಳಿಸಿದೆ.

ವಿಮಾನದಲ್ಲಿ 157 ಮಂದಿ ಪ್ರಯಾಣಿಕರು ಹಾಗೂ 6 ಸಿಬ್ಬಂದಿ ಇದ್ದರು. ದೆಹಲಿಗೆ ವಿಮಾನ ತೆರಳುವಾಗ ಬೆದರಿಕೆ ಇ–ಮೇಲ್ ಸ್ವೀಕರಿಸಲಾಗಿತ್ತು ಎಂದು ಸಂಸ್ಥೆ ಹೇಳಿದೆ.

ಮಾರ್ಗ ಮಧ್ಯೆ ಪ್ರಕ್ಷುಬ್ಧತೆ: ಉತ್ತರ ಗೋವಾದಿಂದ ಲಖನೌಗೆ ತೆರಳುತ್ತಿದ್ದ ಇಂಡಿಗೋ ವಿಮಾನವೂ ಪ್ರತಿಕೂಲ ಹವಾಮಾನದಿಂದಾಗಿ ಮಾರ್ಗ ಮಧ್ಯೆಯೇ ಪ್ರಕ್ಷುಬ್ಧತೆ (ಟರ್ಬುಲೆನ್ಸ್) ಎದುರಿಸಿದೆ. ತಕ್ಷಣವೇ ಪೈಲಟ್ ಹಾಗೂ ವಿಮಾನದ ಸಿಬ್ಬಂದಿ ಜಾಗರೂಕರಾಗಿ ಪರಿಸ್ಥಿತಿ ನಿಭಾಯಿಸಿದ್ದು, ಬಳಿಕ ವಿಮಾನವು ಸುರಕ್ಷಿತವಾಗಿ ಲಖನೌನಲ್ಲಿ ಲ್ಯಾಂಡ್ ಆಗಿದೆ. ಮುಂಗಾರು ಅವಧಿಯಾಗಿರುವ ಕಾರಣ ಹವಾಮಾನ ವೈಪರೀತ್ಯದಿಂದಾಗಿ ಈ ಸಮಸ್ಯೆ ಎದುರಾಗಿದೆ ಎಂದು ಇಂಡಿಗೋ ತಿಳಿಸಿದೆ.

ಥಗ್ ಲೈಫ್: ರಾಜ್ಯ ಸರ್ಕಾರಕ್ಕೆ ‘ಸುಪ್ರೀಂ’ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳು ನಟ ಕಮಲ್ ಹಾಸನ್ ಅವರ ‘ಥಗ್ ಲೈಫ್’ ಚಲನಚಿತ್ರವನ್ನು ಕರ್ನಾಟಕದ ಚಿತ್ರಮಂದಿರಗಳಲ್ಲಿ ಪ್ರದರ್ಶಿಸಲು ಅವಕಾಶ ಕಲ್ಪಿಸದ ಕರ್ನಾಟಕ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ಚಿತ್ರ ಪ್ರದರ್ಶನಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಹೊಣೆ ಎಂದು ಹೇಳಿದೆ.

‘ಜನ ಗುಂಪು ಗುಂಪಾಗಿ ಬೀದಿಗಿಳಿದು ಚಿತ್ರಮಂದಿರಗಳ ಮಾಲೀಕರಿಗೆ ಗನ್ ತೋರಿಸಿ ಚಿತ್ರ ಪ್ರದರ್ಶಿಸದಂತೆ ಬೆದರಿಕೆ ಒಡ್ಡುವುದಕ್ಕೆ ಅವಕಾಶ ಕಲ್ಪಿಸಲಾಗದು. ನೆಲದ ಕಾನೂನು ಪಾಲನೆಯಾಗಬೇಕು’ ಎಂದು ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಮನಮೋಹನ್ ಅವರಿದ್ದ ನ್ಯಾಯಪೀಠ ಅಭಿಪ್ರಾಯಪಟ್ಟಿತು.

▶7

- ಚಿತ್ರ ಪ್ರದರ್ಶನಗೊಂಡಲ್ಲಿ ಚಿತ್ರ ಮಂದಿರಕ್ಕೆ ಬೆಂಕಿ ಹಚ್ಚುವುದಾಗಿ ಬೆದರಿಕೆ ಒಡ್ಡುವುದು ಸರಿಯಲ್ಲ. ಜನರು ಚಿತ್ರ ವೀಕ್ಷಣೆ ಮಾಡದೆ ಇರಬಹುದು. ಅದು ಬೇರೆ ವಿಚಾರ. ಜನರು ಚಿತ್ರ ವೀಕ್ಷಿಸಲೇಬೇಕು ಎಂದು ನಾವು ಆದೇಶ ಹೊರಡಿಸುತ್ತಿಲ್ಲ. ಆದರೆ, ಚಿತ್ರ ಬಿಡುಗಡೆಯಾಗಬೇಕು
- ಈ ವಿಷಯವು ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ್ದಾಗಿದೆ. ಆದ್ದರಿಂದ, ನ್ಯಾಯಾಲಯ ಮಧ್ಯಪ್ರವೇಶ ಮಾಡುತ್ತಿದೆ. ಕಾನೂನು ಮತ್ತು ಮೂಲಭೂತ ಹಕ್ಕುಗಳನ್ನು ಕಾಪಾಡುವುದು ಸುಪ್ರೀಂ ಕೋರ್ಟ್‌ನ ಕರ್ತವ್ಯ. ಇದು ಕೇವಲ ಸಿನಿಮಾದ ವಿಷಯವಲ್ಲ

ನ್ಯಾಯಮೂರ್ತಿ ಮನಮೋಹನ್

‘ಹೈಕೋರ್ಟ್‌ಗೆ ಅಧಿಕಾರವಿಲ್ಲ’

ವಿವೇಚನೆಯು ಶೌರ್ಯದ ಅತ್ಯುತ್ತಮ ಭಾಗ ಎಂಬುದನ್ನು ಮತ್ತೊಮ್ಮೆ ನೆನಪಿಸಲಾಗುತ್ತಿದೆ ಎಂದು ಹೇಳಿದ್ದ ಕರ್ನಾಟಕ ಹೈಕೋರ್ಟ್, ‘ಕನ್ನಡವು ತಮಿಳಿನಿಂದ ಹುಟ್ಟಿದೆ ಎಂಬ ಹೇಳಿಕೆ ನೀಡಿದ್ದ ಕಮಲ್ ಹಾಸನ್ ಇನ್ನೂ ಕ್ಷಮೆ ಕೇಳಿಲ್ಲವೇ’ ಎಂದು ಮೌಖಿಕವಾಗಿ ಪ್ರಶ್ನಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಮನಮೋಹನ್, ‘ಅವರು (ನಟ) ಕ್ಷಮಾಪಣೆ ಕೇಳಬೇಕು ಎಂದು ಹೇಳಲು ಹೈಕೋರ್ಟ್‌ಗೆ ಯಾವುದೇ ಅಧಿಕಾರವಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

- ಬೆಂಗಳೂರಿನ ಎಲ್ಲ ಪ್ರಬುದ್ಧ ಜನರು ಕಮಲ್ ಹಾಸನ್ ಹೇಳಿದ್ದು ತಪ್ಪು ಎಂದು ಹೇಳಬಹುದು. ಆದರೆ, ಬೆದರಿಕೆ ಒಡ್ಡುವುದು ಏಕೆ?

ನ್ಯಾಯಮೂರ್ತಿ ಉಜ್ಜಲ್ ಭುಯಾನ್

OFFER PRICE AVAILABLE ON DINE-IN AND KFC APP ONLY. FREE DELIVERY ON KFC APP.

ಶ್ರೀನಾಥ್ ಮನೆಯಲ್ಲಿ ಶೋಧ

ಲೋಕಾಯುಕ್ತ ಎಸ್‌ಪಿಯಾಗಿದ್ದ ಐಪಿಎಸ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ಅಧಿಕಾರಿಗಳ ಹೆಸರಿನಲ್ಲಿ ನಿವೃತ್ತ ಹೆಡ್ ಕಾನ್‌ಸ್ಟೆಬಲ್ ನಿಂಗಪ್ಪ, ಸರ್ಕಾರಿ ನೌಕರರಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಶ್ರೀನಾಥ್ ಎಂ.ಜೋಶಿ ಅವರ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದಾರೆ.

‘ಶ್ರೀನಾಥ್ ಅವರ ಮನೆಯಲ್ಲಿ ಶೋಧ ನಡೆಸಲಾಗಿತ್ತು. ಶೋಧದ ವೇಳೆ ಅವರು ಮನೆಯಲ್ಲಿ ಇರಲಿಲ್ಲ. ಅವರನ್ನು ವಿಚಾರಣೆಗೆ ಕರೆಯಲಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ಖಚಿತಪಡಿಸಿವೆ.

ಶ್ರೀನಾಥ್ ಜೋಶಿ ಅವರು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ–1ರ ಎಸ್‌ಪಿಯಾಗಿದ್ದರು. ನಿಂಗಪ್ಪ ಪ್ರಕರಣ ದಾಖಲಾದ ಬೆನ್ನಲ್ಲೇ ಅವರನ್ನು ಲೋಕಾಯುಕ್ತ ಪೊಲೀಸ್ ಸೇವೆಯಿಂದ ಬಿಡುಗಡೆ ಮಾಡಲಾಗಿತ್ತು. ನಂತರ ಮಾತೃ ಇಲಾಖೆಯಲ್ಲಿ ಅವರು ವರದಿ ಮಾಡಿಕೊಂಡಿದ್ದು, ಇನ್ನಷ್ಟೇ ಅವರಿಗೆ ಹುದ್ದೆ ತೋರಿಸಬೇಕಿದೆ.

▶10

ಅಧಿಕಾರಿಗಳು ಶಾಮೀಲು?

‘ಲೋಕಾಯುಕ್ತ ಅಧಿಕಾರಿ ಎಂದು ಹೇಳಿಕೊಂಡಿದ್ದ ನಿವೃತ್ತ ಹೆಡ್‌ಕಾನ್‌ಸ್ಟೆಬಲ್ ನಿಂಗಪ್ಪ ಸಾವಂತ ಕೆಲವು ಅಧಿಕಾರಿಗಳಿಂದ ಹಣ ವಸೂಲಿ ಮಾಡಿರುವುದು ಖಚಿತವಾಗಿದ್ದು, ಈ ಪ್ರಕರಣದಲ್ಲಿ ಸರ್ಕಾರದ ಕೆಲ ಅಧಿಕಾರಿಗಳು ಭಾಗಿಯಾಗಿರುವ ಸುಳಿವು ಸಿಕ್ಕಿದೆ’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

‘ಬಂಧಿತ ನಿಂಗಪ್ಪನ ಮೊಬೈಲ್‌ನ ಕರೆ, ಸಂದೇಶ ಮತ್ತು ವಾಟ್ಸ್‌ಆ್ಯಪ್ ಕರೆ ವಿವರಗಳನ್ನು ಕಲೆ ಹಾಕಲಾಗುತ್ತಿದೆ’ ಎಂದು ಮಾಹಿತಿ ನೀಡಿದೆ.

‘ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದ ಈತ, ‘ನಿಮ್ಮ ಹೆಸರಿನಲ್ಲಿ ದೂರು ದಾಖಲಾಗಿದೆ. ಮನೆಯ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ ನಡೆಯಬಹುದು’ ಎಂದು ಬೆದರಿಸಿ ಹಣ ಪಡೆದಿರುತ್ತಾನೆ. ಹೀಗೆ ವಸೂಲಿ ಮಾಡಿದ ಹಣವನ್ನು 13 ವಿವಿಧ ಕ್ರಿಪ್ಟೊ ವ್ಯಾಲೆಟ್‌ಗಳಲ್ಲಿ ಇರಿಸಿದ್ದಾನೆ. ನಿಂಗಪ್ಪ ತನ್ನ ಮತ್ತು ತನ್ನ ಸಂಬಂಧಿಗಳ ಹೆಸರಿನಲ್ಲಿ ಕ್ರಿಪ್ಟೊ ಕರೆನ್ಸಿಯಲ್ಲಿ ಹೂಡಿಕೆ ಮಾಡಿದ್ದಾನೆ. ಆ ವ್ಯಾಲೆಟ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ’ ಎಂದಿದೆ.

ವಸೂಲಿಯ 35 ಪ್ರಕರಣಗಳು

‘ಲೋಕಾಯುಕ್ತರು, ಲೋಕಾಯುಕ್ತ ಅಧಿಕಾರಿಗಳು ಮತ್ತು ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ಸರ್ಕಾರಿ ನೌಕರರಿಂದ ಹಣ ವಸೂಲಿ ಮಾಡಿದ ಹಾಗೂ ವಸೂಲಿಗೆ ಯತ್ನಿಸಿದ್ದರ ವಿರುದ್ಧ ರಾಜ್ಯದಾದ್ಯಂತ ವಿವಿಧ ಪೊಲೀಸ್ ಠಾಣೆಗಳಲ್ಲಿ 35 ಪ್ರಕರಣಗಳು ದಾಖಲಾಗಿವೆ’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

‘ಲೋಕಾಯುಕ್ತದ ಹೆಸರಿನಲ್ಲಿ ಯಾವುದೇ ವ್ಯಕ್ತಿ ಕರೆ ಮಾಡಿ, ‘ಹಣ ನೀಡಿದರೆ ಪ್ರಕರಣ ರದ್ದುಪಡಿಸುತ್ತೇವೆ’ ಎಂದು ಬೆದರಿಕೆ ಅಥವಾ ಆಮಿಷ ಒಡ್ಡಿದರೆ ದೂರು ನೀಡಿ’ ಎಂದು ಲೋಕಾಯುಕ್ತವು ಕೋರಿದೆ.

ದೂರು ನೀಡಬಹುದಾದ ಸಂಖ್ಯೆ: 080-22011205, 080-22011273.
ಇ–ಮೇಲ್ ವಿಳಾಸ: kla-citysp-ka@nic.in, kla-citysp2-ka@nic.in

ಚಿನಕುರುಳಿ ಪ್ರಕಾಶ್ ಶೆಟ್ಟಿ

ಉತ್ಪಾದಕರಿಂದ ಪೆಟ್ ಬಾಟಲ್ ವಾಪಸ್ ಖರೀದಿ ಬಾಧ್ಯತೆಯ ಮೇಲೆ ನಿಗಾ

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ಜಿಲ್ಲಾ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ಲಾಸ್ಟಿಕ್ ಬಾಟಲ್ ತ್ಯಾಜ್ಯವನ್ನು ನಿಯಂತ್ರಿಸಲು, ಬಾಟಲ್‌ಗಳ ಉತ್ಪಾದಕರು ಮರು ಖರೀದಿಸುವ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುವ ಬಗ್ಗೆ ನಿಗಾವಹಿಸಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಜಿಲ್ಲಾಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ.

ಪಾಲಿಥಿಲೀನ್ ಟೆರಫ್ಥಲೇಟ್ (ಪೆಟ್) ಬಾಟಲ್‌ಗಳ ತ್ಯಾಜ್ಯ ನಿರ್ವಹಣೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳ (2016) ಅನುಷ್ಠಾನ ಹಾಗೂ ಮೇಲ್ವಿಚಾರಣೆ ನಡೆಸಲು ರಚಿಸಲಾಗಿರುವ ಸಮಿತಿಗೆ, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿ ಮಾಡಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಮೇಲ್ವಿಚಾರಣಾ ಸಮಿತಿ ರಚನೆ ಹಾಗೂ ಮರಗಳ ಸುತ್ತಲೂ ಕಾಂಕ್ರೀಟ್ ತೆರವಿಗೆ ಹೊರಡಿಸಲಾಗಿರುವ ಆದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಂಗಳವಾರ ಬಿಡುಗಡೆ ಮಾಡಿದರು.

ಪೆಟ್ ಬಾಟಲ್ ತ್ಯಾಜ್ಯದ ನಿರ್ವಹಣೆ ಮೇಲೆ ವಿಶೇಷ ಗಮನಹರಿಸಿ, ಪ್ಲಾಸ್ಟಿಕ್ ನಿರ್ವಹಣೆ ನಿಯಮಗಳನ್ನು ಅನುಷ್ಠಾನಗೊಳಿಸಿ, ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸಬೇಕು. ಪ್ಲಾಸ್ಟಿಕ್ ಮಾಲಿನ್ಯ ಕಡಿಮೆ ಮಾಡುವ ಜತೆಗೆ, ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಿ, ಕಾರ್ಯವಿಧಾನಗಳನ್ನು ಜಾರಿಗೊಳಿಸಲು ಜಿಲ್ಲಾಮಟ್ಟದ ಮೇಲ್ವಿಚಾರಣೆ ಸಮಿತಿ ರಚಿಸಲಾಗಿದೆ.

ಜಿಲ್ಲಾಮಟ್ಟದ ಸಮಿತಿಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಕಚೇರಿ ಆಡಳಿತಾತ್ಮಕ ಬೆಂಬಲ ಒದಗಿಸಬೇಕು. ಸಮನ್ವಯ ಸಾಧಿಸಿ, ವರದಿಗಳನ್ನು ಸಿದ್ಧಪಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಪೆಟ್ ಬಾಟಲ್ ತಯಾರಿಕೆ, ಮಾರಾಟದಲ್ಲಿರುವ ಉತ್ಪಾದಕರು, ಆಮದುದಾರರು ಮತ್ತು ಬ್ರ್ಯಾಂಡ್ ಮಾಲೀಕರು, ‘ಉತ್ಪಾದಕರಿಗೆ ಹೊಣೆಗಾರಿಕೆ ವಿಸ್ತರಣೆ’ಯ (ಇಪಿಆರ್) ನಿಯಮಗಳನ್ನು ಅನುಪಾಲನೆ ಮಾಡುತ್ತಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಜಿಲ್ಲಾಮಟ್ಟದ ಸಮಿತಿಯ ಪ್ರಾಥಮಿಕ ಜವಾಬ್ದಾರಿಯಾಗಿದೆ ಎಂದು ತಿಳಿಸಲಾಗಿದೆ.

▶10

ಮುಖ್ಯಾಂಶಗಳು

- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳ ಕಟ್ಟುನಿಟ್ಟಿನ ಅನುಷ್ಠಾನ
- ಜಿಲ್ಲಾಮಟ್ಟದ ಸಮಿತಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಕಾರ

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷ– ಜಿಲ್ಲಾಧಿಕಾರಿ, ಸದಸ್ಯರು– ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ, ಆಹಾರ ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆ (ಪುರಸಭೆ/ ನಗರ ಪಾಲಿಕೆ/ ಪಂಚಾಯಿತಿ) ಸದಸ್ಯರು, ಸದಸ್ಯ ಸಂಚಾಲಕ– ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ.

> **ವಿಶ್ವ ಪರಿಸರ ದಿನಾಚರಣೆಯ ಘೋಷವಾಕ್ಯ ‘ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸಿ’ ಎಂದಿದೆ. ಇದು ಕಷ್ಟದ ಕೆಲಸವಾದರೂ ನಾವು ಮಾಡಲೇಬೇಕಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ

ಆಟೊ ಚಾಲಕರ ಸತ್ಯಾಗ್ರಹ 24ರಿಂದ

ಮನೆಗಳಿಂದ ತ್ಯಾಜ್ಯ ಸಂಗ್ರಹ: ಕಾರ್ಮಿಕರನ್ನು ನೇರ ವೇತನ ಪದ್ಧತಿಯಡಿ ತರಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಆಟೊ ಚಾಲಕರು, ಸಹಾಯಕರು, ಲೋಡರ್‌ಗಳನ್ನು ನೇರ ವೇತನ ಪದ್ಧತಿಯಡಿ ತರಬೇಕು ಹಾಗೂ ಸೇವೆ ಕಾಯಂಗೊಳಿಸಬೇಕು ಎಂದು ಆಗ್ರಹಿಸಿ ಜೂನ್ 24ರಿಂದ ಕೆಲಸ ಸ್ಥಗಿತಗೊಳಿಸಿ, ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಘನತ್ಯಾಜ್ಯ ವಾಹನಗಳ ಚಾಲಕರು, ಸಹಾಯಕರು, ಲೋಡರ್‌ಗಳನ್ನು ನೇರ ವೇತನ ಪದ್ಧತಿಗೆ ತಂದು, ಕಾಯಂಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದ್ದರು. ಆದರೆ ಈವರೆಗೆ ಈಡೇರಿಸಿಲ್ಲ. ಹೀಗಾಗಿ, ಹೋರಾಟ ನಡೆಸಲಿದ್ದೇವೆ’ ಎಂದು ಕಾರ್ಮಿಕ ಸಂರಕ್ಷಣಾ ಟ್ರೇಡ್ ಯೂನಿಯನ್ ಅಧ್ಯಕ್ಷ ತ್ಯಾಗರಾಜ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಹೊಸ ಗುತ್ತಿಗೆದಾರರ ನೇಮಕಕ್ಕೆ ಟೆಂಡರ್ ನಡೆಸದಂತೆ ಆಗ್ರಹ
- ಹಾಲಿ ಕಾರ್ಯನಿರ್ವಹಿಸುತ್ತಿರುವವರನ್ನು ಕಾಯಂಗೊಳಿಸಲು ಒತ್ತಾಯ
- ಟೆಂಡರ್ ನಿಯಮ ಬದಲಿಸುವಂತೆ ಮನವಿ

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ತ್ಯಾಗರಾಜ್, ‘ನಮ್ಮ ಬೇಡಿಕೆಯನ್ನು ಈಡೇರಿಸದೆ ತ್ಯಾಜ್ಯ ವಿಲೇವಾರಿಗೆ ಹೊಸದಾಗಿ ಟೆಂಡರ್ ಕರೆಯಲಾಗಿದೆ. ನೀವು ನೀಡಿರುವ ಹೇಳಿಕೆ ಹಾಗೂ ಭರವಸೆಗಳಿಗೆ ಇದು ವಿರುದ್ಧವಾಗಿದೆ. ಹೀಗಾಗಿ, ಘನತ್ಯಾಜ್ಯ ವಾಹನ ಚಾಲಕರು, ಸಹಾಯಕರು, ಲೋಡರ್‌ಗಳನ್ನು ಹೊರತುಪಡಿಸಿ, ಆಟೊ ಟಿಪ್ಪರ್, ಕಾಂಪ್ಯಾಕ್ಟರ್ ಲಾರಿ ವಾಹನಗಳ ನಿರ್ವಹಣೆಗೆ ಮಾತ್ರ ಟೆಂಡರ್ ಆಹ್ವಾನಿಸಲು ಅಧಿಕಾರಿಗಳಿಗೆ ಸೂಚಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಇದು ಸಾಧ್ಯವಾಗದಿದ್ದರೆ, ಈಗ ಕಾರ್ಯ ನಿರ್ವಹಿಸುತ್ತಿರುವ ಚಾಲಕರು, ಸಹಾಯಕರು, ಲೋಡರ್‌ಗಳೇ ಸ್ವಂತವಾಗಿ ಆಟೊ ಟಿಪ್ಪರ್, ಕಾಂ-ಪ್ಯಾಕ್ಟರ್‌ಗಳನ್ನು ನಿರ್ವಹಣೆ ಮಾಡುವ ಯೋಜನೆಗೆ ಅವಕಾಶ ಮಾಡಿಕೊಡಬೇಕು’ ಎಂದು ಕೋರಿದ್ದಾರೆ.

‘2024ರ ಡಿಸೆಂಬರ್‌ನಲ್ಲಿ ನಾವು ಪ್ರತಿಭಟನೆ ನಡೆಸಿದ್ದಾಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರು. ಆಗ ಹೋರಾಟವನ್ನು ವಾಪಸ್ ಪಡೆದಿದ್ದೆವು. ಐದು ತಿಂಗಳಾದರೂ ಆ ಬಗ್ಗೆ ಕ್ರಮವಾಗಿಲ್ಲ. ಹೀಗಾಗಿ, ಹೋರಾಟಕ್ಕೆ ಮುಂದಾಗಿದ್ದೇವೆ. ಶಿವಕುಮಾರ್ ಅವರಿಗೂ ಮನವಿ ನೀಡಿದ್ದೇವೆ. ಆದರೆ ಅವರು ಸರಿಯಾಗಿ ಸ್ಪಂದಿಸಿಲ್ಲ’ ಎಂದು ತ್ಯಾಗರಾಜ್ ತಿಳಿಸಿದರು.

ಕಸ ಮಾಫಿಯಾಕ್ಕೆ ಹೆದರುವುದಿಲ್ಲ: ಡಿಸಿಎಂ

‘ನಗರದಲ್ಲಿರುವ ಕಸದ ಮಾಫಿಯಾಗೆ ನಾನು ಹೆದರುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕಸ ವಿಲೇವಾರಿ ಮರು ಟೆಂಡರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ತೀರ್ಪಿನ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಈ ಮೊದಲು 89 ಪ್ಯಾಕೇಜ್‌ಗಳಿಗೆ ಟೆಂಡರ್‌ಗಳಾಗಿದ್ದವು. ಅವರೆಲ್ಲರೂ ಸೇರಿ ತಮ್ಮದೇ ಗುಂಪು ಮಾಡಿಕೊಂಡಿದ್ದಾರೆ. ಇದೊಂದು ಮಾಫಿಯಾ. ಇವರುಗಳು ನಮ್ಮ ದಾರಿ ತಪ್ಪಿಸುತ್ತೇವೆ ಎಂದುಕೊಂಡಿದ್ದಾರೆ. ಇದರ ಬಗ್ಗೆ ನ್ಯಾಯಾಲಯಕ್ಕೆ ಅರ್ಥ ಮಾಡಿಸುವ ಕೆಲಸ ಮಾಡುತ್ತೇವೆ’ ಎಂದರು.

‘ಏನೇ ಕೆಲಸ ಮಾಡಲು ಹೋದರೂ ಪಿಐಎಲ್ ಹಾಕುವುದು, ತಡೆಯಾಜ್ಞೆ ತರುವ ಬೆದರಿಕೆ ತಂತ್ರಗಳನ್ನು ಒಂದಷ್ಟು ಜನರ ಗುಂಪು ಮಾಡುತ್ತಿದೆ. ಈ ಸರ್ಕಾರದಲ್ಲಿ ಇದೆಲ್ಲವೂ ನಡೆಯುವುದಿಲ್ಲ. ಹಳಬರನ್ನು ಕಿತ್ತು ಬಿಸಾಕಿ ಹೊಸಬರಿಗೆ ಅವಕಾಶ ನೀಡಲಾಗುವುದು’ ಎಂದು ತಿಳಿಸಿದರು.

ಸಂಶೋಧನಾ ಕೇಂದ್ರಕ್ಕೆ ಒಡಂಬಡಿಕೆ

ಅಮೆರಿಕದ ಡಸಾಲ್ಟ್ ಸಿಸ್ಟಮ್ಸ್ – ರಾಮಯ್ಯ ವಿ.ವಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಧುನಿಕ ಉತ್ಪನ್ನಗಳ ಅಭಿವೃದ್ಧಿ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ನಾವಿನ್ಯತಾ ಕೇಂದ್ರ ಪ್ರಾರಂಭಿಸಲು ಅಮೆರಿಕದ ಡಸಾಲ್ಟ್ ಸಿಸ್ಟಮ್ಸ್ ಹಾಗೂ ಇಲ್ಲಿನ ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಒಡಂಬಡಿಕೆ ಮಾಡಿಕೊಂಡಿವೆ.

‘3ಡಿ ಡಿಸೈನ್, ಎಂಜಿನಿಯರಿಂಗ್ ಹಾಗೂ ಸಿಮ್ಯುಲೇಷನ್ ತಂತ್ರ-ಜ್ಞಾನದಲ್ಲಿ ಡಸಾಲ್ಟ್ ಸಿಸ್ಟಮ್‌ಸ್ ಜಾಗತಿಕ ನಾಯಕನಾಗಿ ಗುರುತಿಸಿಕೊಂಡಿದೆ. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾ-ಲಯವು ‘ಅಪ್ಲಿಕೇಷನ್’ ಆಧಾರಿತ ಶಿಕ್ಷಣ ಹಾಗೂ ಸಂಶೋಧನೆಯಲ್ಲಿ ಮುಂಚೂಣಿಯಲ್ಲಿದೆ. ಆದ್ದರಿಂದ ಸಂಶೋಧನಾ ಕ್ಷೇತ್ರದಲ್ಲಿ ಈ ಒಡಂಬಡಿಕೆ ಮಹತ್ವದಾಗಿದೆ’ ಎಂದು ವಿಶ್ವವಿ-ದ್ಯಾಲಯದ ಕುಲಾಧಿಪತಿ ಹಾಗೂ ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಅಧ್ಯಕ್ಷ ಎಂ.ಆರ್. ಜಯರಾಮ್ ತಿಳಿಸಿದ್ದಾರೆ.

ಡಸಾಲ್ಟ್ ಸಿಸ್ಟಮ್ಸ್ ಇಂಡಿಯಾದ ನಿರ್ದೇಶಕ ರಾಮಕೃಷ್ಣನ್ ವೆಂಕಟರಾಮನ್ ಹಾಗೂ ವಿಶ್ವವಿದ್ಯಾಲಯದ ಕುಲಸಚಿವ ಜಿ.ಎಸ್. ವೆಂಕಟೇಶ್ ಒಡಂಬಡಿಕೆ ಮಾಡಿಕೊಂಡರು. ಎಂ.ಆರ್. ಜಯರಾಮ್ ಉಪಸ್ಥಿತರಿದ್ದರು

‘ವಿಶ್ವವಿದ್ಯಾಲಯದ ಆವರಣದಲ್ಲಿ ನಾವಿನ್ಯತಾ ಕೇಂದ್ರ ಪ್ರಾರಂಭಿಸಲಾಗುತ್ತದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ಈ ಕೇಂದ್ರ ಸಹಕಾರಿಯಾಗಲಿದೆ. ಬೋಧಕರು, ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಉದ್ಯಮಿಗಳು ಒಟ್ಟಾಗಿ ಕಾರ್ಯನಿರ್ವ-ಹಿಸಲಿದ್ದು, ಸಂಶೋಧನೆಗಳು ಜಗತ್ತನ್ನು ಕಾಡುತ್ತಿರುವ ಸಮಸ್ಯೆಗಳನ್ನು ಕೇಂದ್ರೀಕರಿಸಲಿದೆ’ ಎಂದಿದ್ದಾರೆ.

ವಿ.ವಿ ಕುಲಪತಿ ಕೆ.ಕೆ. ರೈನಾ, ‘ಉದ್ಯಮಕ್ಕೆ ಬೇಕಾದ ಕೌಶಲಗಳನ್ನು ವೃದ್ಧಿಸಲು, ಪರಿಣಾಮಕಾರಿ ಶಂಶೋಧನೆ ನಡೆಸಲು ಈ ಒಡಂಬಡಿಕೆ ಸಹಕಾರಿ’ ಎಂದು ತಿಳಿಸಿದ್ದಾರೆ.

ಕೆಲಸದ ಅವಧಿ 10 ಗಂಟೆಗೆ ಹೆಚ್ಚಳ?

ಬೆಂಗಳೂರು: ಕಾರ್ಮಿಕರ ಕೆಲಸದ ಅವಧಿಯ ಗರಿಷ್ಠ ಮಿತಿಯನ್ನು ದಿನಕ್ಕೆ ಒಂಬತ್ತರಿಂದ 10 ಗಂಟೆಗೆ ಹೆಚ್ಚಿಸುವುದು ಮತ್ತು 10ಕ್ಕಿಂತ ಕಡಿಮೆ ಉದ್ಯೋ-ಗಿಗಳಿರುವ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡುವ ಉದ್ದೇಶದಿಂದ ಎರಡು ಕಾನೂನುಗಳ ತಿದ್ದುಪಡಿಗೆ ರಾಜ್ಯ ಸರ್ಕಾರ ಮುಂದಾಗಿದೆ.

ಉದ್ದೇಶಿತ ಕಾನೂನು ತಿದ್ದುಪಡಿ ಕುರಿತು ಚರ್ಚಿಸಲು ಕೈಗಾರಿಕಾ ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಭೆಯನ್ನು ಕಾರ್ಮಿಕ ಇಲಾಖೆ ಬುಧವಾರ ಹಮ್ಮಿಕೊಂಡಿದೆ. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಸೆಕ್ಷನ್ 7ರ ಪ್ರಕಾರ, ಕೆಲಸದ ಅವಧಿ ದಿನಕ್ಕೆ ಒಂಬತ್ತು ಗಂಟೆಯನ್ನು ಮೀರಬಾರದು ಮತ್ತು ಗರಿಷ್ಠ ಹೆಚ್ಚುವರಿ ಅವಧಿ (ಒಟಿ) 10 ಗಂಟೆಗಳನ್ನು ಮೀರಬಾರದು. ಉದ್ದೇಶಿತ ತಿದ್ದುಪಡಿಯ ಮೂಲಕ, ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 10 ಗಂಟೆ ಮತ್ತು ಹೆಚ್ಚುವರಿ ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 12 ಗಂಟೆಗಳಿಗೆ ವಿಸ್ತರಿಸಲು ಸರ್ಕಾರ ಮುಂದಾಗಿದೆ. ಆ ಮೂಲಕ, ಮೂರು ತಿಂಗಳಲ್ಲಿ ಹೆಚ್ಚುವರಿ ಕೆಲಸದ ಗರಿಷ್ಠ ಮಿತಿಯು 50ರಿಂದ 144 ಗಂಟೆಗೆ ಹೆಚ್ಚಳ ಆಗಲಿದೆ.

ಎಲ್ಲೆಲ್ಲೂ ಗುಂಡಿ

ರಸ್ತೆ ಗುಂಡಿ ಅಪಾಯಕ್ಕೆ ದಾರಿ

ಹೆಬ್ಬಾಳದ ಹೊರ ವರ್ತುಲ ಮುಖ್ಯ ರಸ್ತೆಯಲ್ಲಿ ಗುಂಡಿ ಬಾಯ್ತೆರೆದುಕೊಂಡಿದೆ
ಮನೋಜ್, ಹೆಬ್ಬಾಳ

ಸುಂಕದಕಟ್ಟೆಯ ಪಿಎನ್‌ಟಿ ಗಣೇಶ್ ದೇವಸ್ಥಾನದ ಮುಖ್ಯರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ.
ರಂಗೇಗೌಡ, ಸುಂಕದಕಟ್ಟೆ

ಪಣತ್ತೂರಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ
ವಿನಯ್ ಕುಮಾರ್, ವರ್ತೂರು

ರಾಮಮೂರ್ತಿನಗರ ಎನ್‌ಆರ್‌ಐ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ
ಗೋಪಾಲ್, ಎನ್‌ಆರ್‌ಐ ಬಡಾವಣೆ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ. ವಾಟ್ಸ್ ಆ್ಯಪ್: 9606038256

ಸಂಕ್ಷಿಪ್ತ ಸುದ್ದಿ

ಜಿಂಕೆ ಬೇಟೆ: ಇಬ್ಬರ ಬಂಧನ

ಕನಕಪುರ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಕೋಡಿಹಳ್ಳಿ ವನ್ಯಜೀವಿ ವಲಯದಲ್ಲಿ ಜೂನ್ 7ರಂದು ಜಿಂಕೆ ಬೇಟೆಯಾಡಿದ ಇಬ್ಬರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ತಾಲ್ಲೂಕಿನ ಕೋಡಿಹಳ್ಳಿ ಹೋಬಳಿ ಹುಣಸನಹಳ್ಳಿಯ ವಿನೋದ್ ಕುಮಾರ್ (30) ಮತ್ತು ಮಾಯಂಡಿ (38) ಬಂಧಿತ ಆರೋಪಿಗಳು. ಇವರ ವಿರುದ್ಧ ಅರಣ್ಯ ಕಾಯ್ದೆ ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಕೋಡಿಹಳ್ಳಿ ಆರ್‌ಎಫ್‌ಒ ಆಂತೋನಿ ರೇಗೊ, ಉಪ ವಲಯ ಅರಣ್ಯಾಧಿಕಾರಿಗಳಾದ ದೀಪಕ್, ಚೇತನ್, ಅರಣ್ಯಗಸ್ತು ಪಾಲಕರಾದ ಜಗದೀಶ್, ಯತೀಶ್, ಅರಣ್ಯ ವೀಕ್ಷಕ ಮಾರುತಿ ಆರೋಪಿಗಳ ಮನೆಯ ಮೇಲೆ ದಾಳಿ ನಡೆಸಿದ್ದರು. ಆರೋಪಿಗಳು ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದ ಜಿಂಕೆಯ ಮಾಂಸ, ಕೊಂಬುಗಳನ್ನು ವಶಕ್ಕೆ ಪಡೆಯಲಾಗಿದೆ.

ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಶನ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್ ಅಡ್ಮಿನಿಸ್ಟ್ರೇ-ಶನ್‌ನಲ್ಲಿ ಮೂರು ತಿಂಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ತರಗತಿಗಳು ಜುಲೈ 1ರಂದು ಪ್ರಾರಂಭವಾಗಲಿದೆ. 18 ರಿಂದ 32 ವರ್ಷ ವಯಸ್ಸಿನ ಸಾಮಾನ್ಯ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ 35 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು.

ಸಂಪರ್ಕ ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ, ಬೆಂಗಳೂರು, ಮಾಹಿತಿಗೆ: 080-23440036/ 94485 38107 ಸಂಪರ್ಕಿಸಬಹುದು.

21ಕ್ಕೆ ಯೋಗ ಉತ್ಸವ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನವಾದ ಜೂನ್ 21ರಂದು ಅಕ್ಷರ್ ಯೋಗ ಕೇಂದ್ರದಲ್ಲಿ ನಡೆಯುವ ಯೋಗ ಉತ್ಸವದಲ್ಲಿ ವಿದ್ಯಾರ್ಥಿಗಳು, ವೃತ್ತಿಪರರು, ಸೇನಾ ಸಿಬ್ಬಂದಿ, ವಿದೇಶಿ ಪ್ರಜೆಗಳು ಸೇರಿ 2,500ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ದುಬೈ, ಹಾಂಕಾಂಗ್, ಅಮೆರಿಕ, ಬ್ರಿಟನ್, ತೈವಾನ್, ಜಪಾನ್, ಸಿಂಗಪುರ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ, ಸಂಸ್ಥೆಯು ಅಂತರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮಗಳಲ್ಲಿ ಗಿನ್ನಿಸ್ ದಾಖಲೆಯ ಮೂಲಕ ವಿಶ್ವದ ಗಮನ ಸೆಳೆಯುತ್ತಿದೆ. ಈ ಬಾರಿಯೂ ದಾಖಲೆ ಮಾಡುವ ವಿಶ್ವಾಸ ಇದೆ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ. ಕಾರ್ಯಕ್ರಮದಲ್ಲಿ ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಶಾಸಕ ಡಾ. ಅಶ್ವತ್ಥನಾರಾಯಣ್, ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಭಾಗವಹಿಸಲಿದ್ದಾರೆ ಎಂದು ಹೇಳಿದೆ.

athulyaseniorcare.com

Athulya
Senior Care

ತುಂಬಾ ಕೇರ್ ತಗೊಂಡು – ನೋಡಿ ಕೊಳ್ಳೋದು ಅಂದ್ರೆ ಏನು ಅಂತ ಅನುಭವದಿಂದ ಹೇಳ ಬಲ್ಲೆ

ನಾನು ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸ ಮಾಡಿದವ. ನನ್ನ ಜೀವನವನ್ನಾ ನನ್ನದೇ ರೀತಿಯಲ್ಲಿ ಬದುಕಿ ಗೊತ್ತಿದವ. ನನಗೆ, ಈಗ 90 ವರ್ಷ ವಯಸ್ಸು. ನನಗಾಗಿ, ನನ್ನ ಮಗಳು ‘ಅತುಲ್ಯ ಸೀನಿಯರ್ ಕೇರ್’ನಾ ಸೆಲೆಕ್ಟ್ ಮಾಡಿದಾಗ, ನನ್ನ ಜೀವನದಲ್ಲಿ ಒಂದು ಹೊಸ ಅನುಭವದ ಅಧ್ಯಾಯ ಶುರುವಾಗುತ್ತೆ ಅಂತ ನಾನು ಅಂದುಕೊಂಡಿರ್ಲಿಲ್ಲ. ಕಳೆದ 8 ವರ್ಷದಿಂದ ನಾನು ‘ಅತುಲ್ಯ’ದಲ್ಲಿ ಖುಷಿಯಾಗಿದ್ದೀನಿ. ನಮ್ಮೊಂದಿಗೆ ತಾಳ್ಮೆಯಿಂದ ಆರೈಕೆ ಮಾಡುವ ‘ಅತುಲ್ಯ ಸ್ಟಾಫ್’ ಇದೆ – ನಗು ಹಂಚಿಕೊಳ್ಳಲು ಬೇರೆ ಬೇರೆ ಹಿನ್ನೆಲೆಯಿಂದ ಬಂದಿರುವ ಸಹಪಾಠಿಗಳು ಇದ್ದಾರೆ, ಒಟ್ನಲ್ಲಿ, ನಾವೆಲ್ಲ ಒಂದೇ ಫ್ಯಾಮಿಲೀ ತರ ಸಂತೋಷ ’ವಾಗಿದ್ದೀವಿ ಅಂತ ಹೆಮ್ಮೆಯಿಂದ ಹೇಳಬಲ್ಲೆ

ಹೆಸರು: ಆರ್ ಕಣ್ಣನ್
ವಯಸ್ಸು: 90 ವರ್ಷ
ನಿವಾಸಿ: ಅತುಲ್ಯ ಸೀನಿಯರ್ ಕೇರ್

#beautifulbeginnings

30,000+ SENIORS SERVED | 1,000+ BEDS | 5 CITIES | 10 LOCATIONS | 8 YEARS AND RUNNING

Enquire now:
98849 45900

BENGALURU | CHENNAI | COIMBATORE
HYDERABAD | KOCHI AND GROWING!

INDIA'S LARGEST ASSISTED LIVING

Beautiful Beginnings

ಚಾಕು, ಕತ್ತರಿ, ಗಾಂಜಾ, ಬೀಡಿ ಪತ್ತೆ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ದಿಢೀರ್ ದಾಳಿ ನಡೆಸಿ ಪರಿಶೀಲಿಸಿದ್ದು, ಗಾಂಜಾ, ಬೀಡಿ, ಸಿಗರೇಟು ಸೇರಿ ನಿಷೇಧಿತ ವಸ್ತುಗಳು ಪತ್ತೆಯಾಗಿವೆ.

ಜೈಲಿನೊಳಗೆ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸಿಸಿಬಿ ದಾಳಿಯಿಂದ ಬಹಿರಂಗವಾಗಿದೆ.

ವಿವಿಧ ಬ್ಯಾರಕ್‌ಗಳಲ್ಲಿ ತಂಬಾಕು ಉತ್ಪನ್ನಗಳಾದ ಚೈನಿ, ಸ್ವಾಗತ್ ಗೋಲ್ಡ್, ಗಾಂಜಾ ಸೇದಲು ಕೈದಿಗಳು ಬಳಸುತ್ತಿದ್ದ ಕೊಳವೆಗಳು, ಚಾಕು, ಟ್ರಿಮ್ಮರ್, ಕತ್ತರಿ, ಮೊಬೈಲ್ ಚಾರ್ಜರ್, ಬೆಂಕಿ ಪೊಟ್ಟಣ, ಲೈಟರ್, ಪ್ಲೇ ಕಾರ್ಡ್ಸ್, ಪ್ಲೇ ಕಾರ್ಡ್‌ನ ಆಟದ ಬಳಿಕ ಸಂಖ್ಯೆ ಬರೆದುಕೊಳ್ಳಲು ಕೈದಿಗಳು ಉಪಯೋಗಿಸಿದ್ದ ಪುಸ್ತಕ, ಬಿಸಿ ನೀರು ಕಾಯಿಸುವ ಕಾಯಿಲ್, ಆಯುಧಗಳು, ಕಬ್ಬಿಣದ ರಾಡುಗಳು ಪತ್ತೆಯಾಗಿವೆ. ಇಬ್ಬರು ಕೈದಿಗಳ ಬಳಿಯಿದ್ದ ₹16 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಜೈಲಿನ ವಿವಿಧ ಬ್ಯಾರಕ್‌ಗಳಿಗೆ ಅಕ್ರಮವಾಗಿ ನಿಷೇಧಿತ ವಸ್ತುಗಳನ್ನು ಪೂರೈಸುತ್ತಿರುವ ಖಚಿತ ಮಾಹಿತಿ ಮೇರೆಗೆ ಸೋಮವಾರ ಬೆಳಿಗ್ಗೆ ದಿಢೀರ್ ದಾಳಿ ನಡೆಸಿದ ಸಿಸಿಬಿ ತಂಡಕ್ಕೆ ನಿಷೇಧಿತ ವಸ್ತುಗಳು ಸಿಕ್ಕಿವೆ. ಬ್ಯಾರಕ್‌ಗಳಲ್ಲಿ ಅಪಾರ ಪ್ರಮಾಣದ ಸಿಗರೇಟು ಪ್ಯಾಕ್‌ಗಳು, ಬೀಡಿ ಪೊಟ್ಟಣಗಳು ಸಿಕ್ಕಿವೆ ಎಂದು ಮೂಲಗಳು ತಿಳಿಸಿವೆ.

ಕದ್ದುಮುಚ್ಚಿ ಮೊಬೈಲ್ ಪೂರೈಕೆ: 'ಕಾರಾಗೃಹದಲ್ಲಿರುವ ವಿಚಾರಣಾಧೀನ ಹಾಗೂ ಸಜಾ ಕೈದಿಗಳಿಗೆ ಕದ್ದುಮುಚ್ಚಿ ಮೊಬೈಲ್ ಪೂರೈಸುತ್ತಿದ್ದ ಕಾರಾಗೃಹ ಆಸ್ಪತ್ರೆಯ ಇಬ್ಬರು ಆಪ್ತ ಸಮಾಲೋಚಕರನ್ನು ಕಳೆದ ವಾರ ಬಂಧಿಸಲಾಗಿತ್ತು. ಹೊರ ಗುತ್ತಿಗೆ ಆಧಾರದಲ್ಲಿ ಆಪ್ತ ಸಮಾಲೋಚಕರಾಗಿ ಕೆಲಸ ಮಾಡುತ್ತಿದ್ದ ನವ್ಯಶ್ರೀ (33) ಮತ್ತು ಸೃಜನ್ (33) ಅವರು, ಕಾವಲು ಸಿಬ್ಬಂದಿಯ ಕಣ್ತಪ್ಪಿಸಿ ಕೈದಿಗಳಿಗೆ ಮೊಬೈಲ್ ಪೂರೈಸುತ್ತಿದ್ದರು. ನವ್ಯಶ್ರೀ ಅವರು ತಮ್ಮ ಬ್ಯಾಗ್‌ನಲ್ಲಿ ಮೊಬೈಲ್ ಬಚ್ಚಿಟ್ಟುಕೊಂಡು ಜೈಲಿನ ಒಳಕ್ಕೆ ಹೋಗಲು ಯತ್ನಿಸಿದ್ದರು. ಆಗ ಪ್ರವೇಶ ದ್ವಾರದಲ್ಲಿದ್ದ ಸಿಬ್ಬಂದಿ ಬ್ಯಾಗ್ ಪರಿಶೀಲನೆ ನಡೆಸಿದಾಗ ಮೊಬೈಲ್ ಸಿಕ್ಕಿತ್ತು. ಬಂಧಿತರ ವಿಚಾರಣೆ ನಡೆಸಿದಾಗ ಜೈಲಿನೊಳಗೆ ಅಕ್ರಮ ಚಟುವಟಿಕೆ ನಡೆಯುತ್ತಿರುವುದು ಗೊತ್ತಾಗಿತ್ತು. ಆ ಮಾಹಿತಿ ಆಧರಿಸಿ ದಿಢೀರ್ ದಾಳಿ ನಡೆಸಿ ಪರಿಶೀಲಿಸಲಾಯಿತು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಸೋಮವಾರ ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರ ವರೆಗೆ ತಪಾಸಣೆ ನಡೆಸಿದಾಗ ನಿಷೇಧಿತ ವಸ್ತುಗಳು ಪತ್ತೆಯಾಗಿವೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ನಿಷೇಧಿತ ವಸ್ತುಗಳನ್ನು ಯಾರು ಪೂರೈಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಲಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಸಿಗರೇಟು ಹಾಗೂ ಬೀಡಿ ಪೊಟ್ಟಣಗಳು (ಎಡ ಚಿತ್ರ). ಹರಿತವಾದ ಆಯುಧಗಳು

ಹಿಂದೆಯೂ ದಾಳಿ ನಡೆದಿತ್ತು...

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿದ್ದ ವೇಳೆ ಅವರಿಗೆ ವಿಶೇಷ ಆತಿಥ್ಯ ಕಲ್ಪಿಸಿದ್ದ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ವಿಶೇಷ ಆತಿಥ್ಯ ಪ್ರಕರಣದ ಬಳಿಕ (2024ರ ಸೆಪ್ಟೆಂಬರ್ 9) ಸಿಸಿಬಿ ದಾಳಿ ನಡೆಸಿತ್ತು. ಆಗಲೂ ಮೊಬೈಲ್, ಪೆನ್‌ಡ್ರೈವ್, ಚಾಕು ಪತ್ತೆ ಆಗಿದ್ದವು. ಕಳೆದ ಮೇ 25ರಂದು ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಪೊಲೀಸರು ದಾಳಿ ನಡೆಸಿದಾಗ ನಗದು, ಚಾಕು, ಮೊಬೈಲ್ ಹಾಗೂ ಎಲೆಕ್ಟ್ರಿಕ್ ಸ್ಟೌ ಪತ್ತೆ ಆಗಿದ್ದವು.

ಡಿ.ಕೆ.ಸುರೇಶ್‌ಗೆ ಇ.ಡಿ ಸಮನ್ಸ್

ಐಶ್ವರ್ಯಗೌಡ ಚಿನ್ನಾಭರಣ ವಂಚಿಸಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಶ್ವರ್ಯಗೌಡ ಅವರು ₹9.82 ಕೋಟಿ ಮೊತ್ತದ ಚಿನ್ನಾಭರಣ ವಂಚಿಸಿದ ಪ್ರಕರಣದಲ್ಲಿ ಕಾಂಗ್ರೆಸ್‌ನ ಮಾಜಿ ಸಂಸದ ಡಿ.ಕೆ. ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸಮನ್ಸ್ ನೀಡಿದ್ದಾರೆ.

'ಡಿ.ಕೆ.ಸುರೇಶ್ ಅವರ ನಿವಾಸಕ್ಕೆ ಮಂಗಳವಾರ ಮಧ್ಯಾಹ್ನ ತೆರಳಿದ್ದರು. ಆಗ ಸುರೇಶ್ ಅವರು ಮನೆಯಲ್ಲಿ ಇರಲಿಲ್ಲ. ಆದರೆ ಕೆಲವೇ ನಿಮಿಷಗಳಲ್ಲಿ ವಾಪಸಾದರು. ಅವರಿಗೆ ಸಮನ್ಸ್ ನೀಡಿದ ಅಧಿಕಾರಿಗಳು, ಇದೇ 19ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದರು' ಎಂದು ಮೂಲಗಳು ಖಚಿತಪಡಿಸಿವೆ.

'ಐಶ್ವರ್ಯಗೌಡ ಅವರು ಚಿನ್ನ ಮತ್ತು ಹಣ ಹೂಡಿಕೆಗೆ ದುಪ್ಪಟ್ಟು ಲಾಭ ಕೊಡಿಸುತ್ತೇನೆ ಎಂದು ಹೇಳಿ ಹಲವು ಚಿನ್ನಾಭರಣ ವ್ಯಾಪಾರಿಗಳಿಂದ ಚಿನ್ನ ಪಡೆದುಕೊಂಡಿದ್ದರು. ಆದರೆ ಹಣವನ್ನೂ ನೀಡಿಲ್ಲ, ಚಿನ್ನವನ್ನೂ ವಾಪಸ್ ಮಾಡಿಲ್ಲ' ಎಂದು ಕೆಲ ಚಿನ್ನಾಭರಣ ವ್ಯಾಪಾರಿಗಳು ಪೊಲೀಸರಿಗೆ ದೂರು ನೀಡಿದ್ದರು. 'ಹಣ ವಾಪಸ್ ಕೇಳಿದಾಗ, ತಾನು ಡಿ.ಕೆ. ಸುರೇಶ್ ಅವರ ಸೋದರಿ ಎಂದು ಹೇಳಿ ಬೆದರಿಕೆ ಹಾಕಿದ್ದರು' ಎಂದೂ ದೂರಿನಲ್ಲಿ ವಿವರಿಸಿದ್ದರು.

'ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂದು ಡಿ.ಕೆ. ಸುರೇಶ್ ಅವರು ಸಹ ಪೊಲೀಸರಿಗೆ ದೂರು ನೀಡಿದ್ದರು.

ಐಶ್ವರ್ಯಗೌಡ ವಿರುದ್ಧ ದಾಖಲಾಗಿದ್ದ ದೂರಿನ ಸಂಬಂಧ ಇ.ಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ತನಿಖೆಯ ಭಾಗವಾಗಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ, ಕೆಲ ಉದ್ಯಮಿಗಳು ಮತ್ತು ಐಶ್ವರ್ಯ ಅವರ ಮನೆಯಲ್ಲಿ ಇ.ಡಿ ಅಧಿಕಾರಿಗಳು ಈಚೆಗೆ ಶೋಧ ನಡೆಸಿದ್ದರು. ಐಶ್ವರ್ಯ ಅವರ ಮನೆಯಿಂದ ₹2.25 ಕೋಟಿ ನಗದು ವಶಕ್ಕೆ ಪಡೆದಿದ್ದರು.

'ತಮ್ಮಲ್ಲಿ ಹೂಡಿಕೆ ಮಾಡಿದವರು ಹಣವನ್ನು ವಾಪಸ್ ಕೇಳಿದಾಗ ಐಶ್ವರ್ಯ ಅವರು ರಾಜ್ಯದ ಕೆಲ ಪ್ರಭಾವಿ ರಾಜಕಾರಣಿಗಳ ಹೆಸರು ಬಳಸಿಕೊಂಡಿದ್ದಾರೆ. ಕೆಲ ರಾಜಕಾರಣಿಗಳ ಜತೆ ಐಶ್ವರ್ಯ ಸಂಪರ್ಕದಲ್ಲಿ ಇದ್ದುದಕ್ಕೆ ಮತ್ತು ಅವರೊಂದಿಗೆ ಹಣಕಾಸು ವ್ಯವಹಾರ ನಡೆಸಿರುವುದಕ್ಕೆ ಸಾಕ್ಷ್ಯಗಳು ದೊರೆತಿವೆ. ವಂಚನೆಯಲ್ಲಿ ರಾಜಕಾರಣಿಗಳ ಪಾತ್ರ ಇದೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಇ.ಡಿ ಮೂಲಗಳು ತಿಳಿಸಿದ್ದವು.

'ಸೋಮವಾರ ವಿಚಾರಣೆಗೆ ಹೋಗುತ್ತೇನೆ'

ಡಿ.ಕೆ.ಸುರೇಶ್

'ವಿಚಾರಣೆಗೆ ಬನ್ನಿ ಎಂದು ಇ.ಡಿ ಅಧಿಕಾರಿಗಳು ಸಮನ್ಸ್ ನೀಡಿರುವುದು ನಿಜ. ಅವರು ಮಧ್ಯಾಹ್ನ 12.30ಕ್ಕೆ ಮನೆಗೆ ಬಂದಿದ್ದರು. ನಾನು ಮನೆಯಲ್ಲಿ ಇರಲಿಲ್ಲ. ವಾಪಸಾದ ನಂತರ ಅವರನ್ನು ಭೇಟಿ ಮಾಡಿದೆ. ಸಮನ್ಸ್ ನೀಡಿದರು' ಎಂದು ಡಿ.ಕೆ.ಸುರೇಶ್ ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಐಶ್ವರ್ಯಗೌಡ ಪ್ರಕರಣದಲ್ಲಿ ಇದೇ 19ಕ್ಕೆ ವಿಚಾರಣೆಗೆ ಬನ್ನಿ ಎಂದು ಸಮನ್ಸ್‌ನಲ್ಲಿ ಇತ್ತು. ಅಂದು ಪೂರ್ವನಿಗದಿತ ಕಾರ್ಯಕ್ರಮ ಇದ್ದು, ಸೋಮವಾರ ಬರುತ್ತೇನೆ ಎಂದು ತಿಳಿಸಿದ್ದೇನೆ' ಎಂದರು.

'ನನ್ನ ವ್ಯವಹಾರಗಳೆಲ್ಲವೂ ಸಾರ್ವಜನಿಕವಾಗಿಯೇ ಇವೆ. ನನಗೆ ಐಶ್ವರ್ಯಗೌಡ ಪರಿಚಯವಿಲ್ಲ. ಯಾವುದೋ ಒಂದೆರಡು ಕಾರ್ಯಕ್ರಮಗಳಲ್ಲಿ ಭೇಟಿಯಾಗಿರಬಹುದು. ನನ್ನ ತಂಗಿ ಎಂದು ಹೇಳಿಕೊಂಡು ವಂಚಿಸಿದ್ದಾರೆ ಎಂಬ ದೂರು ಇದೆ. ಆ ಬಗ್ಗೆ ನಾನೂ ಸಹ ದೂರು ನೀಡಿದ್ದೇನೆ' ಎಂದರು.

ತನಿಖೆಗೆ ಸಹಕರಿಸುತ್ತೇವೆ– ಡಿಕೆಶಿ

'ಇಡಿ ವಿಚಾರಣೆಗೆ ಡಿ.ಕೆ.ಸುರೇಶ್ ಹಾಜರಾಗಿ ತಮ್ಮ ಹೇಳಿಕೆ ನೀಡಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್

ಐಶ್ವರ್ಯಾ ಗೌಡ ಅವರ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ.ಕೆ. ಸುರೇಶ್ ಅವರಿಗೆ ಇಡಿ ಸಮನ್ಸ್ ನೀಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಸುರೇಶ್ ತಂಗಿ ಎಂದು ಹೇಳಿಕೊಂಡು ಮೋಸ ಮಾಡಿರುವ ಬಗ್ಗೆ ವಂಚನೆಗೆ ಒಳಗಾಗಿರುವ ಮೂರು ನಾಲ್ಕು ಜನರು ನನ್ನ ಬಳಿ ಹೇಳಿದ್ದಾರೆ. ಅಪರಿಚಿತರು ನಮ್ಮ ಹೆಸರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಪೊಲೀಸರಿಗೆ ಸುರೇಶ್ ದೂರು ನೀಡಿದ್ದರು. ಈ ಬಗ್ಗೆ ತನಿಖೆ ನಡೆಸಲು ನಾವೂ ಹೇಳಿದ್ದೇವೆ' ಎಂದರು.

'ಈ ದೇಶದ ಕಾನೂನಿಗೆ, ವಿಚಾರಣೆಗಳಿಗೆ ನಾವು ಗೌರವ ನೀಡುತ್ತೇವೆ. ಮೋಸ ಮಾಡುವ ವ್ಯಕ್ತಿಗಳ ವಿರುದ್ಧದ ತನಿಖೆಗೆ ಸಹಕಾರ ನೀಡಲು ಬದ್ಧರಾಗಿದ್ದೇವೆ' ಎಂದರು.

₹1.80 ಕೋಟಿ ಮುಟ್ಟುಗೋಲು ಹಾಕಿಕೊಂಡ ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ, ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಎರಡು ಬಾರಿ ಪರಿಹಾರ ನೀಡಿದ ಪ್ರಕರಣದಲ್ಲಿ ಇ.ಡಿ ಮಂಗಳವಾರ ₹1.80 ಕೋಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಮಂಡಳಿಯು ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ 2012ರಲ್ಲೇ ಪರಿಹಾರ ಒದಗಿಸಲಾಗಿತ್ತು. ಆದರೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ, 2021–22ನೇ ಆರ್ಥಿಕ ವರ್ಷದಲ್ಲಿ ಹಲವು ಜಮೀನುಗಳಿಗೆ ಎರಡನೇ ಬಾರಿಗೆ ಒಟ್ಟು ₹19.99 ಕೋಟಿ ಪರಿಹಾರ ನೀಡಲಾಗಿತ್ತು. ಈ ಸಂಬಂಧ ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಹಣ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿಕೊಂಡಿದ್ದ ಇ.ಡಿಯು, ಇದೇ ರೀತಿ ಒಟ್ಟು ₹72 ಕೋಟಿಯಷ್ಟು ಅಕ್ರಮ ಎಸಗಲಾಗಿದೆ ಎಂಬುದನ್ನು ಪತ್ತೆ ಮಾಡಿತ್ತು. ಅಕ್ರಮ ನಡೆದ ಅವಧಿಯಲ್ಲಿ ಕೆಐಎಡಿಬಿ ಧಾರವಾಡ ವಿಶೇಷ ಭೂಸ್ವಾಧೀನಾಧಿಕಾರಿ ಆಗಿದ್ದ, ನಿವೃತ್ತ ಅಧಿಕಾರಿ ವಸಂತಕುಮಾರ್ ಸಜ್ಜನ್, ದಲ್ಲಾಳಿ ಮೈಬೂಬ್ ಅಲ್ಲಾಬಕ್ಷ್ ದುಂಡಾಸಿಯನ್ನು ಬಂಧಿಸಿತ್ತು.

'ಈ ಅಕ್ರಮಗಳು ವಸಂತಕುಮಾರ್ ದುರ್ಗಪ್ಪ ಸಜ್ಜನ್ ಅಣತಿಯಂತೆಯೇ ನಡೆದಿವೆ. ಪರಿಹಾರ ಪಡೆದ ನೀಡಿದ ಪ್ರಕರಣಗಳಲ್ಲಿ ಅಕ್ರಮವಾಗಿ ತೆರಿಗೆ ಆದಾಯ ಹಿಂಪಾವತಿ ಪಡೆದಿರುವುದು ಪತ್ತೆಯಾಗಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

'ಕೆಐಎಡಿಬಿ ದಾಖಲೆಗಳಲ್ಲಿ ಇದ್ದ ಇತರರ ಪ್ಯಾನ್ ಬಳಸಿಕೊಂಡು, ಅದರ ಆಧಾರದಲ್ಲಿ ಬ್ಯಾಂಕ್ ಖಾತೆ ತೆರೆಯಲಾಗಿದೆ. ಪರಿಹಾರದ ಮೊತ್ತವನ್ನು ಹಾಗೂ ಆದಾಯ ತೆರಿಗೆ ಹಿಂಪಾವತಿಯನ್ನೂ ಆ ಖಾತೆಗಳಿಗೇ ಪಡೆಯಲಾಗಿದೆ. ಆ ಮೊತ್ತದಲ್ಲಿ ಈಗ ₹1.80 ಕೋಟಿಯಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದು ವಿವರಿಸಿವೆ.

'ಸ್ಮಾರ್ಟ್ ಮೀಟರ್ ಟೆಂಡರ್ ಪ್ರಕ್ರಿಯೆ ಕಾನೂನು ಬಾಹಿರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲಾ ಗ್ರಾಹಕರು ಸ್ಮಾರ್ಟ್ ಮೀಟರ್ ಖರೀದಿಸಲೇಬೇಕು ಎನ್ನುವ ರೀತಿಯಲ್ಲಿ ರೂಪಿಸಲಾಗಿರುವ ಕರಡು ಸಂಪೂರ್ಣ ಗ್ರಾಹಕ ವಿರೋಧಿಯಾಗಿದೆ. ಅಂತೆಯೇ, ಈ ಕುರಿತಾದ ಟೆಂಡರ್ ಪ್ರಕ್ರಿಯೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ನಿಯಮಗಳಿಗೆ ಅನುಗುಣವಾಗಿ ನಡೆದಿಲ್ಲ' ಎಂದು ಅರ್ಜಿದಾರರ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದ್ದಾರೆ.

'ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ಬೆಸ್ಕಾಂ ಹೊರಡಿಸಿರುವ ಸುತ್ತೋಲೆಯನ್ನು ರದ್ದುಪಡಿಸಬೇಕು ಹಾಗೂ ದಾವಣಗೆರೆಯ ರಾಜಶ್ರೀ ಎಲೆಕ್ಟ್ರಿಕಲ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಸ್ಮಾರ್ಟ್ ಮೀಟರ್‌ಗಳ ಮಾರಾಟ ಮತ್ತು ನಿರ್ವಹಣೆ ಟೆಂಡರ್ ನೀಡಿರುವುದು ಕಾನೂನು ಬಾಹಿರ' ಎಂದು ಆಕ್ಷೇಪಿಸಲಾದ ಮೂರು ರಿಟ್ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರಾದ ಲಕ್ಷ್ಮಿ ಅಯ್ಯಂಗಾರ್, 'ಬೇರೆ ರಾಜ್ಯಗಳಲ್ಲಿ ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್‌ಗೆ ₹900 ಇದೆ. ಆದರೆ, ರಾಜ್ಯದಲ್ಲಿ ಸಿಂಗಲ್ ಫೇಸ್ ಮೀಟರ್‌ಗೆ ₹5,000 ನಿಗದಿಪಡಿಸಲಾಗಿದೆ. ಎಲೆಕ್ಟ್ರಿಕ್ ಸ್ಕೂಟರ್ ಚಾರ್ಜಿಂಗ್ ಮಾಡಲು ಅಗತ್ಯವಾದ ಮೂರು ಫೇಸ್ ಮೀಟರ್‌ಗೆ ₹8,000 ಪಾವತಿಸಬೇಕಿದೆ' ಎಂದರು.

'ಕೇಂದ್ರ ಸರ್ಕಾರ, ರೀ–ಮ್ಯಾಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಸ್ಕೀಂ (ಆರ್‌ಡಿಎಸ್‌ಎಸ್) ಯೋಜನೆ ರೂಪಿಸಿದೆ. ಆದರೆ, ರಾಜ್ಯ ಸರ್ಕಾರ ಇದನ್ನೆಲ್ಲಾ ಅಲಕ್ಷಿಸಿ ಕೇಂದ್ರದ ಅನುಮೋದನೆ ಪಡೆಯದೆ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮುಂದಾಗಿದೆ ಮತ್ತು ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ಲಾಭ ಮಾಡಿಕೊಡಲು ಈ ಟೆಂಡರ್ ನಡೆಸಲಾಗಿದೆ' ಎಂದು ಆರೋಪಿಸಿದರು.

ರಾಜಶ್ರೀ ಎಲೆಕ್ಟ್ರಿಕಲ್ಸ್ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಅರ್ಜಿದಾರರು ವಿವರಿಸುತ್ತಿರುವ ಅಂಶಗಳ ಆಧಾರದ ಏಕರೂಪದ ಕೋರಿಕೆಗಳನ್ನು ಒಳಗೊಂಡ ಬೇರೆ ಅರ್ಜಿಗಳು ಏಕಸದಸ್ಯ ನ್ಯಾಯಪೀಠದ ಮುಂದಿವೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಬೆಸ್ಕಾಂ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಉದಯ್ ಹೊಳ್ಳ ಅವರು ಅರ್ಜಿಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲಾಗುವುದು ಎಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ನಾಲ್ಕು ವಾರ ವಿಚಾರಣೆ ಮುಂದೂಡಿತು.

ಟೆಂಡರ್ ಆಕ್ಷೇಪಿಸಿ, 'ಕರ್ನಾಟಕ ವಿದ್ಯುತ್ ಸೇನೆ' ಅಧ್ಯಕ್ಷ ಬಿ.ಜಯಪ್ರಕಾಶ್ ಮತ್ತು ಆರು ಜನರು, ರಾಮಚಂದ್ರ ಆರ್. ಅನವೇರಿ ಮತ್ತು ಎನ್.ಜಯಪಾಲ ಹಾಗೂ ಮುನಿಸ್ವಾಮಿಗೌಡ ಪ್ರತ್ಯೇಕವಾಗಿ ಈ ಅರ್ಜಿ ಸಲ್ಲಿಸಿದ್ದಾರೆ.

ಮುಚ್ಚಿದ ಲಕೋಟೆ ವರದಿಗೆ ಆಕ್ಷೇಪ

ಚಿನ್ನಸ್ವಾಮಿ ಕ್ರೀಡಾಂಗಣ ಬಳಿ 11 ಜನ ಮೃತಪಟ್ಟ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟಿರುವುದಕ್ಕೆ ಸಂಬಂಧಿಸಿದ ವಸ್ತುಸ್ಥಿತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸುತ್ತಿರುವ ಸರ್ಕಾರದ ನಡೆಗೆ ಪ್ರಕರಣದ ಮಧ್ಯಂತರ ಅರ್ಜಿದಾರರ ಪರ ಹಿರಿಯ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ಮುಂದುವರಿಸಿತು.

ಅಂತೆಯೇ, ಈ ಅರ್ಜಿಯಲ್ಲಿ ಮಧ್ಯಂತರ ಅರ್ಜಿದಾರರಾಗಲು ಬಯಸಿರುವ ಘಟನೆಯಲ್ಲಿ ಮೃತಪಟ್ಟ 19 ವರ್ಷದ ವಿದ್ಯಾರ್ಥಿ ಜಿ.ಪ್ರಜ್ವಲ್ ಅವರ ತಂದೆ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು, 'ಸಾರ್ವಜನಿಕರ ಹಿತದೃಷ್ಟಿಯಿಂದ ವರದಿಯಲ್ಲಿನ ಅಂಶ ಬಹಿರಂಗವಾಗಬೇಕು. ಸರ್ಕಾರ ಯಾವ ಮಾಹಿತಿಯನ್ನೂ ಮುಚ್ಚಿಡಬಾರದು. ಸರ್ಕಾರ ಒಂದು ವೇಳೆ ಕೋರ್ಟ್‌ಗೆ ಸಂಪೂರ್ಣ ತಪ್ಪು ವರದಿ ನೀಡಿದರೂ ಅದು ಯಾರಿಗೂ ತಿಳಿಯುವುದಿಲ್ಲ' ಎಂದು ಆಕ್ಷೇಪಿಸಿದರು.

'ಸರ್ಕಾರ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯಲ್ಲಿ ಸರ್ಕಾರ ಪಾರದರ್ಶಕ ನಡೆ ಪ್ರದರ್ಶಿಸಬೇಕು. ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅನುಸರಿಸಬೇಕು. ಮಾಹಿತಿ ಹಕ್ಕನ್ನು ಗೌರವಿಸಬೇಕು. ಇಲಿ, ಬೆಕ್ಕಿನ ಆಟ ಆಡುವುದು ಸರಿಯಲ್ಲ' ಎಂದು ಪ್ರತಿಪಾದಿಸಿ, 'ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸುವುದು ಸರಿಯಲ್ಲ' ಎಂಬ ಸುಪ್ರೀಂ ಕೋರ್ಟ್ ತೀರ್ಪಿನ ಪೂರ್ವ ನಿದರ್ಶನವೊಂದನ್ನು ನ್ಯಾಯಪೀಠಕ್ಕೆ ತಿಳಿಸಿದರು.

ಇದೇ ಆಗ್ರಹಕ್ಕೆ ಮಧ್ಯಂತರ ಅರ್ಜಿದಾರರಾಗಲು ಬಯಸಿರುವ ಇತರ ಅರ್ಜಿದಾರರ ಪರ ವಕೀಲರೂ ದನಿಗೂಡಿಸಿ, 'ಸರ್ಕಾರ ವರದಿ ಬಹಿರಂಗಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಕೆಎಸ್‌ಸಿಎ, ಆರ್‌ಸಿಬಿಗೆ ನೋಟಿಸ್

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮುಚ್ಚಿದ ಲಕೋಟೆಯಲ್ಲಿನ ವಿವರಗಳನ್ನು ಮಧ್ಯಂತರ ಅರ್ಜಿದಾರರಾಗಲು ಬಯಸಿರುವವರಿಗೂ ಒದಗಿಸಬೇಕು' ಎಂಬ ಮನವಿಗೆ ಸಂಬಂಧಿಸಿದಂತೆ ಯಾವುದೇ ತೀರ್ಮಾನವನ್ನು ಪ್ರಕಟಿಸಲಿಲ್ಲ.

'ಈ ಪ್ರಕರಣದಲ್ಲಿ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಅಗತ್ಯವಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತಲ್ಲದೆ, ಕೆಎಸ್‌ಸಿಎ, ಆರ್‌ಸಿಬಿ ಮತ್ತು ಡಿಎನ್‌ಎಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಇದೇ 23ಕ್ಕೆ ವಿಚಾರಣೆ ಮುಂದೂಡಿತು.

ಮೈಸೂರು ರೇಸ್

ವಂದಿಯಾಥೇವನ್ ಗೆಲ್ಲುವ ನಿರೀಕ್ಷೆ

ಷೆವಾಲಿಯರ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಂದಿಯಾಥೇವನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಡಿ ಅಡ್ಮಿರಲ್ 3, ಎಗೆನ್ಸ್ಟ್ ಆಲ್ ಆಡ್ಸ್ 1, ಧುರಂದರ್ 4
2. ಕೋಡ್ ಆಫ್ ಹಾನರ್ 3, ಆಬ್ಸಲ್ಯೂಟ್ ಕಾಂಕ್ವರರ್ 1, ಗೋಲ್ಡನ್ ಸನ್‌ರೈಸ್ 4
3. ಕ್ರಿಶ್ವಿ 3, ಸಮರ್ಥ್ 11, ಟೂ ಹಾಟ್ ಟು ಟಚ್ 2
4. ವಾಲ್ಟರ್ 1, ಚಾಯ್ಸ್ 3, ಆಬ್ಸೋಲ್ಯೂಟ್ ಕೇಸರಿ 2
5. ಫಾಲ್ಕನ್ ಫ್ಯೂರಿ 2, ಮ್ಯಾಜಿಕಲ್ ಬೇ 1, ಕಾಸ್ಮಿಕ್ ಟಚ್ 4
6. ವಂದಿಯಾಥೇವನ್ 1, ಶೆರ್ಪಾ 6, ಸೆರ್ದಾರ್ 10
7. ರೈಸ್ ಅಂಡ್ ರೀನ್ 2, ವಿಂಟರ್ ಅಜೆಂಡ 7, ಸೀ ದಿ ಸನ್ 4
8. ಶೀಬಾ 9, ಮ್ಯಾಪಲ್ ಲೀಫ್ 6, ಗ್ರೇಸ್ 2

ಉತ್ತಮ ಬೆಟ್: ವಾಲ್ಟರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಎಸ್‌ಐಟಿ ರದ್ದು: ಎಚ್‌ಡಿಕೆ ಅರ್ಜಿ

ಬೆಂಗಳೂರು: ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಮೀನಿನ ಮಾಲೀಕತ್ವ ಕುರಿತಂತೆ ವಿಚಾರಣೆ ನಡೆಸಲು ತನಿಖಾ ತಂಡ (ಎಸ್‌ಐಟಿ) ರಚಿಸಿರುವ ಆದೇಶ ರದ್ದುಪಡಿಸುವಂತೆ ಕೋರಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

'ಎಸ್‌ಐಟಿ ರಚಿಸಿ ಆದೇಶ ಹೊರಡಿಸಿದ ಬಳಿಕ ಅಧಿಸೂಚನೆ ಹೊರಡಿಸಿಲ್ಲ. ಹೀಗಾಗಿ, ಇದರ ಭಾಗವಾಗಿ ಕೈಗೊಂಡಿರುವ ಕ್ರಮಗಳು ಕಾನೂನ ಬಾಹಿರವಾಗಿವೆ' ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಕೆಪಿಎಸ್‌ಸಿ ಕಾರ್ಯದರ್ಶಿಯಾಗಿ ಜಾನಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿ ಜಾನಕಿ ಕೆ.ಎಂ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಇವರ ಜತೆಗೆ, ಒಟ್ಟು 16 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಸತ್ಯಭಾಮಾ – ಯೋಜನಾ ನಿರ್ದೇಶಕಿ, ರಾಜ್ಯ ಸಮಗ್ರ ಶಿಕ್ಷಣ. ಲತಾಕುಮಾರಿ ಕೆ.ಎಸ್– ಜಿಲ್ಲಾಧಿಕಾರಿ, ಹಾಸನ. ಸ್ವರೂಪ ಟಿ.ಕೆ– ಜಿಲ್ಲಾಧಿಕಾರಿ, ಉಡುಪಿ. ಅವಿನಾಶ್ ಮೆನನ್ ರಾಜೇಂದ್ರನ್– ನಿರ್ದೇಶಕ, ನ್ಯಾಷನಲ್ ಹೆಲ್ತ್ ಮಿಷನ್ ನಿರ್ದೇಶನಾಲಯ. ಮುಲ್ಲೈ ಮುಹಿಲನ್ ಎಂ.ಪಿ– ಆಯುಕ್ತ, ನೋಂದಣಿ ಮತ್ತು ಮುದ್ರಾಂಕ ಇಲಾಖೆ. ನಳಿನಿ ಅತುಲ್– ಕಾರ್ಯದರ್ಶಿ, ಕೆಕೆಆರ್‌ಡಿಬಿ, ಕಲಬುರ್ಗಿ.

ದರ್ಶನ್ ಎಚ್.ವಿ– ಜಿಲ್ಲಾಧಿಕಾರಿ, ದಕ್ಷಿಣಕನ್ನಡ. ಸಂಗಪ್ಪ– ಜಿಲ್ಲಾಧಿಕಾರಿ, ಬಾಗಲಕೋಟೆ. ಸುರೇಶ್ ಬಿ. ಇಟ್ನಾಳ– ಜಿಲ್ಲಾಧಿಕಾರಿ, ಕೊಪ್ಪಳ. ನವೀನ್ ಭಟ್ ವೈ– ಸಿಇಒ, ಜಿಲ್ಲಾಪಂಚಾಯಿತಿ. ಚಿಕ್ಕಬಳ್ಳಾಪುರ, ಗರಿಮಾ ಪನ್ವಾರ್– ವ್ಯವಸ್ಥಾಪಕ ನಿರ್ದೇಶಕಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ. ರಾಹುಲ್ ರತ್ನಂ ಪಾಂಡೆ– ಕಾರ್ಯನಿರ್ವಾಹಕ ನಿರ್ದೇಶಕ, ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್. ಪ್ರಕಾಶ್ ಜಿ.ಟಿ ನಿಟ್ಟಾಲಿ– ನಿರ್ದೇಶಕ, ಶಿಕ್ಷಣ ಇಲಾಖೆ (ಬಿಸಿಯೂಟ). ವರ್ನಿತ್ ನೇಗಿ– ಸಿಇಒ, ಜಿಲ್ಲಾಪಂಚಾಯಿತಿ, ಕಲಬುರಗಿ. ಗಿಟ್ಟೆ ಮಾಧವ್ ವಿಠಲರಾವ್–ಸಿಇಒ, ಜಿಲ್ಲಾಪಂಚಾಯಿತಿ, ದಾವಣಗೆರೆ.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಅವರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹುದ್ದೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಅಧ್ಯಕ್ಷ ಬಸವರಾಜೇಂದ್ರ ಎಚ್ ಅವರಿಗೆ ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ಇದರ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

5.15 ಲಕ್ಷ ಮಂದಿಗೆ ಸ್ಪಂದನೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆರಂಭಿಸಿದ 'ಕೆಇಎ ಬಾಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆರಂಭಿಸಿರುವ 'ಕೆಇಎ ಬಾಟ್' ಕೇವಲ ನೂರು ದಿನಗಳಲ್ಲಿ ವಿದ್ಯಾರ್ಥಿಗಳು, ಪೋಷಕರಿಂದ 5.15 ಲಕ್ಷ ಪ್ರಶ್ನೆಗಳನ್ನು ಎದುರಿಸಿದ್ದು, ಅಷ್ಟಕ್ಕೂ ಉತ್ತರಿಸಲಾಗಿದೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ವಿವಿಧ ನೇಮಕಾತಿ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಲಿಖಿತ ಪರೀಕ್ಷೆ ಮತ್ತು ಸೀಟು ಹಂಚಿಕೆ ಪ್ರಕ್ರಿಯೆ ನಡೆಸುವ ಕೆಇಎ, ಅಭ್ಯರ್ಥಿಗಳು ಮತ್ತು ಪೋಷಕರಿಗೆ ಅಗತ್ಯವಾದ ಮಾಹಿತಿಯನ್ನು ಒದಗಿಸುತ್ತಿದೆ. ತಂತ್ರಜ್ಞಾನದ ನೆರವಿನಿಂದ ವಿದ್ಯಾರ್ಥಿಗಳು, ಪೋಷಕರ ಪ್ರಶ್ನೆಗಳಿಗೆ ಯಾರ ಮಧ್ಯಸ್ಥಿಕೆ ಇಲ್ಲದೆ ಉತ್ತರ ಪಡೆಯುವ ಈ ವ್ಯವಸ್ಥೆಯನ್ನು ಮಾರ್ಚ್ ತಿಂಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿತ್ತು.

'ಆರಂಭದಲ್ಲಿ ಇಂಗ್ಲಿಷ್‌ನಲ್ಲಿ ಉತ್ತರಿಸುತ್ತಿದ್ದ ಬಾಟ್, ಈಗ ಕನ್ನಡದಲ್ಲಿ ಕೇಳುವ ಪ್ರಶ್ನೆಗಳಿಗೂ ಉತ್ತರಿಸುತ್ತಿದೆ. ನಿತ್ಯವೂ ಅದಕ್ಕೆ ಮಾಹಿತಿ ನೀಡುವ ಕೆಲಸವನ್ನು ಕೆಇಎ ತಂಡ ಮಾಡುತ್ತಿದ್ದು, ಯಾರು ಏನೇ ಕೇಳಿದರೂ ಉತ್ತರಿಸುವ ಕೆಲಸ ಮಾಡುತ್ತಿದೆ. ಸಂಬಂಧ ಇಲ್ಲದ ಪ್ರಶ್ನೆ ಕೇಳಿದರೆ 'ತನ್ನ ವ್ಯಾಪ್ತಿಯಲ್ಲಿ ಇಲ್ಲ' ಎಂದೂ ಪ್ರತ್ಯುತ್ತರ ನೀಡುತ್ತದೆ' ಎಂದು ಪ್ರಸನ್ನ ತಿಳಿಸಿದರು.

> ಇತರರ ಮಾತು ಕೇಳಿ ಮೋಸ ಹೋಗುವುದರ ಬದಲು ಕೆಇಎ ಅಧಿಕೃತ ಸಾಮಾಜಿಕ ಜಾಲ ತಾಣಗಳನ್ನು ಫಾಲೊ ಮಾಡಿ, ತಾಜಾ ಮಾಹಿತಿ ಪಡೆಯಬಹುದು
>
> **ಎಚ್. ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

'ಮೊದಲ ದಿನ ಕೇವಲ 102 ಆಸಕ್ತರು ಕೆಇಎ ಚಾಟ್ ಬಾಟ್‌ಗೆ ಪ್ರಶ್ನೆ ಕೇಳಿ ಉತ್ತರ ಪಡೆದಿದ್ದರು. ಜೂನ್ 11ರಂದು ಈವರೆಗಿನ ಅತಿ ಹೆಚ್ಚು ಅಂದರೆ 35,369 ಮಂದಿ ಪ್ರಶ್ನೆ ಕೇಳಿ ಮಾಹಿತಿ ಪಡೆದಿದ್ದಾರೆ. ಜೂನ್ 12ರಂದು 34,414, ಜೂನ್ 13ರಂದು 23,122, ಜೂನ್ 14ರಂದು 28,082 ಮಂದಿ, ಜೂನ್ 15ರಂದು 18,294 ಮತ್ತು ಜೂನ್ 16ರಂದು 16,287 ಮಂದಿ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದಿದ್ದಾರೆ' ಎಂದು ಅವರು ವಿವರಿಸಿದರು.

'ಕೇಳಿರುವ ಪ್ರಶ್ನೆಗಳ ಪೈಕಿ ಕಳೆದ ವರ್ಷದ ಕಟ್ ಆಫ್ ರ‍್ಯಾಂಕ್ ಕುರಿತ ಪ್ರಶ್ನೆಗಳೇ ಅಧಿಕ. ಇದುವರೆಗೂ 2.7 ಲಕ್ಷ ಮಂದಿ ಕಟ್ ಆಫ್ ರ‍್ಯಾಂಕ್ ಕುರಿತು ಪ್ರಶ್ನೆ ಕೇಳಿ ಉತ್ತರ ಪಡೆದಿದ್ದಾರೆ. ಅಲ್ಲದೆ, ಪ್ರವೇಶಾತಿ, ಅರ್ಹತೆ, ಪರೀಕ್ಷಾ ವೇಳಾಪಟ್ಟಿ, ಮುಖ್ಯವಾದ ದಿನಾಂಕಗಳು, ಪ್ರವೇಶಪತ್ರ ಇತ್ಯಾದಿಗಳ ಡೌನ್‌ಲೋಡ್, ಹೊಸ ಪ್ರಕಟಣೆಗಳು, ನೇಮಕಾತಿ ಮುಂತಾದವುಗಳನ್ನು ತಿಳಿದುಕೊಳ್ಳಲು ಚಾಟ್-ಬಾಟ್ ಬಳಸುತ್ತಿದ್ದಾರೆ. ಕೆಲವು ಸಂದರ್ಭದಲ್ಲಿ ಸರಿಯಾಗಿ ಉತ್ತರ ನೀಡದಿದ್ದಾಗ ಅದನ್ನು ಗಮನಿಸಿ, ಸರಿ ಮಾಡುವ ಕೆಲಸವೂ ಆಗುತ್ತಿದೆ' ಎಂದಿದ್ದಾರೆ.

'ಸದ್ಯ ಸಿಇಟಿ, ನೀಟ್ ರ‍್ಯಾಂಕ್ ಪ್ರಕಟವಾಗಿದ್ದು, ಅದನ್ನು ಆಧಾರವಾಗಿ ಇಟ್ಟುಕೊಂಡು ಕಳೆದ ವರ್ಷ ಯಾವ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು ಎನ್ನುವುದನ್ನೂ ಬಾಟ್ ಮೂಲಕ ಸುಲಭವಾಗಿ ಪಡೆಯಬಹುದು. ವಿದ್ಯಾರ್ಥಿಗಳು ತಮಗೆ ಯಾವ ಕಾಲೇಜಿನಲ್ಲಿ ಸೀಟು ಸಿಗಬಹುದು ಎಂಬುದರ ಅಂದಾಜು ಇದರಿಂದ ಮಾಡಬಹುದು' ಎಂದು ಪ್ರಸನ್ನ ಹೇಳಿದ್ದಾರೆ.

'ಕೆಇಎ ವಿಕಸನ' ಯೂಟ್ಯೂಬ್ ಚಾನಲ್

'ಅಭ್ಯರ್ಥಿಗಳಿಗೆ ಮಾಹಿತಿ ನೀಡಲು ಚಾಟ್-ಬಾಟ್ ಜೊತೆಗೆ ಕೆಇಎ ವಿಕಸನ' ಎಂಬ ಯೂಟ್ಯೂಬ್ ಚಾನಲ್ ಕೂಡ ಆರಂಭಿಸಲಾಗಿದೆ. ಇದರಲ್ಲಿ ಅಪ್ ಲೋಡ್ ಮಾಡುವ ವಿಡಿಯೊಗಳನ್ನು ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಿಸುತ್ತಿದ್ದಾರೆ. 48 ಸಾವಿರ ಮಂದಿ ಚಂದಾದಾರರಾಗಿದ್ದಾರೆ' ಎಂದು ಪ್ರಸನ್ನ ತಿಳಿಸಿದ್ದಾರೆ.

ಕೆಇಎ ಎಕ್ಸ್ (ಟ್ವಿಟರ್): 'ಕೆಇಎ ಎಕ್ಸ್ (@KEA_karnataka) ಸಾಮಾಜಿಕ ಜಾಲತಾಣ ಕೂಡಾ ಜನಪ್ರಿಯವಾಗಿದ್ದು, 35,700 ಮಂದಿ ಚಂದಾದಾರರಾಗಿದ್ದಾರೆ' ಎಂದೂ ತಿಳಿಸಿದ್ದಾರೆ.

ಟೇಬಲ್ ಟೆನಿಸ್ ನೋಂದಣಿಗೆ ಸೂಚನೆ

ಬೆಂಗಳೂರು: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್ ವತಿಯಿಂದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ ಇದೇ 25ರಿಂದ 29ರವರೆಗೆ ನಡೆಸಲಾಗುತ್ತದೆ.

11, 13, 15, 17 ಮತ್ತು 19 ವರ್ಷ ವಯೋಮಿತಿಯ ಬಾಲಕ/ಬಾಲಕಿಯರ ವಿಭಾಗ, ಪುರುಷರ ಹಾಗೂ ಮಹಿಳೆಯರ ವಿಭಾಗ ಮತ್ತು ಎನ್‌ಎಂಎಸ್ ಮತ್ತು ಎನ್‌ಎಂಡಿ ವಿಭಾಗಗಳಲ್ಲಿ ಸ್ಪರ್ಧೆ ನಡೆಸಲಾಗುತ್ತದೆ. ಆಸಕ್ತರು ಇದೇ 21ರ ರಾತ್ರಿ 8 ಗಂಟೆಯೊಳಗೆ ನೋಂದಣಿ ಮಾಡಿಕೊಳ್ಳಬೇಕು.

ವಿವರಗಳಿಗೆ ವೆಬ್‌ಸೈಟ್: http:karnataka tabletennis.web.app

ಚಾಲಕ ಕಂ ನಿರ್ವಾಹಕರಿಗೆ ನೇಮಕಾತಿ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಹೊಸದಾಗಿ ನೇಮಕಗೊಂಡ ಎರಡು ಸಾವಿರ ಚಾಲಕ-ಕಂ-ನಿರ್ವಾಹಕರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮಂಗಳವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿದರು.

ನಂತರ ಮಾತನಾಡಿದ ಅವರು, 'ಹೊಸದಾಗಿ ನೇಮಕಗೊಂಡ ಸಿಬ್ಬಂದಿ ಸಂಸ್ಥೆಯನ್ನು ಉಳಿಸಿ, ಬೆಳೆಸುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಪ್ರಯಾಣಿಕರೊಂದಿಗೆ ಅದರಲ್ಲೂ ಮಹಿಳೆಯರು ಹಾಗೂ ವಿದ್ಯಾರ್ಥಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಅಪಘಾತಗಳು ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಸೂಚಿಸಿದರು.

ನಿಗಮದ ಅಧ್ಯಕ್ಷ ಎಸ್. ಆರ್. ಶ್ರೀನಿವಾಸ್ ಮಾತನಾಡಿ, 'ಕೆಎಸ್‌ಆರ್‌ಟಿಸಿಯಲ್ಲಿ 8 ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದಿರಲಿಲ್ಲ. ರಾಮಲಿಂಗಾರೆಡ್ಡಿ ಅವರು ಈ ಪ್ರಕ್ರಿಯೆಗೆ ಚಾಲನೆ ನೀಡಿದ್ದು, ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆದಿದೆ. ಜತೆಗೆ ಅಂಕಗಳ ಆಧಾರದ ಮೇಲೆ ಘಟಕಗಳಿಗೆ ಇವರನ್ನು ನಿಯೋಜಿಸಲಾಗಿದೆ' ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ, ನಿರ್ದೇಶಕಿ ನಂದಿನಿ ದೇವಿ ಕೆ. ಉಪಸ್ಥಿತರಿದ್ದರು.

ರಾಮಲಿಂಗಾರೆಡ್ಡಿ ಅವರು ಸಾಂಕೇತಿಕವಾಗಿ 51 ಅಭ್ಯರ್ಥಿಗಳಿಗೆ ಚಾಲಕ ಕಂ ನಿರ್ವಾಹಕ ನೇಮಕಾತಿ ಆದೇಶ ಪತ್ರ ವಿತರಿಸಿದರು. ಎಸ್. ಆರ್. ಶ್ರೀನಿವಾಸ್, ನಿಗಮದ ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ವಿದ್ಯಾರ್ಥಿಗಳ ರಂಗ ತರಬೇತಿ ಶಿಬಿರದ ಉದ್ಘಾಟನೆ: ಗೌತಮ್ ಅ.ನ.ಕೃ., ಅಧ್ಯಕ್ಷತೆ: ಬಿ.ಎಂ. ಪಟೇಲ್‌ಪಾಂಡು, ಅತಿಥಿಗಳು: ಬಿ.ಪಿ. ಹರ್ಷ, ಹನುಮಂತರಾಯಿ, ಚಿಕ್ಕಮ್ಮ ಕೆ.ಬಿ., ರಾಹುಲ್ ಕೆ.ಎಂ., ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಎಸ್.ಪಿ.ಜಿ. ಪದವಿಪೂರ್ವ ಕಾಲೇಜು, ಜ್ಞಾನಕಾಶಿ, ಮುನೇಶ್ವರ ಬ್ಲಾಕ್, ಆವಲಹಳ್ಳಿ, ಮೈಸೂರು ರಸ್ತೆ, ಬೆಳಿಗ್ಗೆ 10

'ಮಿಲೆಟ್‌ಮ್ಯಾನ್' ಪಿ.ವಿ. ಸತೀಶ್-ಒಂದು ಸ್ಮರಣೆ: ಆಯೋಜನೆ: ದಿ ಗ್ರೀನ್ ಪಾತ್, ಇಕ್ರಾ, ಪೃಥ್ವಿ ಪ್ರತಿಷ್ಠಾನ, ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 10.30

ವಿಶ್ವ ರಕ್ತದಾನಿಗಳ ದಿನಾಚರಣೆ: ಉದ್ಘಾಟನೆ: ಗೋಪಾಲ್ ಬಿ. ಹೊಸೂರ್, ಅಧ್ಯಕ್ಷತೆ: ಪ್ರೇಮಾ ಸಿದ್ಧರಾಜು, ಅತಿಥಿಗಳು: ಪ್ರತಾಪ್ ಲಿಂಗಯ್ಯ, ಎಸ್.ವಿ. ರಾಜೇಂದ್ರ ಪ್ರಸಾದ್, ಪ್ರಭುದೇವ್ ಕಲ್ಮಠ್, ಎಸ್.ಆರ್. ವೀರಭದ್ರಯ್ಯ, ಆಯೋಜನೆ: ಕರ್ನಾಟಕ ವಿದ್ಯಾರ್ಥಿ ಕೂಟ ಟ್ರಸ್ಟ್, ಸ್ಥಳ: ಎಸ್.ಜೆ.ಆರ್. ಮಹಿಳಾ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ

'ಚಂಪಾ ಸಿರಿಗನ್ನಡ' ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಸ್ವೀಕರಿಸುವವರು: ಅಶೋಕ ಚಂದರಗಿ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಸಿ.ಕೆ. ರಾಮೇಗೌಡ, ಮೀನಾ ಪಾಟೀಲ, ಪ್ರಾಸ್ತಾವಿಕ ನುಡಿ: ಶಂಕರ್ ಹೂಗಾರ, ಆಯೋಜನೆ: ಕರ್ನಾಟಕ ಸ್ವಾಭಿಮಾನಿ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30ರಿಂದ

ನಾಡಪ್ರಭು ಕೆಂಪೇಗೌಡರ ಜಯಂತಿ: ಉದ್ಘಾಟನೆ: ನಿಶ್ಚಲಾನಂದನಾಥ ಸ್ವಾಮೀಜಿ, ಅತಿಥಿಗಳು: ವಿ. ಸೋಮಣ್ಣ, ವೂಡೇ ಪಿ. ಕೃಷ್ಣ, ಆರ್. ಸಂಪತ್ ಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣಾ ಪರಿಷತ್, ಸ್ಥಳ: ಎನ್‌ಜಿಒ ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಮಾಸದ ಮಾತು 'ಬೆಂಗಳೂರಿನಲ್ಲಿ ಕನ್ನಡ ಉಳಿದರೆ, ಇಡೀ ಕರ್ನಾಟಕದಲ್ಲಿ ಕನ್ನಡ ಉಳಿಯುತ್ತದೆ' ಉಪನ್ಯಾಸ: ಎಂ. ಪ್ರಕಾಶಮೂರ್ತಿ, ಅತಿಥಿ: ಕೆ.ಎಸ್. ಸಿದ್ಧರಾಜು, ಉಪಸ್ಥಿತಿ: ಶಶಿಕುಮಾರ್ ಕೆ., ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ವಿಮಾನಪುರ, ಮಧ್ಯಾಹ್ನ 3.30

ವಿಶಾಲಕ್ಷಮ್ಮ, ಬಿ.ಎಸ್. ಶಾಮಣ್ಣ ಸ್ಮರಣಾರ್ಥ ದತ್ತಿ 'ಕನ್ನಡ ಸಾಹಿತ್ಯ ಇತ್ತೀಚಿನ ಬೆಳವಣಿಗೆ' ಉಪನ್ಯಾಸ: ಆರ್. ಶೇಷಾಶಾಸ್ತ್ರಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 5

ಯುವ ಸಂಗೀತೋತ್ಸವ: ಉದ್ಘಾಟನೆ: ಎಂ.ವಿ. ಸತ್ಯನಾರಾಯಣ, ಅತಿಥಿ: ಎಸ್.ಸಿ. ಶರ್ಮಾ, ವೀಣೆ: ವಿನಾಯಕ್ ವೈದ್ಯನಾಥನ್, ಮೃದಂಗ: ಕೌಶಿಕ್ ಶ್ರೀಧರ್, ಘಟ: ಸಮರ್ಥ ರಘುನಂದನ್, ಗಾಯನ: ಅಕ್ಷತಾ ರುದ್ರಪಟ್ಟಣ, ಪಿಟೀಲು: ಶ್ರುತಿ ಸಿ.ವಿ., ಮೃದಂಗ: ಪ್ರಣವ್ ಸುಬ್ರಮಣ್ಯ, ಖಂಜೀರಾ: ಸುಮುಖ್ ಕಾರಂತ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30ರಿಂದ

ಡಾ.ಎಚ್.ಎಸ್. ವೆಂಕಟೇಶಮೂರ್ತಿ (ಎಚ್ಚೆಸ್ವಿ) ಸ್ಮರಣೆ: ಎಚ್ಚೆಸ್ವಿ ಅವರ ಗೀತಗಾಯನ: ಉಪಾಸನಾ ಮೋಹನ್, 'ಎಚ್ಚೆಸ್ವಿಯವರ ಸಾಹಿತ್ಯಕ ಕೊಡುಗೆ- ಒಂದು ಅವಲೋಕನ', 'ಎಚ್ಚೆಸ್ವಿಯವರ ಗದ್ಯ ಸಾಹಿತ್ಯದ ನೆಲೆಗಳು': ಚಿಂತಾಮಣಿ ಕೊಡ್ಲೆಕೆರೆ, 'ಎಚ್ಚೆಸ್ವಿಯವರೊಂದಿಗೆ ಒಡನಾಟದ ನೆನಪುಗಳು': ಎಂ.ಆರ್. ಕಮಲಾ, 'ಎಚ್ಚೆಸ್ವಿಯವರಿಗೆ' ನುಡಿನಮನ, ಆಯೋಜನೆ: ಸಂಸ್ಕೃತಿ ಸಂಭ್ರಮ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6ರಿಂದ

ಶ್ರೀಚರಿತಾ

ಕಥಕ್ ರಂಗಮಂಚ್ ಪ್ರವೇಶ: ಪ್ರಸ್ತುತಿ: ಶ್ರೀಚರಿತಾ ಚೇತನ್ ಗಂಗಟ್ಕರ್, ಅತಿಥಿ: ದುರ್ಗಾ ಆರ್ಯ, ಶುಭಾ ಧನಂಜಯ, ಸುಪರ್ಣಾ ವೆಂಕಟೇಶ್, ಸತ್ಯನಾರಾಯಣ ರಾಜು, ಸಾಯಿ ವೆಂಕಟೇಶ್, ಚೇತನ್, ಚಂದ್ರಪ್ರಭಾ, ಆಯೋಜನೆ: ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.15

'ಮನೆ ಮನೆ ಕಥೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನಗರಸಭಾ ಕಾರ್ಯಾಲಯ, ಕನಕಪುರ

ದೂ : 080–27522428. ಇ–ಮೇಲ್: ka.kanakapuracmc@gmail.com
ವೆಬ್‌ಸೈಟ್: http://www.kanakapuracity.mrc.gov.in

ಸಂ: ಕನಸ/ಆ.ಶಾ/ಘ.ವ.ನಿ./ಹೊ.ಗು.ಲೋ.ಕ್ಲೀ.ಸೂ–ವಾ.ಟೆಂಡರ್/2024–25 ದಿನಾಂಕ: 16.06.2025

ಮರುಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಕನಕಪುರ ಇವರು ನಗರಸಭಾ ನಿಧಿಯಡಿ ಹೊರಗುತ್ತಿಗೆಯಡಿಯಲ್ಲಿ **ಕನಕಪುರ ನಗರಸಭೆಯ ವಾಹನಗಳಿಗೆ ಲೋಡರ್ಸ್ ಮತ್ತು ಕ್ಲೀನರ್ಸ್ ಹಾಗೂ ಸೂಪರ್‌ವೈಸರ್‌ಗಳನ್ನು** ಸರಬರಾಜು ಮಾಡುವ ಕಾಮಗಾರಿ. ಅಂದಾಜು ಮೊತ್ತ **ರೂ. 38.185 ಲಕ್ಷಗಳು** (DMA/2024-25/SE3871/CALL-3) ಕಾಮಗಾರಿ/ಕೆಲಸಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವಾರ್ಷಿಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಣ ಹಾಗೂ ಟೆಂಡರ್ ಪ್ರಕ್ರಿಯೆ ಶುಲ್ಕಗಳನ್ನು ಸಹ ವಿದ್ಯುನ್ಮಾನದ ಮೂಲಕ ಪಾವತಿಸಬೇಕು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 02–07–2025ರ 5.00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 03–07–2025ರ ಸಂಜೆ 05.00 ಗಂಟೆಯ ನಂತರ** ಯಾವುದೇ ದಿನಾಂಕಗಳಲ್ಲಿ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಪೌರಾಯುಕ್ತರು
ನಗರಸಭೆ, ಕನಕಪುರ

DIPR/BSD/170/SA/2025-26

ಬೇಡಿಕೆ ಈಡೇರಿಕೆ: ಸರ್ಕಾರಕ್ಕೆ ಸಾರಿಗೆ ನೌಕರರ ಪತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತ್ರಿಪಕ್ಷೀಯ ಸಭೆ ಕರೆಯಲು ಆಗ್ರಹ
- ಕ್ರಿಯಾ ಸಮಿತಿಯಿಂದ ಅಕ್ರಂ ಪಾಷಾ ಭೇಟಿ

ಬೆಂಗಳೂರು: ರಾಜ್ಯ ಸರ್ಕಾರ ವಿಳಂಬ ಮಾಡದೆ ಕೂಡಲೇ ತ್ರಿಪಕ್ಷೀಯ ಸಭೆ ಕರೆದು ನೌಕರರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಸಂಬಂಧ ಪತ್ರ ಬರೆದಿರುವ ಕ್ರಿಯಾ ಸಮಿತಿ ಸಂಚಾಲಕ ಬಿ.ಜಯದೇವರಾಜೇ ಅರಸು, 'ಏಪ್ರಿಲ್ 15ರಂದು ನಡೆದ ಜಂಟಿ ಕ್ರಿಯಾ ಸಮಿತಿ ಪ್ರತಿನಿಧಿಗಳ ತ್ರಿಪಕ್ಷೀಯ ಸಭೆಯಲ್ಲಿ ನಾಲ್ಕು ಸಾರಿಗೆ ನಿಗಮಗಳ ನೌಕರರ ಬೇಡಿಕೆ ಈಡೇರಿಸುವ ಭರವಸೆ ನೀಡಲಾಗಿತ್ತು. ಕಳೆದ ವರ್ಷ ಡಿಸೆಂಬರ್ 31ರಂದು ಮುಷ್ಕರ ನಡೆಸುವುದಾಗಿ ನೋಟಿಸ್ ನೀಡಲಾಗಿತ್ತು. ಆದರೆ, ಇನ್ನೂ ಬೇಡಿಕೆ ಈಡೇರಿಲ್ಲ. ಹಾಗಾಗಿ ಮುಷ್ಕರ ನಡೆಸುವ ಕುರಿತು ಚಿಂತನೆ ನಡೆದಿದೆ' ಎಂದು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರನ್ನು ಭೇಟಿ ಮಾಡಿ, ಪರಿಸ್ಥಿತಿ ಬಗ್ಗೆ ವಿವರಿಸಲಾಗಿದೆ. ಸರ್ಕಾರ ಕೂಡಲೇ ಬೇಡಿಕೆ ಈಡೇರಿಕೆ ಕುರಿತು ತ್ರಿಪಕ್ಷೀಯ ಸಭೆ ಕರೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪತ್ರಕ್ಕೆ ಸಂಘಟನೆಗಳ ಪ್ರತಿನಿಧಿಗಳಾದ ಎಚ್.ವಿ.ಅನಂತ ಸುಬ್ಬರಾವ್, ಎಚ್.ಡಿ.ರೇವಪ್ಪ, ವೆಂಕಟರಮಣಪ್ಪ, ಎ.ಸೋಮಣ್ಣ, ಕೆ.ಆರ್.ಜಗದೀಶ್ ಸಹಿ ಹಾಕಿದ್ದಾರೆ.

ಗಾಜಾ ಮೇಲಿನ ದಾಳಿ ಖಂಡನೀಯ

ಪ್ಯಾಲೆಸ್ಟೀನ್ ಬೆಂಬಲಿಸಿ ಎಡ ಪಕ್ಷಗಳಿಂದ ರಾಷ್ಟ್ರೀಯ ಸೌಹಾರ್ದತಾ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡು ವರ್ಷಗಳಿಂದ ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯಲ್ಲಿ ಇದುವರೆಗೆ 55 ಸಾವಿರಕ್ಕೂ ಹೆಚ್ಚು ಜನ ಮೃತಪಟ್ಟಿದ್ದು, ಲಕ್ಷಾಂತರ ಜನ ಗಾಯಗೊಂಡಿದ್ದಾರೆ' ಎಂದು ಸಿಪಿಐ ಕಾರ್ಯದರ್ಶಿ ಕೆ. ಪ್ರಕಾಶ್ ಹೇಳಿದರು.

ಸಿಪಿಐ, ಸಿಪಿಐ (ಮಾರ್ಕ್ಸಿಸ್ಟ್-ಲೆನಿನಿಸ್ಟ್), ಎಸ್‌ಯುಸಿಐ (ಕಮ್ಯುನಿಸ್ಟ್), ಆಲ್ ಇಂಡಿಯಾ ಫಾರ್ವಡ್ ಬ್ಲಾಕ್‌ನ ಸಹಯೋಗದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಸೌಹಾರ್ದತಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಗಾಜಾದ ಆಸ್ಪತ್ರೆಗಳು ಮತ್ತು ನಿರಾಶ್ರಿತರ ವಸತಿ ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ಮಾಡುತ್ತಿರುವುದು ಖಂಡನೀಯ. ಈ ದಾಳಿಯಲ್ಲಿ ಮೃತಪಟ್ಟವರಲ್ಲಿ ಶೇಕಡ 60ರಷ್ಟು ಜನ ಮಹಿಳೆಯರು ಮತ್ತು ಮಕ್ಕಳಿದ್ದಾರೆ. ಅಮೆರಿಕ ಮತ್ತು ಪಶ್ಚಿಮ ಯೂರೋಪಿನ ಕೆಲ ರಾಷ್ಟ್ರಗಳು ಇಸ್ರೇಲ್‌ಗೆ ಬೆಂಬಲ ನೀಡುವುದರ ಜೊತೆಗೆ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುತ್ತಿವೆ' ಎಂದು ಆರೋಪಿಸಿದರು.

ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಪಿಐ(ಎಂಎಲ್)ನ ಕಾರ್ಯದರ್ಶಿ ಕ್ಲಿಫ್ಟನ್ ರೊಜಾರಿಯೋ ಮಾತನಾಡಿ, 'ಭಾರತವು ಪ್ಯಾಲೆಸ್ಟೀನ್‌ಗೆ ಬೆಂಬಲ ನೀಡದೇ ಇಸ್ರೇಲ್‌ಗೆ ಬೆಂಬಲ ನೀಡುತ್ತಿರುವುದು ಖಂಡನೀಯ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಂಘ ಪರಿವಾರದ ಜೊತೆಯಲ್ಲಿ ಸೇರಿಕೊಂಡು, ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು ಧಾರ್ಮಿಕ ಯುದ್ಧವೆಂದು ಬಿಂಬಿಸುತ್ತಿದೆ. ಮತಧರ್ಮದ ಜೊತೆಗೆ ರಾಷ್ಟ್ರೀಯತೆಯನ್ನು ಗುರುತಿಸುವ ಮತ್ತು ಮುಸ್ಲಿಮರನ್ನು ದ್ವೇಷಿಸುವ ಇಸ್ರೇಲ್‌ನ ಜಿಯೋನಿಸ್ಟ್ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತಗಳು ಒಂದೇ ಆಗಿವೆ. ಇದು ಭಾರತದ ಅಂತರರಾಷ್ಟ್ರೀಯ ಸಂಬಂಧಗಳಿಗೆ ಮಾರಕವಾಗಲಿದೆ' ಎಂದರು.

ಎಸ್‌ಯುಸಿಐ-(ಸಿ) ಕಾರ್ಯದರ್ಶಿ ಉಮಾ ಕೆ., ಎಐಎಫ್‌ಬಿನ ಅಧ್ಯಕ್ಷ ಜಿ.ಆರ್. ಶಿವಶಂಕರ್ ಮಾತನಾಡಿ,

ಪ್ಯಾಲೆಸ್ಟೀನ್ ಕವಿತೆಗಳ ಪುಸ್ತಕವನ್ನು ಸಾಹಿತಿ ಜಿ. ರಾಮಕೃಷ್ಣ ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು.

ಪ್ಯಾಲೆಸ್ಟೀನ್ ಬೆಂಬಲಿಸಿ ನಗರದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಸೌಹಾರ್ದತಾ ದಿನಾಚರಣೆಯಲ್ಲಿ ಎಡಪಕ್ಷಗಳ ಸದಸ್ಯರು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು

ವಿಜೆಎನ್‌ಎಲ್‌ಗೆ 'ಐಐಎನ್ ಪ್ಲಾಟಿನಂ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಲ್ಲಿ ಅಕ್ವಡಕ್ಟ್ ಎಂಜಿನಿಯರಿಂಗ್ ತಂತ್ರಜ್ಞಾನ ಬಳಸಿ ಯಶಸ್ವಿಯಾಗಿರುವ ಕಾರಣಕ್ಕೆ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ (ವಿಜೆಎನ್‌ಎಲ್) 2025ನೇ ಸಾಲಿನ ಪ್ರತಿಷ್ಠಿತ 'ಐಐಎನ್ ಪ್ಲಾಟಿನಂ' ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಮೂಲಸೌಕರ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ, ತಂತ್ರಜ್ಞಾನ ಆವಿಷ್ಕಾರಕ್ಕೆ ಆದ್ಯತೆ ನೀಡುವ ಉದ್ದೇಶದಿಂದ ರಚನೆಯಾಗಿರುವ ಇನ್ಫ್ರಾಸ್ಟ್ರಕ್ಚರ್ ಸ್ಕಿಲ್ ಡೆವಲೆಪ್ಮೆಂಟ್ ಅಕಾಡೆಮಿಯು ಇತ್ತೀಚೆಗೆ ನವದೆಹಲಿಯಲ್ಲಿ ಈ ಪ್ರಶಸ್ತಿಯನ್ನು ನೀಡಿದೆ. ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ವಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಸಣ್ಣಚಿತ್ತಯ್ಯ ಮತ್ತು ಅಧಿಕಾರಿಗಳ ತಂಡವು ಪ್ರಶಸ್ತಿಯ ಜೊತೆ ಮಂಗಳವಾರ ಭೇಟಿ ಮಾಡಿತು.

ವಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಸಣ್ಣಚಿತ್ತಯ್ಯ ಮತ್ತು ಅಧಿಕಾರಿಗಳ ತಂಡವು 'ಐಐಎನ್ ಪ್ಲಾಟಿನಂ' ಪ್ರಶಸ್ತಿ ಜೊತೆ ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿತು

ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಜೂನ್ 18ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಸಂಘದ ವಜ್ರ ಮಹೋತ್ಸವ ನಡೆಯಲಿದ್ದು, ಅರಮನೆ ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ದಟ್ಟಣೆಯಾಗುವ ಸಾಧ್ಯತೆಯಿದೆ.

ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಕೋರಿದ್ದಾರೆ.

ವಾಹನ ನಿಲುಗಡೆ ನಿಷೇಧ ಮಾಡಿರುವ ರಸ್ತೆಗಳು: ಪ್ಯಾಲೇಸ್ ರಸ್ತೆ, ಜಯಮಹಲ್ ರಸ್ತೆ, ರಮಣ ಮಹರ್ಷಿ ರಸ್ತೆ, ಮೌಂಟ್ ಕಾರ್ಮೆಲ್ ಕಾಲೇಜ್ ರಸ್ತೆ, ಎಂ.ವಿ. ಜಯರಾಮ ರಸ್ತೆ, ಸಿ.ವಿ.ರಾಮನ್ ರಸ್ತೆ, ನಂದಿದುರ್ಗ ರಸ್ತೆ, ಮೇಖ್ರಿ ವೃತ್ತದಿಂದ ಯಶವಂತಪುರ ಬಸ್ ನಿಲ್ದಾಣದ ವರೆಗೆ, ವಸಂತನಗರ ರಸ್ತೆ, ಬಳ್ಳಾರಿ ರಸ್ತೆ, ತರಳಬಾಳು ರಸ್ತೆಗಳಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

'ಜುಲೈನಲ್ಲಿ ಪಂಪನ ಪುತ್ಥಳಿ ಅನಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆವರಣದಲ್ಲಿ ಸ್ಥಾಪಿಸಲಾಗುತ್ತಿರುವ 'ಆದಿಕವಿ ಪಂಪನ ಪುತ್ಥಳಿ'ಯನ್ನು ಜುಲೈನಲ್ಲಿ ಅನಾವರಣಗೊಳಿಸಲಾಗುವುದು' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಈ ಪ್ರತಿಮೆ ಅನಾವರಣಗೊಳಿಸಲು ಒಪ್ಪಿಗೆ ನೀಡಿದ್ದಾರೆ. ಶೀಘ್ರದಲ್ಲೇ ದಿನಾಂಕ ಗೊತ್ತುಪಡಿಸಲಾಗುವುದು. ಪುತ್ಥಳಿ ಅನಾವರಣ ದಿನದಂದು ಪಂಪನ ಕಾವ್ಯ ವಾಚನ, ಉಪನ್ಯಾಸ, ವಿಚಾರಗೋಷ್ಠಿ ಸೇರಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದ್ದಾರೆ.

'ಕನ್ನಡದ ಅನೇಕ ಕವಿಗಳು ಪಂಪನ ಪ್ರಭಾವಕ್ಕೆ ಒಳಗಾಗಿದ್ದಾರೆ. ಪಂಪನ ಪುತ್ಥಳಿಗೆ ಹೊಂದಿಕೊಂಡು 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವ ಪಂಪ ವಾಣಿಯನ್ನೂ ಅಳವಡಿಸಲಾಗುವುದು. ಈ ಮೂಲಕ ಕನ್ನಡ ಸಾರಸ್ವತ ಪರಂಪರೆಯ ಹಿರಿಮೆಯನ್ನು ಗೌರವಿಸಲಾಗುತ್ತಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 01-ಎಕ್ಸ್‌ಇಎನ್-ಸಿಡಬ್ಲ್ಯುಎಸ್-ಎಂವೈಎಸ್‌ಎಸ್-ಜೆಡ್‌ಓಎನ್‌ಎಎಲ್2025 ದಿನಾಂಕ : 11-06-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ದಕ್ಷಿಣದ ಅಶೋಕಪುರಂ ಕಾರ್ಯಾಗಾರದಲ್ಲಿ 01-07-2025 ರಿಂದ 30-06-2026ರ ಅವಧಿಗೆ ಕಾಮಗಾರಿಗಳನ್ನು ನಡೆಸಲು ಮತ್ತು ಸಾಮಗ್ರಿಗಳ ಸರಬರಾಜಿಗಾಗಿ ವಲಯ ಟೆಂಡರ್.	ರೂ. 99,99,992.60/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07-07-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಸಹಾಯಕ ವಿಭಾಗೀಯ ಇಂಜಿನಿಯರ್, ಕೇಂದ್ರೀಯ ಕಾರ್ಯಾಗಾರ, ಮೈಸೂರು

ಪಿಯುಬಿ/194/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 09/2025/ಎಸ್‌ಬಿಸಿ ದಿನಾಂಕ : 09-06-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಹೆವಿ-ಡ್ಯೂಟಿ ಎಲಿವೇಟರ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು, ಕಾರ್ಯಾರಂಭಗೊಳಿಸುವುದು ಮತ್ತು ನಿರ್ವಹಣೆ. **(ಟೆಂಡರ್ ಸಂ. ಎಲ್8255229ಎ)** **(ಪ್ರಮಾಣ : 03 ಸಂಖ್ಯೆಗಳು)**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07-07-2025 ರಂದು 10:30 ಗಂಟೆಯವರೆಗೆ

ವಿವರಗಳಿಗೆ www.ireps.gov.in ಗೆ ಲಾಗ್ ಆನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/181/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂ(ವಿ)/ಪ್ರ(ಕಾ)ವೃ-ಉ/ಕಾನಿಇಂ(ವಿ)/ಸಇಂ(ವಿ)/ಕ-ಟಿ6/25-26/633 ದಿನಾಂಕ: 17.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಟೆಂಡರ್ ಸಂಖ್ಯೆ: **KPTCL/2025-26/SS/WORK_INDENT2316** ರ ಅನ್ವಯ 220ಕೆವಿ 'ಎ' ಸ್ಟೇಷನ್‌ನ 150MVA 220/66ಕೆವಿ CGL ತಯಾರಿಕೆಯ ವಿದ್ಯುತ್ ಪರಿವರ್ತಕದ ಮರುಸ್ಥಿತಿ (Reconditioning) ಕಾಮಗಾರಿಯನ್ನು ಕೈಗೊಳ್ಳಲು ಭಾಗಶಃ ಟರ್ನ್ ಕೀ, ಶೇಕಡವಾರು ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರವೇ ಸ್ವೀಕರಿಸಲಾಗುವುದು. ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಮಾಡುವ ಮೂಲಕ ದಿನಾಂಕ: 19.06.2025 ರಂದು ಅಥವಾ ನಂತರ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿದ್ಯುತ್),
ಪ್ರಸರಣ (ಕಾರ್ಯಾಚರಣೆ) ವೃತ್ತ-ಉತ್ತರ, ಕವಿಪ್ರನಿನಿ, ಯುಎಎಸ್ ಕ್ಯಾಂಪಸ್,
ಹೆಬ್ಬಾಳ, ಬೆಂಗಳೂರು-560024. ಫೋನ್: 080-23513952.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು-560 064
ವೆಬ್‌ಸೈಟ್: www.rwf.indianrailways.gov.in e-mail: dycmm1rwf@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/05/2025-26 ದಿನಾಂಕ: 14.06.2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ತಯಾರಕರು/ಅಧಿಕೃತ ವಿತರಕರಿಂದ ಭಾರತೀಯ ರೈಲ್ವೆಯ ಇ-ಪೋರ್ಟಲ್ **www.ireps.gov.in** ನಲ್ಲಿ ಈ ಕೆಳಗಿನ ವಸ್ತುಗಳ ಪೂರೈಕೆಗಾಗಿ ಎಲೆಕ್ಟ್ರಾನಿಕ್ ಓಪನ್ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ: ಪಿ2255279 **ಸಂಕ್ಷಿಪ್ತ ವಿವರಣೆ:** ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಚಿಪ್ ಕನ್ವೇಯರ್ ನೊಂದಿಗೆ CNC ಎಂಡ್ ಮಿಲ್ಲಿಂಗ್, ಸೆಂಟ್ರಿಂಗ್ ಮತ್ತು ಕಪ್ ಟರ್ನಿಂಗ್ ಯಂತ್ರದ ಪೂರೈಕೆ. **ಪ್ರಮಾಣ: 1 ಸಂಖ್ಯೆ.**
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 30.07.2025, ಮಧ್ಯಾಹ್ನ 2.00 ಗಂಟೆಗೆ | ಪೂರ್ವ ಬಿಡ್ ಸಭೆ: 01.07.2025, ಬೆಳಗ್ಗೆ 11.00 ಗಂಟೆಗೆ

ಟೆಂಡರ್ ಸಂಖ್ಯೆ: ಪಿ2255289 **ಸಂಕ್ಷಿಪ್ತ ವಿವರಣೆ:** ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಸಿವಿಲ್ ಫೌಂಡೇಶನ್ ಮತ್ತು ಅಗತ್ಯವಿರುವ ಎಲ್ಲಾ ವಿದ್ಯುತ್ ಕೇಬಲ್‌ಗಳೊಂದಿಗೆ ಗ್ರೈಂಡಿಂಗ್ ಯಂತ್ರದ ವಿನ್ಯಾಸ, ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. **ಪ್ರಮಾಣ: 1 ಸಂಖ್ಯೆ.** | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 21.07.2025, ಮಧ್ಯಾಹ್ನ 2.00 ಗಂಟೆಗೆ

ಟೆಂಡರ್ ಸಂಖ್ಯೆ: ಪಿ2255296 **ಸಂಕ್ಷಿಪ್ತ ವಿವರಣೆ:** ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಅಸ್ತಿತ್ವದಲ್ಲಿರುವ ಹೈಡ್ರಾಲಿಕ್ ವ್ಯವಸ್ಥೆಯನ್ನು ತೆಗೆದು ಹಾಕುವುದು ಹಾಗೂ ಡ್ರಾ ಫರ್ನೇಸ್‌ನ RT15 ಸೇರಿದಂತೆ RT14 ಮತ್ತು ಡಿಸ್ಚಾರ್ಜ್ ವ್ಯವಸ್ಥೆ ಸೇರಿದಂತೆ ಚಾರ್ಜ್ ವ್ಯವಸ್ಥೆಗಾಗಿ ಹೈಡ್ರಾಲಿಕ್ ವ್ಯವಸ್ಥೆಯ ವಿನ್ಯಾಸ, ಉತ್ಪಾದನೆ, ಪೂರೈಕೆ, ನಿರ್ಮಾಣ ಮತ್ತು ಕಾರ್ಯಾರಂಭ. **ಪ್ರಮಾಣ: 1 ಸೆಟ್**
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 02.07.2025, ಮಧ್ಯಾಹ್ನ 2.00 ಗಂಟೆಗೆ | ಪೂರ್ವ ಬಿಡ್ ಸಭೆ: 23.06.2025, ಮಧ್ಯಾಹ್ನ 3.00 ಗಂಟೆಗೆ

ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ಅಥವಾ **www.ireps.gov.in** ನಲ್ಲಿ ವೀಕ್ಷಿಸಬಹುದು. ಟೆಂಡರ್ ಡಾಕ್ಯುಮೆಂಟ್‌ಗಳು ಮತ್ತು ತಿದ್ದುಪಡಿ ಯಾವುದಾದರೂ ಇದ್ದರೆ, ಪೋರ್ಟಲ್ ನಲ್ಲಿ ಮಾತ್ರ ಲಭ್ಯವಿರುತ್ತದೆ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಸೀ-ಡೈಕ CDAC

ಪ್ರವೇಶಾತಿ ಅಧಿಸೂಚನೆ

ಹೈ ಪರ್ಫಾರ್ಮನ್ಸ್ ಕಂಪ್ಯೂಟಿಂಗ್ ಮತ್ತು ಇದರ ಅಪ್ಲಿಕೇಶನ್ ವಿಷಯದಲ್ಲಿ ಸಿ-ಡಾಕ್ ಅಡ್ವಾನ್ಸ್ಡ್ ಸರ್ಟಿಫಿಕೇಶನ್ ಕೋರ್ಸ್

ಎಸ್‌ಸಿ, ಎಸ್‌ಟಿ, ಇಡಬ್ಲ್ಯುಎಸ್, ಮಹಿಳೆ, ಸಾಮಾನ್ಯ ಪ್ರವರ್ಗದ ಅಭ್ಯರ್ಥಿಗಳಿಗಾಗಿ

ವೈಶಿಷ್ಟ್ಯತೆಗಳು

- ಅವಧಿ: 6 ತಿಂಗಳು
- ವಿಧಾನ: ಆಫ್‌ಲೈನ್ (ಭೌತಿಕ)
- ನೋಂದಣಿ ಶುಲ್ಕವಿಲ್ಲ
- ಕೋರ್ಸ್ ಶುಲ್ಕ: ರೂ. ~~1,75,000~~ ಉಚಿತ

ಪ್ರಯೋಜನಗಳು

- ಉದ್ಯಮ ಪರಿಣಿತ ಮಾರ್ಗದರ್ಶನ
- ಸಿ-ಡಾಕ್ ತಜ್ಞರಿಂದ ಭೋದನೆ
174	Channasandra	28/1	Vacant	-	148.2	28/6	28/4	Road	Remaining Portion of Sy No28/1	-	-	-	-	6,424/-	22,400/-	32,000/-	C.G. Channakeshava S/o Lt. Giri Raja Gowda	-
175	Channasandra	28/6	Vacant	-	376.8	29	28/1	Road	Remaining Portion of Sy No28/6	-	-	-	-	6,424/-	22,400/-	32,000/-	C.G. Chinnaswamy S/o Lt. Giri Raja Gowda and C.G. Purushottham S/o Lt. Giri Raja Gowda	-
176	Channasandra	27/1	Vacant	-	230.1	27/2	26	Remaining Portion of Sy No27/1	Road	-	-	-	-	6,424/-	22,400/-	32,000/-	C. Ramaiah S/o Chikka Tayappa	-
177	Channasandra	29/1	Vacant	-	420.8	29/4	28	Road	Remaining Portion of Sy No29/1	-	-	-	-	6,424/-	22,400/-	32,000/-	Basappa & Others	-
178	Channasandra	27/2	Vacant	-	111.4	27/3	27/1	Remaining Portion of Sy No27/2	Road	-	-	-	-	6,424/-	22,400/-	32,000/-	C. Ramaiah S/o Chikka Tayappa	-
179	Channasandra	27/3	Vacant	-	76.5	27/4	27/2	Remaining Portion of Sy No27/3	Road	-	-	-	-	6,424/-	22,400/-	32,000/-	C.N. Leela W/o D. Shivashankar	-

ಐಶ್ವರ್ಯಾ ಗೌಡಗೆ ಜಾಮೀನು

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಆರೋಪದ ಅಡಿಯಲ್ಲಿ, ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧನಕ್ಕೆ ಒಳಗಾಗಿದ್ದ ಐಶ್ವರ್ಯಾ ಗೌಡ ಅವರಿಗೆ ನಗರದ ಇ.ಡಿ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಐಶ್ವರ್ಯಾ ಗೌಡ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ಕೋರ್ಟ್‌ನ ಪ್ರಧಾನ ನ್ಯಾಯಾಧೀಶ ಮುರಳೀಧರ ಪೈ ಅವರು ಈ ಕುರಿತಂತೆ ಆದೇಶಿಸಿದ್ದಾರೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಮಂಡಿಸಿದ ವಾದವನ್ನು ಪುರಸ್ಕರಿಸಿರುವ ನ್ಯಾಯಾಧೀಶರು, 'ಐಶ್ವರ್ಯಾ ಗೌಡ ₹5 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಒದಗಿಬೇಕು. ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ನೀಡಬೇಕು. ನ್ಯಾಯಾಲಯದ ಪೂರ್ವಾನುಮತಿ ಇಲ್ಲದೆ ಬೆಂಗಳೂರು ನಗರ ವ್ಯಾಪ್ತಿ ಪ್ರದೇಶ ಬಿಟ್ಟು ಹೋಗಬಾರದು. ವಿಳಾಸ ಬದಲಾವಣೆ ಮಾಡಬಾರದು' ಎಂಬ ಷರತ್ತು ವಿಧಿಸಿದೆ.

'ಯಾವುದೇ ತೆರಿಗೆ ಪಾವತಿಸದೆ, ಲೆಕ್ಕಪತ್ರಗಳ ನಿರ್ವಹಣೆ ಮಾಡದೆ ಬಹುಕೋಟಿ ಮೊತ್ತದ ವ್ಯವಹಾರ ನಡೆಸಿದ್ದಾರೆ' ಎಂಬ ವರದಿಗಳ ಆಧಾರದಲ್ಲಿ ಐಶ್ವರ್ಯಾ ಗೌಡ ಅವರನ್ನು ಇ.ಡಿ ಬಂಧಿಸಿತ್ತು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಕಾಲ್ತುಳಿತ : ಸಿ.ಎಂ, ಡಿಸಿಎಂ, ಗೃಹ ಸಚಿವರ ರಾಜೀನಾಮೆಗೆ ಆಗ್ರಹ • ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ, ಅಶೋಕ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ತಂಡದ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ ಮೃತಪಟ್ಟ 11 ಜನ ಅಮಾಯಕರ ಸಾವಿಗೆ ರಾಜ್ಯ ಸರ್ಕಾರದ ವೈಫಲ್ಯ ಕಾರಣವಾಗಿದ್ದು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ರಾಜೀನಾಮೆಗೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿತು.

ರಾಜ್ಯ ಸರ್ಕಾರ ತನ್ನ ಪ್ರಚಾರದ ತೆವಲಿಗೆ ಸರಿಯಾದ ವ್ಯವಸ್ಥೆ ಮಾಡದೇ ಆತುರಾತುರವಾಗಿ ಕಾರ್ಯಕ್ರಮ ಮಾಡಿ ಅಮಾಯಕರ ಬಲಿ ಪಡೆದಿದೆ. ಇದರ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಜಿ.ಪರಮೇಶ್ವರ ತಮ್ಮ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ನಾಯಕರು ಒಕ್ಕೊರಲಿನಿಂದ ಆಗ್ರಹಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ಹೊರಟರು. ಆದರೆ, ಸ್ವಾತಂತ್ರ್ಯ ಉದ್ಯಾನದಲ್ಲೇ ಬಿಜೆಪಿ ನಾಯಕರನ್ನು ಪೊಲೀಸರು ತಡೆದರು. ಈ ವೇಳೆ ತಳ್ಳಾಟ–ನೂಕಾಟ ನಡೆಯಿತು.

ನಂತರ ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಕರೆದೊಯ್ದರು. ಬಳಿಕ ಎಲ್ಲರನ್ನೂ ಬಿಡುಗಡೆ ಮಾಡಿದರು.

> ಯುವಜನರ ಸಾವಿನ ಶಾಪ ತಟ್ಟಿ ಈ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ. ಕಪ್ ಗೆದ್ದಿದ್ದು ಆರ್‌ಸಿಬಿಯೋ? ಸರ್ಕಾರವೋ? ಅಥವಾ ಸಿದ್ದರಾಮಯ್ಯ ಅಥವಾ ಡಿಕೆಶಿ ತಂಡವೋ?
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

> ಕಪ್ ಆರ್‌ಸಿಬಿಯದು. ಆದರೆ, ತಪ್ಪು ಸರ್ಕಾರದ್ದು. ಪೊಲೀಸರನ್ನು ಅಮಾನತು ಮಾಡಲಾಗಿದೆ. ಗುಪ್ತಚರ ವಿಭಾಗದ ಮುಖ್ಯಸ್ಥರನ್ನು ಅಮಾನತು ಮಾಡಿಲ್ಲವೇಕೆ?
> **ಛಲವಾದಿ ನಾರಾಯಣಸ್ವಾಮಿ,** ವಿಧಾನ ಪರಿಷತ್ ವಿಪಕ್ಷ ನಾಯಕ

> ಸರ್ಕಾರ ಪೂರ್ವ ತಯಾರಿ ಮಾಡದ ಕಾರಣ, ನಿರ್ಲಕ್ಷ್ಯದಿಂದ 11 ಜನ ಅಮಾಯಕರು ಮೃತಪಟ್ಟಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು
> **ಎನ್.ರವಿಕುಮಾರ್,** ವಿಧಾನ ಪರಿಷತ್ ವಿಪಕ್ಷ ಮುಖ್ಯ ಸಚೇತಕ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಮುಖ್ಯಮಂತ್ರಿಯವರ ಜನಪ್ರಿಯತೆ ಹೆಚ್ಚಿಸಲು ಆರ್‌ಸಿಬಿ. ವಿಜಯೋತ್ಸವದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮುಖ್ಯಮಂತ್ರಿ- ಉಪ ಮುಖ್ಯಮಂತ್ರಿ ನಡುವಿನ ಪೈಪೋಟಿಯಿಂದ ಅಮಾಯಕರು ಸಾವಿಗೀಡಾದರು' ಎಂದು ದೂರಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, 'ಮೃತರ ಕುಟುಂಬಗಳಿಗೆ ನ್ಯಾಯ ಸಿಗದ ಹೊರತು ಬಿಜೆಪಿ ಹೋರಾಟ ನಿಲ್ಲದು. ವಿಜಯೋತ್ಸವ ಆಚರಿಸುವುದು ಬೇಡ, ಪೊಲೀಸರು ದಣಿದಿದ್ದಾರೆ ಎಂದು ಡಿಸಿಪಿಯೊಬ್ಬರು ಹೇಳಿದಾಗ, ಸಿದ್ದರಾಮಯ್ಯ ಅವರು ಅಧಿಕಾರಿಯನ್ನು ಗದರಿದ್ದರಂತೆ. ವಿಜಯೋತ್ಸವಕ್ಕೆ ಲಕ್ಷಾಂತರ ಜನರು ಬಂದಿದ್ದರು. ಭದ್ರತೆಗೆ ಎಷ್ಟು ಸಿಬ್ಬಂದಿ ನಿಯೋಜಿಸಬೇಕಿತ್ತು ಎಂಬ ಕನಿಷ್ಠ ಜ್ಞಾನವೂ ಸರ್ಕಾರಕ್ಕೆ ಇಲ್ಲ' ಎಂದರು.

ಶಾಸಕ ಗೋಪಾಲಯ್ಯ ಮಾತನಾಡಿ, 'ಎರಡು ಕಡೆ ಕಾರ್ಯಕ್ರಮ ಆಯೋಜಿಸುವ ಅವಶ್ಯ ಇರಲಿಲ್ಲ. ವಿಧಾನಸೌಧದ ಬಳಿ ಕಾಂಗ್ರೆಸ್ ಕಾರ್ಯಕ್ರಮದಂತೆ ಪ್ರಚಾರದ ದೃಷ್ಟಿಯಿಂದ ಆಟಗಾರರನ್ನು ಸನ್ಮಾನ ಮಾಡಿದ್ದಾರೆ. ಕಾಲ್ತುಳಿತದಲ್ಲಿ ಜನರು ಮೃತಪಟ್ಟಿರುವ ವಿಷಯ ಗೊತ್ತಿದ್ದರೂ ಕಾರ್ಯಕ್ರಮ ಮುಂದುವರಿಸಿದ್ದಾರೆ. ಇದು ಖಂಡನೀಯ' ಎಂದರು.

ಪ್ರತಿಭಟನೆಯಲ್ಲಿ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಎಚ್. ಪಾಟೀಲ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ. ಮೋಹನ್, ಶಾಸಕರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಎಲ್.ಎ. ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಬೈರತಿ ಬಸವರಾಜ್, ಎಸ್. ಮುನಿರಾಜು, ಎಂ. ಕೃಷ್ಣಪ್ಪ, ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ ವೇಳೆ ಬಿಜೆಪಿ ಕಾರ್ಯಕರ್ತರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಮುಖವಾಡ ಧರಿಸಿ ಪಾಲ್ಗೊಂಡಿದ್ದು ಹೀಗೆ – ಪ್ರಜಾವಾಣಿ ಚಿತ್ರ

ಹೆಣಗಳ ಮೇಲಿನ ರಾಜಕೀಯ ಬಿಜೆಪಿಗೆ ಹೊಸದೇನಲ್ಲ: ಸಿಎಂ

'ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ನಮ್ಮ ರಾಜೀನಾಮೆ ಕೇಳುವ ಮೊದಲು ಇಂತಹದ್ದೇ ಅವಘಡಗಳು ನಡೆದಿದ್ದ ಸಂದರ್ಭದಲ್ಲಿ ರಾಜೀನಾಮೆ ನೀಡಿದ್ದ ಬಿಜೆಪಿ ನಾಯಕರ ಪಟ್ಟಿಯನ್ನು ಬಿಜೆಪಿ ನಾಯಕರು ಬಿಡುಗಡೆ ಮಾಡಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

'ಕಾಲ್ತುಳಿತ ಘಟನೆಯ ಹೊಣೆಯನ್ನು ನಾವು ಹೊತ್ತಿದ್ದು, ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ಇಷ್ಟೆಲ್ಲ ಕ್ರಮಕೈಗೊಂಡ ನಂತರವೂ ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿರುವುದು ರಾಜಕೀಯ ದುರುದ್ದೇಶದಿಂದ ಹೊರತು ಜನರ ಬಗೆಗಿನ ಕಾಳಜಿಯಿಂದಲ್ಲ. ಹತ್ಯೆ, ದೌರ್ಜನ್ಯಗಳು ನಡೆದ ತಕ್ಷಣ ಸತ್ತ ಜೀವಗಳನ್ನು ಹುಡುಕಿ ಕೊಂಡು ಹೋಗುವ ರಣಹದ್ದುಗಳಂತೆ ಎರಗಿ ಬೀಳುವುದು ಬಿಜೆಪಿಯ ರಕ್ತದಲ್ಲಿಯೇ ಇದೆ. ಹೆಣಗಳ ಮೇಲಿನ ರಾಜಕೀಯ ಬಿಜೆಪಿ ಪಾಲಿಗೆ ಹೊಸದೇನಲ್ಲ' ಎಂದಿದ್ದಾರೆ.

'ಗುಜರಾತ್‌ನಲ್ಲಿ 2002ರಲ್ಲಿ ನಡೆದ ಹತ್ಯಾಕಾಂಡದಲ್ಲಿ ಅಂದಾಜು 2 ಸಾವಿರ ಅಮಾಯಕರು ಪ್ರಾಣ ಕಳೆದುಕೊಂಡಿದ್ದರೂ ಅಂದು ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ರಾಜೀನಾಮೆ ನೀಡಿರಲಿಲ್ಲ. ಇಲ್ಲಿಯವರೆಗೆ ಕನಿಷ್ಠ ವಿಷಾದವನ್ನೂ ಸೂಚಿಸಿಲ್ಲ. ಪಹಲ್ಗಾಮ್‌ನಲ್ಲಿ ಪಾಕ್ ಉಗ್ರಗಾಮಿಗಳು ನಡೆಸಿದ್ದ ಹತ್ಯಾಕಾಂಡದಲ್ಲಿ 26 ಅಮಾಯಕರ ಸಾವಿಗೆ ಕಾರಣರಾದ ನಾಲ್ಕು ಮಂದಿ ದುರುಳರು ಯಾರು ಎನ್ನುವುದನ್ನು ಪತ್ತೆ ಹಚ್ಚಲಾಗಿಲ್ಲ. ಇದು ಕೇಂದ್ರ ಸರ್ಕಾರದ ವೈಫಲ್ಯ ಅಲ್ಲವೇ? ಮಣಿಪುರದಲ್ಲಿ ನಡೆಯುತ್ತಿರುವ ಹಿಂಸೆಯ ಹೊಣೆಯನ್ನು ಕೇಂದ್ರ ಸಚಿವರು ಹೊರುವುದು ಬೇಡವೇ? ಗುಜರಾತ್‌ನ ಮೋರ್ಬಿ ಸೇತುವೆ ಕುಸಿದು ಬಿದ್ದು 140 ಮಂದಿ ಮೃತಪಟ್ಟಿದ್ದರು. ಜನವರಿ ತಿಂಗಳಲ್ಲಿ ಮಹಾ ಕುಂಭದಲ್ಲಿ 30 ಯಾತ್ರಿಕರು ಪ್ರಾಣ ಕಳೆದುಕೊಂಡರು. ಆ ರಾಜ್ಯಗಳಲ್ಲಿ ಮುಖ್ಯಮಂತ್ರಿ ಆಗಿರುವವರು ಬಿಜೆಪಿಗೆ ಸೇರಿದವರಲ್ಲವೇ? ಇವರು ರಾಜೀನಾಮೆ ನೀಡುವುದು ಬಿಡಿ, ಆ ಘಟನೆಗಳ ಬಗ್ಗೆ ಇಲ್ಲಿಯವರೆಗೆ ಸರಿಯಾದ ತನಿಖೆಯನ್ನೇ ಅಲ್ಲಿನ ಸರ್ಕಾರ ನಡೆಸಿಲ್ಲ. ರಾಜೀನಾಮೆ ಕೇಳಲು ಬಿಜೆಪಿ ನಾಯಕರಿಗೆ ಯಾವ ನೈತಿಕತೆ ಇದೆ' ಎಂದೂ ಅವರು ಪ್ರಶ್ನಿಸಿದ್ದಾರೆ.

ಮಗಳ ಮೇಲೆ ಅತ್ಯಾಚಾರ ಆರೋಪ: ಖುಲಾಸೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರೋಪಿ ಫ್ರೆಂಚ್ ರಾಯಭಾರ ಕಚೇರಿಯ ಮಾಜಿ ಉದ್ಯೋಗಿ
- ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪು
- ಮೇಲ್ಮನವಿ ಸಲ್ಲಿಸಿದ್ದ ಪತ್ನಿ

ಬೆಂಗಳೂರು: ಮೂರೂವರೆ ವರ್ಷದ ತನ್ನ ಮಗಳ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ಬೆಂಗಳೂರಿನ ಫ್ರೆಂಚ್ ರಾಯಭಾರ ಕಚೇರಿಯ ಮಾಜಿ ಉದ್ಯೋಗಿ ಪಾಸ್ಕಲ್ ಮಝುರಿಯರ್ ಅವರನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಮಝುರಿಯರ್ ಪತ್ನಿ ಸುಜಾ ಜೋನ್ಸ್ ಮಝುರಿಯರ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

'ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸುತ್ತಿರುವ ಸಮಯದಲ್ಲಿ ಮಕ್ಕಳೊಂದಿಗೆ ದೇಶ ಬಿಟ್ಟು ಹೋಗುವುದನ್ನು ತಡೆಯಲು ಸುಜಾ ತಮ್ಮ ಪತಿ ವಿರುದ್ಧ ಸುಳ್ಳು ಆರೋಪ ಹೊರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ' ಎಂಬ ವಿಚಾರಣಾ ನ್ಯಾಯಾಲಯದ ಅಭಿಪ್ರಾಯವನ್ನು ನ್ಯಾಯಪೀಠ ಪರಿಗಣಿಸಿದೆ.

'ನನ್ನ ಪತಿ 2010ರ ಏಪ್ರಿಲ್, 2012ರ ಮೇ ಮತ್ತು 2012ರ ಜೂನ್ ತಿಂಗಳಲ್ಲಿ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಸುಜಾ ಆರೋಪಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾಕ್ಕೆ ಸೂಚನೆ

ಬೆಂಗಳೂರು: 'ಶಾಂತಿಭಂಗ ಉಂಟು ಮಾಡುವ ಹಾಗೂ ಘರ್ಷಣೆಗೆ ಕಾರಣರಾಗುವವರ ವಿರುದ್ಧ ನಿಗಾ ವಹಿಸಿ ಕ್ರಮ ಕೈಗೊಳ್ಳಬೇಕು' ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಸೂಚನೆ ನೀಡಿದರು.

ಸೀಮಂತ್

ನಗರದ ಕಮಿಷನರ್ ಕಚೇರಿಯಲ್ಲಿ ನಡೆದ 'ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣಾ ದಳ'ದ ಸಭೆಯಲ್ಲಿ ಅವರು ಮಾತನಾಡಿದರು.

'ಅಪರಾಧ ವಿಭಾಗದ ಸಿಬ್ಬಂದಿ, ಠಾಣೆಯ ಗುಪ್ತವಾರ್ತೆ ಸಿಬ್ಬಂದಿ ಹಾಗೂ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಲು ನೇಮಿಸಲಾಗಿರುವ ಸಿಬ್ಬಂದಿ ಸಮನ್ವಯ ಸಾಧಿಸಿ ಕೆಲಸ ಮಾಡಬೇಕು. ಸುಳ್ಳು ಮಾಹಿತಿ ಎಂಬುದು ಗೊತ್ತಾದ ಕೂಡಲೇ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು' ಎಂದು ಅವರು ಸೂಚಿಸಿದರು.

'ಕಾನೂನು ಬಾಹಿರ ಕೃತ್ಯ, ಸುಳ್ಳು ಮಾಹಿತಿ ಹರಡುವುದು, ದ್ವೇಷ ಭಾಷಣ, ಸುಳ್ಳು ಮಾಹಿತಿಯಿಂದ ಕೋಮು ಸಂಘರ್ಷಕ್ಕೆ ಕಾರಣವಾಗುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚಿಸಿದರು.

'ಇನ್‌ಸ್ಟಾಗ್ರಾಂ, 'ಎಕ್ಸ್' ಖಾತೆ, ಫೇಸ್‌ಬುಕ್ ಮೇಲೆ ಕಣ್ಗಾವಲು ಇಡಬೇಕು. ಕ್ಷಣ ಕ್ಷಣದ ಮಾಹಿತಿಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು' ಎಂದೂ ಸಲಹೆ ನೀಡಿದರು.

ನಗರ ಕಮಿಷನರೇಟ್ ವ್ಯಾಪ್ತಿಯ ಎಲ್ಲ ಪೊಲೀಸ್ ಠಾಣೆಗಳ ಸಾಮಾಜಿಕ ಜಾಲತಾಣಗಳ ನಿಗಾ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೋಮಾ ಸ್ಥಿತಿ ತಲುಪಿದ ಅಕ್ಷಯ್

ಬೆಂಗಳೂರು: ಮರದ ಕೊಂಬೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಅಕ್ಷಯ್ ಅವರು ಕೋಮಾ ಸ್ಥಿತಿಗೆ ತಲುಪಿದ್ದು, ಜೀವನ್ಮರಣದ ಮಧ್ಯೆ ಹೋರಾಟ ನಡೆಸುತ್ತಿದ್ದಾರೆ.

ಬನಶಂಕರಿಯ ಬ್ರಹ್ಮಚೈತನ್ಯ ಮಂದಿರದ ಬಳಿ ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದ ವೇಳೆ ಭಾನುವಾರ ಮಧ್ಯಾಹ್ನ ಮರದ ಕೊಂಬೆ ಬಿದ್ದು, ಶ್ರೀನಗರ ನಿವಾಸಿ ಅಕ್ಷಯ್ ಅವರ ತಲೆಗೆ ತೀವ್ರ ಗಾಯವಾಗಿದ್ದು, ಸ್ಥಳೀಯರು ತಕ್ಷಣ ಜಯನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು.

ನರರೋಗ ತಜ್ಞ ಡಾ.ಶ್ರೀದತ್ ಮಾತನಾಡಿ, 'ಅಕ್ಷಯ್ ಅವರ ತಲೆ ಬುರುಡೆಗೆ ತೀವ್ರ ಪೆಟ್ಟು ಬಿದ್ದಿದ್ದು, ಭಾನುವಾರ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಸದ್ಯಕ್ಕೆ ಪರಿಸ್ಥಿತಿ ಚಿಂತಾಜನಕವಾಗಿದೆ. ಅಂಗಾಂಗಗಳು ಕೆಲಸ ಮಾಡಲು ಔಷಧ ನೀಡಲಾಗುತ್ತಿದೆ. ಮಿದುಳಿಗೆ ದೊಡ್ಡ ಪೆಟ್ಟಾಗಿದೆ. ಈಗಲೇ ಏನೂ ಹೇಳಲು ಆಗುವುದಿಲ್ಲ, ಕೋಮಾ ಸ್ಥಿತಿ ತಲುಪಿದ್ದಾರೆ' ಎಂದು ತಿಳಿಸಿದರು.

ಅಕ್ಷಯ್

ಖಾಸಗಿ ಸಂಸ್ಥೆ ಉದ್ಯೋಗಿಯಾಗಿದ್ದ ಅಕ್ಷಯ್, ಭಾನುವಾರ ತಂದೆಯ ಜನ್ಮದಿನದ ಪ್ರಯುಕ್ತ ಕುರಿ ಮಾಂಸ ತೆಗೆದುಕೊಂಡು ಬರುವುದಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದರು. ಜೋರು ಗಾಳಿಗೆ ಮರದ ಕೊಂಬೆ ಮುರಿದು ಅವರ ತಲೆ ಮೇಲೆ ಬಿದ್ದಿತ್ತು. ತಲೆ ಬುರುಡೆಯಲ್ಲಿ ಸುಮಾರು 10ಕ್ಕೂ ಅಧಿಕ ಕಡೆ ಗಾಯವಾಗಿತ್ತು.

'ತಂದೆ ಮೂತ್ರಪಿಂಡ ಸಮಸ್ಯೆಯಿಂದ ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಕ್ಷಯ್ ದುಡಿದು ಮನೆ ನಡೆಸುವುದರ ಜೊತೆಗೆ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದರು. ಅವರ ಆರೋಗ್ಯದ ಬಗ್ಗೆ ವೈದ್ಯರು ಈಗಲೇ ಏನೂ ಹೇಳಲು ಆಗುವುದಿಲ್ಲ ಎಂದಿದ್ದಾರೆ. ದಿಕ್ಕು ತೋಚುತ್ತಿಲ್ಲ' ಎಂದು ಸಹೋದರ ಬೆನಕ ಹೇಳಿದರು.

'ರಭಸದ ಗಾಳಿ ಬೀಸಿದ ಪರಿಣಾಮ ಒಣಗಿದ ಕೊಂಬೆ ಬಿದ್ದು ಈ ಅನಾಹುತವಾಗಿದೆ. ಚಿಕಿತ್ಸಾ ವೆಚ್ಚವನ್ನು ಬಿಬಿಎಂಪಿಯೇ ಭರಿಸಲಿದೆ ಎಂದು ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿಎಲ್‌ಜಿ ಸ್ವಾಮಿ ತಿಳಿಸಿದರು.

ನೈಜೀರಿಯಾದ ಡ್ರಗ್ಸ್ ಪೆಡ್ಲರ್ ಬಂಧನ

ಬೆಂಗಳೂರು: ಹತ್ತು ವರ್ಷಗಳಿಂದ ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ನೈಜೀರಿಯಾದ ಚಿಕ್ವುಮಾ ಬಂತ ಎಂಬಾತನನ್ನು ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ಚಿಕ್ವುಮಾ ಬಂತ

ಆರೋಪಿಯಿಂದ ₹1.2 ಕೋಟಿ ಮೌಲ್ಯದ 600 ಗ್ರಾಂ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿ ಆವಲಹಳ್ಳಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದ ಎಂದು ಪೊಲೀಸರು ತಿಳಿಸಿದರು.

ಪರಿಚಯಸ್ಥರಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ ಬೆಂಗಳೂರಿಗೆ ತಂದು ಕಾಲೇಜು ವಿದ್ಯಾರ್ಥಿಗಳು, ಪಾರ್ಟಿಗಳಿಗೆ ಸರಬರಾಜು ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಕಳ್ಳತನ: ಮೂವರ ಸೆರೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಶಿವಪ್ರಸಾದ್, ಲಿಖಿತ್ ಹಾಗೂ ಜೈದೀಪ್ ಬಂಧಿತ ಆರೋಪಿಗಳು. ತಲೆಮರೆಸಿಕೊಂಡಿರುವ ರಘುವನಹಳ್ಳಿ ರಘು ಅಲಿಯಾಸ್ ಪೆಪ್ಪಿ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ 175 ಗ್ರಾಂ ಚಿನ್ನಾಭರಣ, 1 ಕೆ.ಜಿ 500 ಗ್ರಾಂ ಬೆಳ್ಳಿಯ ವಸ್ತುಗಳು ಹಾಗೂ ₹9 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು. ಬನಶಂಕರಿ ಮೂರನೇ ಹಂತದ ನಿವಾಸಿ ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ.

'ದೂರುದಾರರು ಹಾಗೂ ಅವರ ಪತ್ನಿ ಮನೆಗೆ ಬೀಗ ಹಾಕಿಕೊಂಡು ಚಿಕ್ಕಮಗಳೂರಿಗೆ ತೆರಳಿದ್ದರು. ಮೇ 22ರಂದು ವಾಪಸ್ ಬಂದು ನೋಡಿದಾಗ ಮನೆಯ ಬೀಗ ಒಡೆದು ಕೊಠಡಿಯಲ್ಲಿನ ಬೀರುವಿನಲ್ಲಿದ್ದ ₹24 ಲಕ್ಷ ನಗದು, 175 ಗ್ರಾಂ ಚಿನ್ನಾಭರಣ ಹಾಗೂ 1 ಕೆ.ಜಿ. 500 ಗ್ರಾಂ ಬೆಳ್ಳಿ ನಾಣ್ಯಗಳನ್ನು ಕಳವು ಮಾಡಿರುವುದು ಗೊತ್ತಾಗಿತ್ತು. ಹೊರ ವರ್ತುಲ ರಸ್ತೆಯಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು. ಆರೋಪಿಗಳ ಬಂಧನದಿಂದ ಸಿ.ಕೆ. ಅಚ್ಚುಕಟ್ಟು ಹಾಗೂ ಹನುಮಂತನಗರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳು ಪತ್ತೆ ಆಗಿವೆ ಎಂದು ಮೂಲಗಳು ತಿಳಿಸಿವೆ.

ಬ್ಲ್ಯಾಕ್‌ಮೇಲ್: ಆರೋಪಿ ಸೆರೆ

ಮಹಿಳೆಗೆ ಬೆದರಿಕೆ: 25 ಗ್ರಾಂ ಚಿನ್ನ, ₹1 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚ್ಛೇದಿತೆಯನ್ನು ವಿವಾಹ ಆಗುವುದಾಗಿ ನಂಬಿಸಿ ಖಾಸಗಿ ವಿಡಿಯೊ ಸೆರೆ ಹಿಡಿದು ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿಯನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಡುಗೋಡಿಯ ಶ್ರೀನಿವಾಸ್ ಬಂಧಿತ ಆರೋಪಿ. ಆಂಧ್ರಪ್ರದೇಶದ ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದೂರುದಾರೆ 2014ರಲ್ಲಿ ಮದುವೆ ಆಗಿದ್ದರು. ಕೌಟುಂಬಿಕ ಕಲಹದಿಂದ ದಂಪತಿ ನಡುವೆ ವೈಮನಸ್ಸು ಉಂಟಾಗಿತ್ತು. 2016ರಲ್ಲಿ ವಿಚ್ಛೇದನ ಪಡೆದುಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಕಾಡುಗೋಡಿಯಲ್ಲಿರುವ 'ಡಿಜಿಟಲ್ ಸೇವಾ ಕೇಂದ್ರ'ದಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ. ಪತಿಯಿಂದ ದೂರವಾದ ನಂತರ ಜೀವನ ನಿರ್ವಹಣೆಗಾಗಿ ಕೆಲಸ ಹುಡುಕುತ್ತಿದ್ದ ಸಂತ್ರಸ್ತೆಗೆ ಆರೋಪಿ ಕೆಲಸ ಮಾಡುತ್ತಿದ್ದ ಕೇಂದ್ರದಲ್ಲಿಯೇ ಕೆಲಸ ಸಿಕ್ಕಿತ್ತು. ಮಹಿಳೆಯನ್ನು ಆರೋಪಿ ಪರಿಚಯಿಸಿಕೊಂಡು ಸಲುಗೆ ಬೆಳೆಸಿದ್ದ. ವಿವಾಹ ಆಗುವುದಾಗಿ ನಂಬಿಸಿದ್ದ. ಬಾಡಿಗೆ ಮನೆ ಮಾಡಿ ಆಕೆಯೊಂದಿಗೆ ವಾಸಿಸುತ್ತಿದ್ದ. ಈ ನಡುವೆ ಮಹಿಳೆಯ ಗಮನಕ್ಕೆ ಬಾರದಂತೆ ಖಾಸಗಿ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ. ಆ ದೃಶ್ಯಾವಳಿಯನ್ನು ತೋರಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಹಣ ಕೊಡದಿದ್ದರೆ ಖಾಸಗಿ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಪದೇ ಪದೇ ಬೆದರಿಕೆ ಹಾಕಿದ್ದರಿಂದ ಹೆದರಿದ ಸಂತ್ರಸ್ತೆ 25 ಗ್ರಾಂ ಚಿನ್ನ ಹಾಗೂ ₹1 ಲಕ್ಷ ನಗದನ್ನು ನೀಡಿದ್ದರು. ಅದಾದ ಬಳಿಕವೂ ಆರೋಪಿ ಮತ್ತಷ್ಟು ಹಣ ನೀಡುವಂತೆ ಒತ್ತಾಯ ಮಾಡುತ್ತಿದ್ದ. ಸಂತ್ರಸ್ತೆಯ ಸಹೋದರನಿಗೂ ಕರೆ ಮಾಡಿ ಬೆದರಿಕೆ ಹಾಕಿದ್ದ' ಎಂದು ಪೊಲೀಸರು ಹೇಳಿದರು.

'ಮಹಿಳೆಯ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ಸೃಷ್ಟಿಸಿ, ಅದರಲ್ಲಿ ವಿಡಿಯೊ ಅಪ್‌ಲೋಡ್ ಮಾಡಲು ಆರೋಪಿ ಪ್ರಯತ್ನಿಸಿದ್ದ. ಮಹಿಳೆ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಎಸ್‌ಡಿಎ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಸ್ತೆ ಕಾಮಗಾರಿ ಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಲು ₹ 1 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದಡಿ ಕಾಳಗಿ ತಹಶೀಲ್ದಾರ್ ಕಚೇರಿಯ ದ್ವಿತೀಯ ದರ್ಜೆಯ ಸಹಾಯಕರೊಬ್ಬರನ್ನು (ಎಸ್‌ಡಿಎ) ಲೋಕಾಯುಕ್ತ ಪೊಲೀಸರು ಮಂಗಳವಾರ ವಶಕ್ಕೆ ಪಡೆದರು.

ಕಾಳಗಿ ತಹಶೀಲ್ದಾರ್ ಕಚೇರಿಯ ದೇವಸ್ಥಾನ ಶಾಖೆಯ ಎಸ್‌ಡಿಎ ಶರಣಪ್ಪ ಲಂಚ ಪಡೆದ ಆರೋಪಿ.

ವಿದೇಶದ 11 ಪ್ರಜೆಗಳ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲಸಿರುವ ವಿದೇಶದ 11 ಪ್ರಜೆಗಳನ್ನು ಪತ್ತೆ ಹಚ್ಚಿರುವ ಸಿಸಿಬಿ ಪೊಲೀಸರು, ಅವರ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

ಕ್ಯಾಮರೂನ್ ಹಾಗೂ ಸುಡಾನ್ ದೇಶದ ನಾಲ್ವರನ್ನು ನೆಲಮಂಗಲ ಬಳಿಯ ವಲಸಿಗರ ಬಂಧನ ಕೇಂದ್ರಕ್ಕೆ ಕಳುಹಿಸಲಾಗಿದೆ. ನೈಜೀರಿಯಾ ಹಾಗೂ ಸೆನೆಗಲ್ ದೇಶದ ಇಬ್ಬರ ಗಡಿಪಾರಿಗೆ ಕ್ರಮ ತೆಗೆದುಕೊಳ್ಳಲಾಗಿದೆ. ನೈಜೀರಿಯಾ ಹಾಗೂ ಐವರಿ ಕೋಸ್ಟ್‌ನ ಐವರ ವಿರುದ್ಧ ಡಿ.ಜೆ.ಹಳ್ಳಿ, ಕುಮಾರಸ್ವಾಮಿ ಲೇಔಟ್, ಹೆಣ್ಣೂರು, ಬನಶಂಕರಿ ಹಾಗೂ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಮಾದಕ ದ್ರವ್ಯ ನಿಗ್ರಹ ಕಾಯ್ದೆ(ಎನ್‌ಡಿಪಿಎಸ್) ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಅಕ್ರಮ ವಾಸಿಗಳ ವಿರುದ್ಧ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಪೊಲೀಸರು ಹೇಳಿದರು.

180	Channasandra	29/4	Vacant	-	420.1	Road	29/1	Road	Remaining Portion of Sy No29/4	-	-	-	-	6,424/-	22,400/-	32,000/-	Kishan S. S/o Surya Narayana Rao	-
181	Channasandra	30/1	Vacant	-	126	Road	Road	Road	Remaining Portion of Sy No30/1	-	-	-	-	6,424/-	22,400/-	32,000/-	Muniyamma W/o Lt. C. Ramegowda	-
182	Channasandra	32/1	Vacant	-	1195.73	32/2A	Road	Road	Remaining Portion of Sy No32/1	-	-	-	-	6,424/-	22,400/-	32,000/-	M. Sowbhagya D/o Lt. Munishami Reddy and 0.20 Gunta notified for BDA Acquisition	-
183	Channasandra	32/1	Vacant	-	233.24	33/2B	Road	Road	Road	-	-	-	-	6,424/-	22,400/-	32,000/-	M. Sowbhagya D/o Lt. Munishami Reddy	-
184	Channasandra	32/2A	Vacant	-	1676.7	33	32/1	Road	Remaining Portion of Sy No32/2A	-	-	-	-	6,424/-	22,400/-	32,000/-	BDA (Peripheral Ring Road) and S. Murali S/o Lt. Srinivasa Reddy	-
185	Channasandra	32/2B	Vacant	-	865.6	33	Road	Road	Road	-	-	-	-	6,424/-	22,400/-	32,000/-	Bhagyamma W/o M. Shankar and 0.10 Gunta notified for BDA Acquisition	-
186	Channasandra	33	Vacant	-	2191.7	34	32	Road	Remaining Portion of Sy No33	-	-	-	-	6,424/-	22,400/-	32,000/-	Sarkari Gundu Thopu	-
187	Channasandra	23/5.	Vacant	-	139.9	22	23/4	Remaining Portion of Sy No23/5	Road	-	-	-	-	6,424/-	22,400/-	32,000/-	Kanthamma W/o Lt. V. Gurumurthy	-
188	Channasandra	22/2.	Vacant	-	1693.4	22/1	23	Remaining Portion of Sy No22/2	Road	-	-	-	-	6,424/-	22,400/-	32,000/-	Rathnamma, C.G. Channa Keshava, C.G. Channaswamy and C.G. Purushottham	-
189	Channasandra	34/1	Vacant	-	3245	Thirumanahalli Village Boundary	33	Road	Remaining Portion of Sy No.34/1	-	-	-	-	6,424/-	22,400/-	32,000/-	Rathnamma W/o C. Giri Rajegowda and Others	LP No.J-DTP/ North/ LP/ 0539/ 13-14, Road reserved area 1571.34 Sq.m
190	Channasandra	22/1	Vacant	-	178.8	Thirumanahalli Village Boundary	22/2	Remaining Portion of Sy No.22/1	Road	-	-	-	-	6,424/-	22,400/-	32,000/-	Government	-
Total Extent to be Acquired (In Sq.m)					1,86,814.69													

ಗಮನಿಸಿ:
- ಭೂಮಿಯ ಮಾರುಕಟ್ಟೆ ಮೌಲ್ಯವು ಭೂಮಾಲೀಕರಿಂದ ದಾಖಲೆಗಳ ತಯಾರಿಕೆಯ ಆಧಾರದ ಮೇಲೆ ನಮೂನೆ–III ಹಂತದಲ್ಲಿ ನಿರ್ಧರಿಸಲು ಭೂ ಪರಿವರ್ತನೆ ಮತ್ತು ಅಭಿವೃದ್ಧಿ ಸ್ಥಿತಿಗೆ ಒಳಪಟ್ಟಿರುತ್ತದೆ.
- ಕಟ್ಟಡದ ವ್ಯಾಪ್ತಿಯನ್ನು ನಮೂನೆ–III ಸಾರ್ವಜನಿಕ ಸೂಚನೆಯ ಹಂತದಲ್ಲಿ ಕಟ್ಟಡ ಮೌಲ್ಯಮಾಪನ ಮತ್ತು ಅಭಿವೃದ್ಧಿ ಹಕ್ಕುಗಳ ನಿಯಮಗಳು, 2016ರ ಪ್ರಯೋಜನಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತದೆ.

ಸಹಿ/–
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052. ಇ-ಮೇಲ್: bswmlee4@gmail.com

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಇಓಐ/02/2025–26 ದಿನಾಂಕ : 17.06.2025

ಆಸಕ್ತಿ ಅಭಿವ್ಯಕ್ತಿಪಡಿಸಲು ಆಹ್ವಾನ (ಜಿಟಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಆಸಕ್ತಿ ಅಭಿವ್ಯಕ್ತಿಪಡಿಸಲು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಪ್ರತಿಷ್ಠಿತ ವಿತರಕರು / ತಯಾರಕರು / ಪೂರೈಕೆದಾರರು / ವ್ಯಕ್ತಿಗಳಿಂದ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವ ಈ ಕೆಳಗಿನ ಐಟಂಗಳ ದರಗಳನ್ನು ಉಲ್ಲೇಖಿಸಲು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಭ್ಯವಿದೆ. ಆಸಕ್ತ ಅರ್ಜಿದಾರರು ವಿವರಗಳನ್ನು ಪರಿಶೀಲಿಸಿ ದಿನಾಂಕ: 24.06.2025 ರಂದು ಸಂಜೆ 4.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು.

ಕ್ರ.ಸಂ.	ಐಟಂ ಸ್ಪೆಸಿಫಿಕೇಷನ್
1	ಲ್ಯಾಂಡ್‌ಫಿಲ್ ಮತ್ತು ಸಂಸ್ಕರಣಾ ಘಟಕಕ್ಕೆ ರಾಸಾಯನಿಕಗಳು, ಲೈನರ್‌ಗಳು, ಸಿಂಪಡಣೆ ವಸ್ತುಗಳು ಮತ್ತು ಇತರ ಅಗತ್ಯ ವಸ್ತುಗಳ ಖರೀದಿ

ಸೂಚನೆ: (1) ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಲಿಮಿಟೆಡ್, ಬೆಂಗಳೂರು ಕಾಯ್ದಿರಿಸಲಾಗಿದೆ. (2) ಕೊರಿಜೆಂಡಮ್‌ಗಳು / ಮಾರ್ಪಾಡುಗಳು / ತಿದ್ದುಪಡಿಗಳು, ಯಾವುದಾದರೂ ಇದ್ದರೆ, ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. (3) ಕೆಲಸದ ಹೆಚ್ಚಿನ ವಿವರಗಳನ್ನು ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು–560052 ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 11:00 ಗಂಟೆಯಿಂದ ಸಂಜೆ 17:00 ಗಂಟೆಯ ಮಧ್ಯದಲ್ಲಿ ಪಡೆಯಬಹುದು. (4) ಜಿಟಿಕೆ ಕೆಪಿಪಿ ಪೋರ್ಟಲ್ http://KPPP.karnataka.gov.in ನೋಂದಣಿ ವಿವರಗಳಿಗಾಗಿ ಸಂಪರ್ಕಿಸಿ ಕೆಪಿಪಿ ಸಹಾಯವಾಣಿ 080– 22371090/22340060/22340948.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/1298/ಎಸ್‌ಎಸ್‌ಸಿ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಐಟಿಎನ್‌ಡಿ–ಇಪಿ–03/219/2025–26 ದಿನಾಂಕ:13.06.2025

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಕೆಪಿಟಿಸಿಎಲ್‌ನಲ್ಲಿ ನೋಂದಾಯಿಸಿರುವ ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಭಾಗ–ಎ : ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು, ಕೋಟೂರು–ಬೇಲೂರು ಕೈಗಾರಿಕಾ ಪ್ರದೇಶದಲ್ಲಿ 2x20ಎಂವಿಎ, 110/11ಕೆವಿ ಉಪಕೇಂದ್ರ ಸ್ಥಾಪಿಸುವ ಕಾಮಗಾರಿ. **ಭಾಗ–ಬಿ:** 220ಕೆವಿ ನರೇಂದ್ರ ಸ್ವೀಕರಣಾ ಕೇಂದ್ರದಲ್ಲಿ 110ಕೆವಿ ಟರ್ಮಿನಲ್ ಬೇ ನಿರ್ಮಾಣ ಕಾಮಗಾರಿ. **ಭಾಗ–ಸಿ:** 220/110ಕೆವಿ ನರೇಂದ್ರ ಸ್ವೀಕರಣಾ ಕೇಂದ್ರದಿಂದ ಪ್ರಸ್ತಾವಿತ 110/11ಕೆವಿ ಕೋಟೂರು–ಬೇಲೂರು ಉಪಕೇಂದ್ರದವರೆಗೆ 110ಕೆವಿ ಡಿಸಿ ಲೈನ್ ನಿರ್ಮಾಣ ಕಾಮಗಾರಿ (ಓವರ್ ಹೆಡ್ ಲೈನ್ ಭಾಗ). **ಭಾಗ–ಡಿ:** 220/110ಕೆವಿ ನರೇಂದ್ರ ಸ್ವೀಕರಣ ಕೇಂದ್ರದಿಂದ ಪ್ರಸ್ತಾವಿತ 110/11ಕೆವಿ ಕೋಟೂರು–ಬೇಲೂರು ಉಪಕೇಂದ್ರದವರೆಗೆ 110ಕೆವಿ ಇಹೆಚ್‌ಟಿ ಕೇಬಲ್ ನಿರ್ಮಾಣ ಕಾಮಗಾರಿ (ಯು.ಜಿ. ಕೇಬಲ್ ಭಾಗ).

ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.07.2025, ಸಂಜೆ 4.30 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2

ವಾಸಾಸಂಇ/ವಾಪ್ರ/ಜೆಎ/1262/2025–26

ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ಆಯುಕ್ತಾಲಯ, ನಂ.54, 5ನೇ ಮಹಡಿ, ಇಂಧನ ಭವನ, ರೇಸ್‌ಕೋರ್ಸ್ ರಸ್ತೆ, ರಿನೈಸನ್ಸ್ ಹೋಟೆಲ್ ಎದುರು, ಬೆಂಗಳೂರು–560009
ಇಮೇಲ್ : director.karnatakatourism.org ದೂರವಾಣಿ : 080–22352828

ಸಂಖ್ಯೆ: DT-PLN3/15/2025 ದಿನಾಂಕ: 17.06.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಪ್ರವಾಸೋದ್ಯಮ ಇಲಾಖೆ ರವರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್ ಅನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಿದ್ದು, ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರ್ ವೇಳಾಪಟ್ಟಿ
1.	Selection of Consultant for Providing Transaction Advisory Services for Development of Coastal Tourism Projects in Dakshina Kannada and Udupi Districts Of Karnataka on Suitable PPP Model. Indent No: DT/2025-26/SE0091	ಬಿಡ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ: 28.06.2025 17:00 ಗಂಟೆಯವರೆಗೆ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 30.06.2025 ಬೆಳಿಗ್ಗೆ 10:30 ಗಂಟೆ
2.	Selection of a Professional Consultancy Firm for Program Management and Strategy Support for Sustainable Development and Promotion of Tourism in Coastal Karnataka. Indent No: DT/2025-26/SE0092	ಬಿಡ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ: 28.06.2025 17:00 ಗಂಟೆಯವರೆಗೆ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 30.06.2025 ಬೆಳಿಗ್ಗೆ 11:00 ಗಂಟೆ

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ (Through Karnataka public procurement portal) https://www.kppp.karnataka.gov.in. ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www.kppp.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯಲ್ಲಿ ನೊಂದಾಯಿಸುವುದು ಅಗತ್ಯವಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು ಹಾಗೂ ಟೆಂಡರ್ ಆಹ್ವಾನಾಧಿಕಾರಿ, ಪ್ರವಾಸೋದ್ಯಮ ಇಲಾಖೆ

DIPR/CP/1292/Zen/2025-26

(ಕರ್ನಾಟಕ ಸರ್ಕಾರ)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:05/2025–26 ದಿನಾಂಕ:16.06.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ ಉಪ ವಿಭಾಗ ವ್ಯಾಪ್ತಿಯ 2024–25ನೇ ಸಾಲಿನ 5054 ಮಳೆಹಾನಿ ಯೋಜನೆಯಡಿಯಲ್ಲಿ ಲೆಕ್ಕಶೀರ್ಷಿಕೆಯಡಿಯ 1)ಹಾಸನ ತಾಲ್ಲೂಕು, ಕಸಬಾ ಹೋಬಳಿ, ತೇಜೂರು ಗ್ರಾಮದ ಪರಿಮಿತಿಯಲ್ಲಿ, ದೊಡ್ಡಕೊಂಡಗೊಳ ಗ್ರಾಮದ ಪರಿಮಿತಿಯಲ್ಲಿ, … ಸೇರಿದಂತೆ ವಿವಿಧ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ ರೂ.209.11ಲಕ್ಷಗಳು ಇಂಡೆಂಟ್ ಸಂಖ್ಯೆ: RDPR/2025-26/RD/WORK_INDENT15514, ಹಾಗೂ 2)ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, … ಗ್ರಾಮದ ಪರಿಮಿತಿಯಲ್ಲಿ … ರಸ್ತೆ ಅಭಿವೃದ್ಧಿ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ ರೂ.209.28 ಲಕ್ಷಗಳು ಇಂಡೆಂಟ್ ಸಂಖ್ಯೆ: RDPR/2025-26/RD/WORK_INDENT15518 ಕಾಮಗಾರಿಗೆ ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ ಇತ–4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 16.06.2025 ರಿಂದ ದಿ:25.06.2025 ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:25.06.2025 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:24.06.2025 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:26.06.2025 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ನಂತರ ತಾಂತ್ರಿಕ ಬಿಡ್ಡ ಅನುಮೋದನೆ ನಂತರ ಆರ್ಥಿಕ ಬಿಡ್ಡ ತೆರೆಯಲಾಗುವುದು. ಒಂದು ವೇಳೆ ವಿನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಸ/ಹಾಸನ/224/ಕೆಎಸ್‌ಎಂಸಿಎ/2025–26

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

ಜಿಲ್ಲಾ ರೋಗ ವಾಹಕ ಅಶ್ರೀತ ರೋಗಗಳ ನಿಯಂತ್ರಣ ಕಚೇರಿ, ಅಜ್ಜರಕಾಡು ಉಡುಪಿ–567101

ಪ್ರಕಟಣೆ

ಎನ್.ಹೆಚ್.ಎಂ.(NVBDCP) ಕಾರ್ಯಕ್ರಮದಡಿಯಲ್ಲಿ ಡಿ.ವಿ.ಬಿ.ಡಿ.ಸಿ. ಕಚೇರಿ, ಉಡುಪಿ ಇಲ್ಲಿಗೆ 2025–26ನೇ ಸಾಲಿಗೆ ಕೀಟ ಸಂಗ್ರಹಕಾರರು (Insect Collector) ಒಂದು ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇರ ನೇಮಕಾತಿಗೆ ದಿನಾಂಕ : 25.06.2025 ರಂದು ಅಪರಾಹ್ನ 12.00 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಯವರ ಕಚೇರಿ, ಉಡುಪಿ ಇಲ್ಲಿ ನಡೆಯುವ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ದ್ವಿತೀಯ ಪಿ.ಯು.ಸಿ (ವಿಜ್ಞಾನ)ದಲ್ಲಿ ಉತ್ತೀರ್ಣರಾಗಿದ್ದು, 40 ವರ್ಷ ವಯೋಮಿತಿಯೋಗಿರಬೇಕು, ಗೌರವ ಧನ ರೂ. 15114.00+ಪ್ರಯಾಣ ಭತ್ಯೆ.

ಸಹಿ/– (ಡಾ|| ಪ್ರಶಾಂತ್ ಗಣಪತಿ ಭಟ್)
ಸದಸ್ಯ ಕಾರ್ಯದರ್ಶಿ/ ನೇಮಕಾರಿ ಸಮಿತಿ
ಜಿಲ್ಲಾ ರೋಗವಾಹಕ ಅಶ್ರಿತ ರೋಗಗಳ ನಿಯಂತ್ರಣಾಧಿಕಾರಿ
ಉಡುಪಿ ಜಿಲ್ಲೆ–576101

ವಿದ್ಯುತ್ ಪರಿವೀಕ್ಷಣಾಲಯ

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ನಿರ್ಮಾಣ ಭವನ, 2ನೇ ಮಹಡಿ, ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು–560 010.

ಸಂ:ಮುವಿಪ/ಅಮುವಿಪ/ವಿಪ(ಪ)/ಪರೀಕ್ಷೆ/1483/2025–26 ದಿನಾಂಕ: 13.06.2025

ಪರೀಕ್ಷಾ ಅಧಿಸೂಚನೆ

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ನಡೆಸುವ 2024–2025 ಹಾಗೂ 2025–26ನೇ ಸಾಲಿನ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ (ಗ್ರೇಡ್–2) ರಹದಾರಿ, ವಿದ್ಯುತ್ ಮೇಲ್ವಿಚಾರಕರ ಗಣಿ (ಗ್ರೇಡ್–1 ಮತ್ತು ಗ್ರೇಡ್–2) ರಹದಾರಿ ಮತ್ತು ತಂತಿ ಕೆಲಸಗಾರರ (ಗ್ರೇಡ್–2) ರಹದಾರಿ ನೀಡುವ ಪರೀಕ್ಷೆಗಳನ್ನು ನಡೆಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಜಿಗಳನ್ನು ಆಯಾ ಜಿಲ್ಲೆಯ/ಕ್ಷೇತ್ರಿಯ ಉಪ ವಿದ್ಯುತ್ ಪರಿವೀಕ್ಷಕರುಗಳಿಗೆ **01.07.2025** ರಿಂದ **15.08.2025** ರವರೆಗೆ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ವೆಬ್‌ಸೈಟ್ https://ksei.karnataka.gov.in ರಲ್ಲಿ ಆನ್‌ಲೈನ್ ಸೇವೆಗಳು–>ಇ–ಸೇವೆಗಳು–> ಪರೀಕ್ಷೆ ವಿಭಾಗದಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸುವಂತೆ ತಿಳಿಸಲಾಗಿದೆ.

ಸೂಚನೆ: ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ತಾಂತ್ರಿಕ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ಸಂಖ್ಯೆ: 080–23371693 ಅನ್ನು ಸಂಪರ್ಕಿಸಬಹುದು.

ಸಹಿ/–
ಮುಖ್ಯ ವಿದ್ಯುತ್ ಪರಿವೀಕ್ಷಕರು ಮತ್ತು
ಪದನಿಮಿತ್ತ ಅಪರ ಕಾರ್ಯದರ್ಶಿಗಳು (ಪರವಾನಗಿ),
ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಜೆಎ/1250/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, ಟೆಂಡರ್ ನಿರ್ದಿಷ್ಟತೆ, ಜಿಟಿಪಿ ಮತ್ತು ಡ್ರಾಯಿಂಗ್ ಪ್ರಕಾರ 25ಕೆವಿಎ, ಸ್ಟಾರ್–1 (4–ಸ್ಟಾರ್) ಶ್ರೇಣಿಯ, 11kV/433V, 3–ಫೇಸ್, 50 ಸೈಕಲ್ಸ್, ಅಲ್ಯೂಮಿನಿಯಂ ವೌಂಡ್, ಸಿ.ಆರ್.ಜಿ.ಒ ಕೋರ್ ವಿತರಣಾ ಪರಿವರ್ತಕಗಳ ತಯಾರಿಕೆ, ಪರೀಕ್ಷೆ ಮತ್ತು ಪೂರೈಕೆ – ಸರಬರಾಜು ಮಾಡಲು ಅರ್ಹ ಬಿಡ್ಡುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿವರಣೆ	ವಿಚಾರಣೆ ಸಂಖ್ಯೆಗಳು
1	ತುಮಕೂರು ವೃತ್ತ	ಬೆಸ್ಕಾಂ/2025–26/ಐಎನ್‌ಡಿ0128
2	ದಾವಣಗೆರೆ ವೃತ್ತ	ಬೆಸ್ಕಾಂ/2025–26/ಐಎನ್‌ಡಿ0129
3	ಕೋಲಾರ ವೃತ್ತ	ಬೆಸ್ಕಾಂ/2025–26/ಐಎನ್‌ಡಿ0130
4	ರಾಮನಗರ ವೃತ್ತ	ಬೆಸ್ಕಾಂ/2025–26/ಐಎನ್‌ಡಿ0131
5	ಬೆಂಗಳೂರು ಗ್ರಾಮೀಣ ವೃತ್ತ	ಬೆಸ್ಕಾಂ/2025–26/ಐಎನ್‌ಡಿ0132

ಬಿಡ್ ದಸ್ತಾವೇಜುಗಳ ಲಭ್ಯತೆ : 19.06.2025. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ :** 18.07.2025, 17:00 ಗಂಟೆಗಳು. **ಬಿಡ್ ದಸ್ತಾವೇಜು ತೆರೆಯುವುದು :** 19.07.2025, 17:15 ಗಂಟೆಗಳು.

ಕೆಪಿಪಿ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in.** ಮೂಲಕ ಟೆಂಡರ್‌ಗಳನ್ನು ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಮುಂದೆ, ಬಿಡ್ಡುದಾರರು ಕೆಪಿಪಿ ಸಹಾಯವಾಣಿ ಸಂಖ್ಯೆಗಳು (+91–8046010000, +91–8068948777) ಅಥವಾ ಇಮೇಲ್ **support@eprochelpdesk.com.** ನಿಂದ ಸಹಾಯವನ್ನು ಪಡೆಯಬಹುದು.
ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ),
ಖರೀದಿ, ಬೆವಿಕಂ

ಸರ್ಕಾರಿ ದಂತ ಕಾಲೇಜು & ಸಂಶೋಧನಾ ಸಂಸ್ಥೆ, ಬೆಂಗಳೂರು

ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು – 560 002.
ದೂರವಾಣಿ:080–26705053/26703176, ಇ–ಮೇಲ್:gdcribangalore@gmail.com
ವೆಬ್‌ಸೈಟ್ : www.karnataka.gov.in/gdcrib

ಸಂಖ್ಯೆ:ಸದಂಕಾಸಂಸಂ/ಸರಬ/6/2025–26 ದಿನಾಂಕ: 17.06.2025

ಪ್ರಕಟಣೆ

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಈ ಸಂಸ್ಥೆಯ ಕಟ್ಟಡ ನವೀಕರಣ, ಹೊಸದಾಗಿ ಮೂರು ಅಂತಸ್ತಿನ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತು ಉಪಕರಣ / ಪೀಠೋಪಕರಣಗಳ ಉನ್ನತೀಕರಣ ಮಾಡುವ ಸಲುವಾಗಿ ತಾಂತ್ರಿಕ ಸಲಹಾ ಸಮಿತಿಯನ್ನು (Technical Advisory Committee) ರಚಿಸಲು ಈ ಕೆಳಕಂಡ ಅರ್ಹತೆಯ ಮಾನದಂಡಗಳ ಅನುಸಾರ ಇಚ್ಛೆವುಳ್ಳ ಅಭ್ಯರ್ಥಿಗಳು ದಿನಾಂಕ: **24.06.2025 ರ ಅಪರಾಹ್ನ 4.00 ಗಂಟೆಯೊಳಗೆ** ಇ–ಮೇಲ್ ಮುಖೇನ ಅಥವಾ ಖುದ್ದಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕಛೇರಿಗೆ ನೀಡಲು ಕೋರಿದೆ.

Sl. No.	Name of the Post	Eligibility Criteria
1	Chair Person of the TAC Committee	Chairperson Technical Advisory Committee. Must be a retired government official, not below the rank of Chief Engineer. Should have led projects worth over INR 50 Crores, with proven experience in modern construction practices. Exposure to public infrastructure projects and multidisciplinary co-ordination skill.
2	Expert Member-Plumbing requirement	Must be a chief engineer, retired BWSSB Plumbing Works Expert. Expert in plumbing and sanitation systems in institutional or public infrastructure projects. Familiarity with medical-grade piping systems, drainage, and regulatory standards is required.
3	Expert Member-Civil requirement	Must be a retired government official, not below the rank of Chief Engineer. With proven experience in modern construction practices. Exposure to public infrastructure projects and multidisciplinary co-ordination skill. Having an experience in teaching would be an added advantage.
4	Expert Member-Electrical requirement	Must be a chief engineer, retired from KEB/ BESCOM. Electrical Works Expert. Professional with deep experience in electrical systems design and execution for institutional or government buildings. Must have handled large-scale projects involving power distribution, backup systems and safety compliance.
5	Expert Member - for dental education / Dentistry.	Dental Expert. Former principal (recd), any dental college of Karnataka with over twenty years of teaching experience. Should bring insights into academic workflows, infrastructure requirements for dental education, and future-readiness. Former Principal (Retd.), Any Dental College, Karnataka.
6	Expert Member - Technology for dental education / Dentistry.	Dental Expert. Former professor in any dental college of Karnataka with 20 years of teaching experience / practice in the field of Dentistry. should bring insights into academic workflows, infrastructure requirements for dental education and future-readiness. Professor in any Dental College, Karnataka.

ಅರ್ಜಿಗಳನ್ನು ದಿನಾಂಕ **24.06.2025** ರ ಸಂಜೆ 04.00 ಗಂಟೆಯೊಳಗೆ e-mail : gdcribangalore@gmail.com ಗೆ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳೊಂದಿಗೆ ಮೇಲ್ ಮಾಡಬಹುದು. ಅಥವಾ ಪ್ರತಿಗಳನ್ನು **"ಡೀನ್ ಮತ್ತು ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ"**, ವಿಕ್ಟೋರಿಯಾ ಆಸ್ಪತ್ರೆ ಕ್ಯಾಂಪಸ್, ಕೆ. ಆರ್. ಮಾರುಕಟ್ಟೆ, ಬೆಂಗಳೂರು – 560 002 ಇವರಿಗೆ ಸಲ್ಲಿಸಬಹುದು.

ಸಹಿ/–
ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

ವಾಸಾಸಂಇ/ವಾಪ್ರ/ಜೆಎ/1290/2025–26

ಕೆನರಾ ಬ್ಯಾಂಕ್ Canara Bank
Together We Can
ಸಿಂಡಿಕೇಟ Syndicate

ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಹುಬ್ಬಳ್ಳಿ

2ನೇ ಮಹಡಿ, ಸೆಂಟ್ರಮ್ ಬಿಲ್ಡಿಂಗ್, ಏರ್‌ಪೋರ್ಟ್ ರಸ್ತೆ, ಹುಬ್ಬಳ್ಳಿ – 580030.
ಫೋ: 0836–2239424/433/434

ಹುಬ್ಬಳ್ಳಿ ವೃತ್ತ ಕಛೇರಿ ಒಳಪಡುವ ಶಾಖೆಗಳಿಗೆ 'ಎ' ಮತ್ತು 'ಬಿಬಿ' ವರ್ಗದ ಟಿಆರ್‌ಟಿಎಲ್ ಜ್ಯುವೆಲ್ ಸೇಫಗಳ ಪೂರೈಕೆ ಮತ್ತು ಅನುಸ್ಥಾಪನೆಗೆ ಟೆಂಡರ

ಕೆನರಾ ಬ್ಯಾಂಕನ ವೃತ್ತ ಕಛೇರಿ ಒಳಪಡುವ ಶಾಖೆಗಳಿಗೆ 'ಎ' ಮತ್ತು 'ಬಿಬಿ' ವರ್ಗದ TRTL ಜ್ಯುವೆಲ್ ಸೇಫಗಳ ಪೂರೈಕೆ ಮತ್ತು ಅನುಸ್ಥಾಪನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರ ಮತ್ತು ಟೆಂಡರ ಫಾರ್ಮ್‌ಗಾಗಿ ನಮ್ಮ ವೆಬ್ ಸೈಟ್ www.canarabank.com ಅಥವಾ ಮೇಲ್ಕಾಣಿಸಿದ ವಿಳಾಸದಲ್ಲಿರುವ ನಮ್ಮ ಕಚೇರಿಯನ್ನು ಸಂಪರ್ಕಿಸಬಹುದು. ಮುಚ್ಚಿದ ಲಕೋಟೆಯಲ್ಲಿ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ **02–07–2025 ಬೆಳಗ್ಗೆ 11:00ರ** ವರೆಗೆ. ಟೆಂಡರ ಪ್ರತಿಕ್ರಿಯೆಯನ್ನು ಇ ಮಾರುಕಟ್ಟೆ (GeM) ಪೋರ್ಟಲ್ https://gem.gov.in/ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ **02–07–2025 ಬೆಳಗ್ಗೆ 11–00** ಘಂಟೆಯವರೆಗೆ. ಮುಂದಿನ ಯಾವುದೇ ಮಾಹಿತಿ, ತಿದ್ದುಪಡಿ ಏನೇ ಇದ್ದರೂ ಬ್ಯಾಂಕ್ ವೆಬ್ ಸೈಟ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಅಪೂರ್ಣ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಸ್ಥಳ: ಹುಬ್ಬಳ್ಳಿ ಸಹಿ/-
ದಿನಾಂಕ : 17-06-2025 ಉಪ ಪ್ರಧಾನ ವ್ಯವಸ್ಥಾಪಕರು

Government of India

MINISTRY OF FINANCE, DEPARTMENT OF REVENUE OFFICE OF THE COMMISSIONER OF CENTRAL TAX

5th Floor, C.R. Building Annexe,
Bengaluru South Commissionerate
PO 5400, C.R. Building (Annexe), 5th Floor, Bengaluru-560001.
Ph: 080-22869007, Email: Legalblr.south@gov.in

PROCLAMATION u/s 84 of BNSS, REQUIRING THE APPEARANCE OF PERSON BEFORE THE HON'BLE SPECIAL COURT FOR ECONOMICS OFFENCES, BANGALORE

In the case C.C. NO 32/2019 - The Assistant Commissioner of Central Excise (Legal) v/s Sri. H.G. Ramakrishna, the Hon'ble Special Court For Economic Offences, Bangalore has issued Proclamation u/s 82 of Criminal Procedure Code to the following accused.

i. A-3, Sri. H.G.Ramakrishna, Propreitor of M/s Filtraonics Electronics, No.156, Kempanna Building, Hulimavu, Bannerghatta Road, Bengalore-560076.

The above-mentioned person is directed to appear before the Hon'ble Special Court For Economic Offences, Bangalore on or before **30.07.2025.**

Sd/- Commissioner of Central Tax
Bangalore South Commissionerate

ಜಿಲ್ಲಾ ಪಂಚಾಯತ್, ತುಮಕೂರು.
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ,

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು.
ಕ್ಯಾತ್ಸಂದ್ರ, ಮೈದಾಳ ರಸ್ತೆ, ಬಸವಪಟ್ಟಣ, ತುಮಕೂರು–572104.
ದೂ: 0816–2278014 email:dobcmtumkur@gmail.com

ಸಂ:ಬಿಸಿಡಬ್ಲ್ಯೂ2/ಹೊ.ಸಿಬ್ಬಂದಿ/ಸಿ.ಆರ್–19/2024–25 ದಿನಾಂಕ: 11.06.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ "ಅಲ್ಪಾವಧಿ ಟೆಂಡರ"

2025–26ನೇ ಸಾಲಿಗೆ ತುಮಕೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ರಾತ್ರಿ ಕಾವಲುಗಾರರು, ತಾಲ್ಲೂಕು ಕಛೇರಿಯಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ಗಳ/ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 11/06/2025 ರಿಂದ 25/06/2025 ರವರೆಗೆ website;https://kppp.karnataka.gov.in. ನಲ್ಲಿ ಪಡೆಯಬಹುದಾಗಿದೆ, e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 25.06.2025ರ 17.30ಗಂಟೆಗೆ ನಿಗಧಿಪಡಿಸಿದೆ.

ಸಹಿ/– ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು

DIPR/TUM/156/KSMCA/2025-26

ಕರ್ನಾಟಕ ಸರ್ಕಾರ

ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂ : 080–2286 4681/4604, ಫ್ಯಾಕ್ಸ್: 080–2286 4619,
ಇ–ಮೇಲ್: dfkarnataka@rediffmail.com

ಸಂಖ್ಯೆ: DOF-TECHOBRS/09/2025-E-1795526 ದಿನಾಂಕ: 13.06.2025

ಮೀನುಮರಿ ಸರಬರಾಜಿಗೆ ಆಸಕ್ತಿ ವ್ಯಕ್ತಪಡಿಸುವಿಕೆ

2025–26 ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರಾಜ್ಯದ ವಿವಿಧ ನದಿ ಭಾಗಗಳಿಗೆ ಅಂದಾಜು 80.00 ಲಕ್ಷ ಸಂಖ್ಯೆಯ 80–100 ಮೀ.ಮೀ. ಗಾತ್ರದ ಬಲಿತ ಬಿತ್ತನೆ ಮೀನುಮರಿಗಳನ್ನು ಸರ್ಕಾರ ನಿಗದಿಪಡಿಸಿರುವ ದರಗಳಲ್ಲಿ (ಸಾಗಾಣಿಕೆ ವೆಚ್ಚ ಸೇರಿ) ಅನುದಾನ ಲಭ್ಯತೆಗನುಗುಣವಾಗಿ ಸರಬರಾಜು ಮಾಡಲು ಮೀನುಗಾರಿಕೆ ಇಲಾಖೆಯಲ್ಲಿ ನೋಂದಾಯಿಸಿರುವ ಆಸಕ್ತ ಮೀನುಮರಿ ಪಾಲನೆದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸ್ಪಾನ್ ಮೀನುಮರಿಗಳನ್ನು ಸರ್ಕಾರಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಕಡ್ಡಾಯವಾಗಿ ಖರೀದಿಸಿ ಪಾಲನೆ ಮಾಡಿರತಕ್ಕದ್ದು.

ಕ್ರ. ಸಂ.	ಬಲಿತ ಬಿತ್ತನೆ ಮೀನುಮರಿ ತಳಿಗಳು	ದರ ಪ್ರತಿ ಮೀನುಮರಿಗೆ (ರೂ.ಗಳಲ್ಲಿ)	
1	ಕಟ್ಲಾ	1.50	ನಿಗಧಿತ ಅರ್ಜಿ ಮತ್ತು ಷರತ್ತು ನಿಬಂಧನೆಗಳ ನಮೂನೆಗಳನ್ನು ಮೀನುಗಾರಿಕೆ ನಿರ್ದೇಶನಾಲಯದಲ್ಲಿ ಅಥವಾ ಇಲಾಖೆಯ ವಲಯ/ಜಿಲ್ಲಾ/ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಹಾಗೂ ಅಂತರ್ಜಾಲ www.fisheries.karnataka.gov.in ನಲ್ಲಿ ದಿನಾಂಕ: 18.06.2025 ರಿಂದ ಪಡೆಯಬಹುದು.
2	ರೋಹು	1.20	
3	ಮೃಗಾಲ್	1.20	
4	ಸಾಮಾನ್ಯ ಗೆಂಡೆ	1.20	

ಅರ್ಜಿ ನಮೂನೆ ಸಲ್ಲಿಸಲು ಕಡೆಯ **ದಿನಾಂಕ: 18.07.2025 ಸಂಜೆ 5.30 ಗಂಟೆ,** ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಅರ್ಜಿ ಸಲ್ಲಿಸಬೇಕಾದ ವಿಳಾಸ : ಸಂಬಂಧಿಸಿದ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ

ಸಹಿ/–
ಮೀನುಗಾರಿಕೆ ನಿರ್ದೇಶಕರು

ವಾಸಾಸಂಇ/ವಾ.ಪ್ರ/1295/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಐ.ಎಫ್‌.ಟಿ ಸಂಖ್ಯೆ 03/2025–26 ದಿನಾಂಕ: 13.06.2025

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" KW-1 KW-2 & KW-3 ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು 6–ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕ್ರ.ಸಂ 1 ರಿಂದ 3 ದಿ: 13.06.2025 ಮತ್ತು ಕ್ರ.ಸಂ 4 ರಿಂದ 6 ದಿ: 17.06.2025 ರಂದು ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 69.70 ಲಕ್ಷಗಳು ಮತ್ತು ಕನಿಷ್ಠ 7.76 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.1,39,400/– ಮತ್ತು ಕನಿಷ್ಠ ರೂ.9,700/– ಗುತ್ತಿಗೆ ಕಾಲಾವದಿ ಗರಿಷ್ಠ 3–ತಿಂಗಳು ಮತ್ತು ಕನಿಷ್ಠ 45–ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕ್ರ.ಸಂ–1 ರಿಂದ 3 ದಿ: 23.06.2025 ಮತ್ತು ಕ್ರ.ಸಂ–4 ರಿಂದ 6 ದಿ: 26.06.2025 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/471/KSMCA/289/2025-26

ಚೀನಾ–ಪಾಕ್ ಸೇನಾ ಸಂಬಂಧ: ಸ್ಥಾಯಿ ಸಮಿತಿ ಚರ್ಚೆ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ನಂತರ, ಪಾಕಿಸ್ತಾನದ ಜತೆಗೆ ಬಲಗೊಂಡಿರುವ ಚೀನಾದ ಸೇನಾ ಸಂಬಂಧ ಮತ್ತು ಈ ನಿಟ್ಟಿನಲ್ಲಿ ಭಾರತ ಕೈಗೊಳ್ಳಬೇಕಾದ ಸನ್ನದ್ಧತೆಗಳ ಕುರಿತು ಶಶಿ ತರೂರ್ ಅಧ್ಯಕ್ಷತೆಯಲ್ಲಿನ ವಿದೇಶಾಂಗ ವ್ಯವಹಾರಗಳ ಸ್ಥಾಯಿ ಸಮಿತಿ ಚರ್ಚೆ ನಡೆಸಿತು.

ಚೀನಾ, ಪಾಕಿಸ್ತಾನ, ಬಾಂಗ್ಲಾದೇಶ ಭಾರತದ ಹಿತಾಸಕ್ತಿಗೆ ವಿರುದ್ಧವಾಗಿ ಬೆಳೆಯುತ್ತಿರುವ ಕುರಿತೂ ವಿಪಕ್ಷ ಮುಖಂಡರು ಸಮಿತಿಯ ಗಮನ ಸೆಳೆದರು. ಕಳೆದ ಕೆಲವು ದಶಕಗಳಿಂದ, ದೇಶದ ರಕ್ಷಣಾ ಬಜೆಟ್‌ನಲ್ಲಿ ಜಿಡಿಪಿ ಪಾಲು ಗಣನೀಯವಾಗಿ ಕಡಿಮೆಯಾಗುತ್ತಿರುವ ಬಗ್ಗೆ ಕಾಂಗ್ರೆಸ್ ಸಂಸದ ದೀಪೇಂದರ್ ಸಿಂಗ್ ಹೂಡ ಆರೋಪಿಸಿದ್ದಾಗಿ ಮೂಲಗಳು ತಿಳಿಸಿವೆ.

ಸ್ಥಾಯಿ ಸಮಿತಿ ಸಭೆಗೂ ಮುನ್ನ 'ಭಾರತದ ಹಿಂದೂ ಮಹಾಸಾಗರದ ಕಾರ್ಯತಂತ್ರ'ದ ಕುರಿತು ಶಶಿ ತರೂರ್, ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್, ನೌಕಾಪಡೆಯ ಹಿರಿಯ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. ನೌಕಾಪಡೆಯ ಆಧುನೀಕರಣ ಮತ್ತು ಬಲವರ್ಧನೆಗೆ ಒತ್ತು ನೀಡಿ ದೀರ್ಘಾವಧಿಯ ಯೋಜನೆಗಳನ್ನು ರೂಪಿಸುವ ಕುರಿತು ರಾಜೇಶ್ ಕುಮಾರ್ ಸಿಂಗ್ ಸಲಹೆಗಳನ್ನು ನೀಡಿದರು.

ಠಾಣೆ: ಭಾರಿ ಮಳೆ ಧರೆಗುರುಳಿದ ಮರ, ಗೋಡೆ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ನಗರದಲ್ಲಿ ಬಿರುಗಾಳಿ ಸಹಿತ ಭಾರಿ ಮಳೆ ಸುರಿದಿದ್ದು, ಮರ ಉರುಳಿ ಬಿದ್ದಿರುವ ಮತ್ತು ಗೋಡೆ ಕುಸಿದಿರುವ ಬಗ್ಗೆ ಹಲವು ದೂರುಗಳು ಬಂದಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ವಶಿಯಲ್ಲಿ ಸೋಮವಾರ ಸಂಜೆ ವಾಣಿಜ್ಯ ಕಟ್ಟಡವೊಂದರ ಗೋಡೆ ಕುಸಿದು ಏಳು ವಾಹನಗಳಿಗೆ ಹಾನಿಯಾಗಿದೆ' ಎಂದು ಠಾಣೆ ನಗರ ಪಾಲಿಕೆಯ ವಿಪತ್ತು ನಿರ್ವಹಣಾ ವಿಭಾಗ ತಿಳಿಸಿದೆ.

'ಮಂಗಳವಾರ ಮುಂಜಾನೆ 8:30ರವರೆಗಿನ 24 ಗಂಟೆಗಳ ಅವಧಿಯಲ್ಲಿ ನಗರದಲ್ಲಿ 11.4 ಸೆಂ.ಮೀ ಮಳೆಯಾಗಿದೆ. ಈ ಮುಂಗಾರಿನಲ್ಲಿ ನಗರದಲ್ಲಿ ಈವರೆಗೆ 53.4 ಸೆಂ.ಮೀ ಮಳೆಯಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ 14.6 ಸೆಂ.ಮೀ ಮಳೆ ಸುರಿದಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತುರ್ತು ಪರಿಸ್ಥಿತಿ: ಜೈಲು ಸೇರಿದ್ದವರ ಗೌರವಧನ ಹೆಚ್ಚಳ'

ಮುಂಬೈ (ಪಿಟಿಐ): ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲು ಸೇರಿದ್ದ ವ್ಯಕ್ತಿಗಳಿಗೆ ನೀಡಲಾಗುವ ಗೌರವಧನವನ್ನು ದುಪ್ಪಟ್ಟುಗೊಳಿಸುವ ನಿರ್ಧಾರಕ್ಕೆ ಮಹಾರಾಷ್ಟ್ರ ಸಚಿವ ಸಂಪುಟ ಮಂಗಳವಾರ ಅನುಮತಿ ನೀಡಿದೆ.

ದೇವೇಂದ್ರ ಫಡಣವೀಸ್

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, 'ಗೌರವ ಯೋಜನಾ'ದಲ್ಲಿನ ಬದಲಾವಣೆಗಳಿಗೆ ಅನುಮತಿ ದೊರೆತಿದೆ. ಜೈಲು ಸೇರಿದ್ದ ವ್ಯಕ್ತಿಯ ಸಂಗಾತಿಯನ್ನೂ ಫಲಾನುಭವಿ ಎಂದು ಪರಿಗಣಿಸಲು ನಿರ್ಧರಿಸಲಾಗಿದೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ(1975–1977) ಒಂದು ತಿಂಗಳು ಜೈಲಿನಲ್ಲಿದ್ದವರಿಗೆ 'ಗೌರವ್ ಯೋಜನಾ'ದಡಿಯಲ್ಲಿ ಮಾಸಿಕ ₹5 ಸಾವಿರ ಗೌರವಧನ ನೀಡಲಾಗುತ್ತಿದೆ. ಅದಕ್ಕಿಂತ ಹೆಚ್ಚು ಅವಧಿ ಜೈಲಿನಲ್ಲಿದ್ದವರಿಗೆ ಮಾಸಿಕ ₹10 ಸಾವಿರ ನೀಡಲಾಗುತ್ತಿದೆ. ಇನ್ನು ಮುಂದೆ ಇದು ದ್ವಿಗುಣಗೊಳ್ಳಲಿದೆ.

ಜೈಪುರದಲ್ಲಿ ಪೈಲಟ್ ಅಂತ್ಯಕ್ರಿಯೆ

ಜೈಪುರ (ಪಿಟಿಐ): ಕೇದಾರನಾಥ ಹೆಲಿಕಾಪ್ಟರ್ ಪತನದಲ್ಲಿ ಮೃತಪಟ್ಟ ಪೈಲಟ್ ರಾಜ್‌ವೀರ್ ಸಿಂಗ್ ಚೌಹಾಣ್ ಅವರ ಅಂತಿಮಸಂಸ್ಕಾರವನ್ನು ಜೈಪುರದಲ್ಲಿ ಮಂಗಳವಾರ ನೆರವೇರಿಸಲಾಯಿತು.

ಇದಕ್ಕೂ ಮುನ್ನ ಚೌಹಾಣ್ ಅವರ ಪತ್ನಿ ಲೆಫ್ಟಿನೆಂಟ್ ಕರ್ನಲ್ ದೀಪಿಕಾ ಅವರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಅಸಂಖ್ಯಾತ ಜನರು, ಕುಟುಂಬಸ್ಥರು, ಬಂಧು–ಮಿತ್ರರು ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದರು.

ಮಳೆ: ಎಲ್ಲಿ, ಎಷ್ಟು? (ಸೆಂ. ಮೀಟರ್‌ಗಳಲ್ಲಿ)	
ಶಿವಮೊಗ್ಗ ಜಿಲ್ಲೆ	
ಮಾಸ್ತಿಕಟ್ಟೆ	21.3
ಹುಲಿಕಲ್	20.1
ಮಾಣಿ	16.4
ಯಡೂರು	15.6,
ಚಕ್ರಾ	14.8
ಸಾವೆಹಕ್ಲು	12.7
ಆಗುಂಬೆ	14.2
ಕೊಡಗು ಜಿಲ್ಲೆ	
ಭಾಗಮಂಡಲ	19.5
ಶಾಂತಳ್ಳಿ	14
ಸಂಪಾಜೆ	11
ಮಡಿಕೇರಿ, ನಾಪೋಕ್ಲು	9
ಪೊನ್ನಂಪೇಟೆ, ಹುದಿಕೇರಿ	8
ವಿರಾಜಪೇಟೆ, ಸೋಮವಾರಪೇಟೆ	7

ಧಾರಾಕಾರ ಮಳೆಯಿಂದಾಗಿ ಕೊಡಗು ಜಿಲ್ಲೆಯ ಭಾಗಮಂಡಲ ಮಂಗಳವಾರ ಜಲಾವೃತವಾಗಿದೆ
ಚಿತ್ರ: ಚಂದ್ರಶೇಖರ ಎಸ್. ಚಿನಕೇಕರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಮಂಗಳೂರು ನಗರದ ಹೊರವಲಯದಲ್ಲಿರುವ ಅಡ್ಯಾರ್ ಫಾಲ್ಸ್ ತುಂಬಿ ಹರಿಯುತ್ತಿದ್ದು, ಯುವಕರು ನೀರಾಟದಲ್ಲಿ ತೊಡಗಿದ್ದ ದೃಶ್ಯ ಮಂಗಳವಾರ ಕಂಡುಬಂದಿತು ಚಿತ್ರ: ಫಕ್ರುದ್ದೀನ್ ಎಚ್.

ಚಿಕ್ಕೋಡಿ: ಮಹಿಳೆ ನದಿ ಪಾಲು

ಪ್ರಜಾವಾಣಿ ವಾರ್ತೆ

ಸಂಗೀತಾ ಮಾಂಜರೇಕರ

ಚಿಕ್ಕೋಡಿ: ತಾಲ್ಲೂಕಿನ ಮಾಂಜರಿ ಗ್ರಾಮದ ಬಳಿ ಕೃಷ್ಣಾ ನದಿಗೆ ಮಂಗಳವಾರ ಪೂಜೆಗೆ ತೆರಳಿದ್ದ ಸಂಗೀತಾ ಶಿವಾಜಿ ಮಾಂಜರೇಕರ(41) ಅವರು ನೀರು ಪಾಲಾಗಿದ್ದಾರೆ.

ಅಗ್ನಿಶಾಮಕ ದಳ, ರಾಜ್ಯ ವಿಪತ್ತು ನಿರ್ವಹಣಾ ಪಡೆ ಶೋಧ ನಡೆಸಿದೆ. ಈ ಬಗ್ಗೆ ಅಂಕಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಟಿಕೆ ಸುದ್ದಿ

ಬಸವಸಾಗರ ಬಹುತೇಕ ಭರ್ತಿ

ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ ನೀರು ಹರಿಸಲಾಯಿತು

ಹುಣಸಗಿ (ಯಾದಗಿರಿ ಜಿಲ್ಲೆ): ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಮಳೆ ಹಿನ್ನೆಲೆಯಲ್ಲಿ ತಾಲ್ಲೂಕಿನ ನಾರಾಯಣಪುರದ ಬಸವಸಾಗರ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ.

ಜಲಾಶಯಕ್ಕೆ ಜೂನ್ 17ರ ಸಂಜೆ 30 ಸಾವಿರ ಕ್ಯುಸೆಕ್ ಒಳಹರಿವು ದಾಖಲಾಗಿದೆ. ಜಲಾಶಯ ಬಹುತೇಕ ಭರ್ತಿಯಾಗಿದ್ದು, ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಮಂದಹಾಸ ಮೂಡುವಂತೆ ಮಾಡಿದೆ. ಮಂಗಳವಾರ ಬೆಳಿಗ್ಗೆ 12 ಸಾವಿರ ಕ್ಯೂಸೆಕ್ ಇದ್ದ ಒಳಹರಿವು ಸಂಜೆಗೆ 30 ಸಾವಿರ ಕ್ಯೂಸೆಕ್ ಹೆಚ್ಚಿತು. ಅಷ್ಟೇ ಪ್ರಮಾಣದಲ್ಲಿ ನದಿಗೆ ನೀರು ಹರಿಸಲಾಗುತ್ತಿದೆ. ಈಗಾಗಲೇ ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಹತ್ತಿ, ತೊಗರಿ ಬಿತ್ತನೆ ಮಾಡಿದ್ದು, ನೀರಾವರಿ ಆಧರಿತ ಪ್ರದೇಶದಲ್ಲಿ ಒಂದು ವಾರದಲ್ಲಿ ಭತ್ತ ನಾಟಿಗೆ ಬೀಜ ಚೆಲ್ಲಲು ಅಣಿಯಾಗುತ್ತಿದ್ದಾರೆ.

ಲಿಂಗನಮಕ್ಕಿ ಒಳಹರಿವು ಏರಿಕೆ

ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯ

ಶಿವಮೊಗ್ಗ: ವಾರಾಹಿ ಯೋಜನಾ ಪ್ರದೇಶ, ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಿಂದಾಗಿ ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯಕ್ಕೆ ಎರಡು ದಿನಗಳಲ್ಲಿ ಆರು ಅಡಿ ನೀರು ಬಂದಿದೆ. ಸಂಗ್ರಹವಾಗಿದೆ. ಈ ಹಂಗಾಮಿನಲ್ಲಿ ಮೊದಲ ಬಾರಿಗೆ ಒಳಹರಿವಿನ ಪ್ರಮಾಣ 50,000 ಕ್ಯೂಸೆಕ್ ದಾಟಿದೆ. ಲಿಂಗನಮಕ್ಕಿಯಲ್ಲಿ ಕಳೆದ ವರ್ಷ ಇದೇ ದಿನ 1,745.05 ಅಡಿ ಸಂಗ್ರಹ ಇತ್ತು. ಮಳೆ ಹೀಗೆಯೇ ಮುಂದುವರೆದಲ್ಲಿ ಜಲಾಶಯ ಈ ವರ್ಷ ಬೇಗನೇ ಭರ್ತಿ ಆಗುವ ವಿಶ್ವಾಸವಿದೆವದೆ.

ಭದ್ರೆಗೂ ಒಳಹರಿವು ಹೆಚ್ಚಳ: ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ ಮಂಗಳವಾರ ಒಳಹರಿವಿನ ಪ್ರಮಾಣ 6,999 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಕಳೆದ ವರ್ಷ ಇದೇ ದಿನ 118.11 ಅಡಿ ನೀರಿನ ಸಂಗ್ರಹ ಇತ್ತು. ಹಿಂದಿನ ವರ್ಷಕ್ಕಿಂತ 27 ಅಡಿಯಷ್ಟು ನೀರು ಈಗ ಜಲಾಶಯದಲ್ಲಿ ಶೇಖರಣೆಗೊಂಡಿದೆ.

‘ಮಹಾ’ ಮಳೆ: 4 ಸೇತುವೆ ಜಲಾವೃತ

ಕರ್ನಾಟಕ– ಮಹಾರಾಷ್ಟ್ರ ನಡುವೆ ವಾಹನಗಳ ಸಂಚಾರ ಬಹುತೇಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ಘಟ್ಟ ಪ್ರದೇಶ ಮತ್ತು ಚಿಕ್ಕೋಡಿ ಉಪ ವಿಭಾಗದಲ್ಲಿ ಬೀಳುತ್ತಿರುವ ಮಳೆಯಿಂದ ಕೃಷ್ಣಾ ಹಾಗೂ ದೂಧಗಂಗಾ ನದಿಗಳಲ್ಲಿ ನೀರಿನ ಹರಿವು ಏರಿಕೆ ಆಗಿದೆ.

ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ– ಯಡೂರ, ಮಲಿಕವಾಡ– ದತ್ತವಾಡ, ನಿಪ್ಪಾಣಿ ತಾಲ್ಲೂಕಿನ ಬಾರವಾಡ– ಕುನ್ನೂರ, ಕಾರದಗಾ– ಭೋಜ ಸೇತುವೆಗಳು ಜಲಾವೃತಗೊಂಡಿವೆ. ಈ ಮಾರ್ಗದಲ್ಲಿ ಕರ್ನಾಟಕ– ಮಹಾರಾಷ್ಟ್ರ ನಡುವೆ ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

ಮಹಾರಾಷ್ಟ್ರದ ಕೊಯ್ನಾ ಜಲಾನಯನ ಪ್ರದೇಶದಲ್ಲಿ 13.7 ಸೆಂ.ಮೀ ದಾಖಲಾಗಿದ್ದು, ಉಳಿದಂತೆ ಆ ಭಾಗದ ವಾರಣಾ, ಕಾಳಮ್ಮವಾಡಿ, ಮಹಾಬಲೇಶ್ವರ, ಸಾಂಗ್ಲಿ, ಕೊಲ್ಹಾಪುರ ವ್ಯಾಪ್ತಿಯಲ್ಲೂ ಮಂಗಳವಾರ ಧಾರಾಕಾರವಾಗಿ ಮಳೆಯಾಗಿದೆ

ಕೊಲ್ಹಾಪುರ ಜಿಲ್ಲೆ ರಾಜಾಪೂರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 44,125 ಕ್ಯೂಸೆಕ್ ಹೊರ ಹರಿವು ಇದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಬಳಿ ದೂಧಗಂಗಾ ನದಿಗೆ 15,840 ಕ್ಯೂಸೆಕ್ ಒಳ ಹರಿವು ಇದೆ. ಕಲ್ಲೋಳ– ಯಡೂರ ಕಿರು ಸೇತುವೆ ಬಳಿ 59,965 ಕ್ಯೂಸೆಕ್ ಹರಿವು ಇದೆ.

ಕರಾವಳಿ: ತಗ್ಗಿದ ಮಳೆ ಅಬ್ಬರ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಂಗಳವಾರ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಭಾಗದಲ್ಲಿ ಅಲ್ಪ ಮಳೆಯಾಗಿದೆ.

ಉಡುಪಿಯ ಕುಂದಾಪುರ, ಬೈಂದೂರು ವ್ಯಾಪ್ತಿಯಲ್ಲಿ ಉಂಟಾಗಿದ್ದ ನೆರೆ ಪ್ರಮಾಣ ಅಲ್ಪ ಇಳಿಕೆಯಾಗಿದೆ. ಹೆಬ್ರಿ, ಕಾರ್ಕಳ, ಕಾಪು, ಬ್ರಹ್ಮಾವರ ವ್ಯಾಪ್ತಿಯಲ್ಲೂ ಸಾಧಾರಣ ಮಳೆ ಸುರಿದಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರಾಸರಿ 13, ಚಿಕ್ಕಮಗಳೂರು ಜಿಲ್ಲೆಯಲ್ಲಿ 9 ಸೆಂ.ಮೀ.ಮಳೆಯಾಗಿದೆ.

ಭಟ್ಕಳ ಸಮುದ್ರ ತೀರಕ್ಕೆ ಬಂದ ಬಾರ್ಜ್

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮಂಗಳೂರಿನಿಂದ ಮುಂಬೈಗೆ ತೆರಳುತ್ತಿದ್ದ ಸುಮಾರು 70 ಮೀಟರ್ ಉದ್ದದ ಬಾರ್ಜ್ ಸೋಮವಾರ ರಾತ್ರಿ ಭಟ್ಕಳದ ಜಾಲಿ ಕಡಲತೀರಕ್ಕೆ ಬಂದು ಸಿಲುಕಿದೆ. ಇದು ಕೇರಳದ ಕೊಚ್ಚಿನ್ ಶಿಪ್ ಯಾರ್ಡ್‌ಗೆ ಸೇರಿದ ಬಾರ್ಜ್.

ಟಗ್ ಬೋಟ್ ನೆರವಿನಿಂದ ರೋಪ್ ಕಟ್ಟಿಕೊಂಡು ಈ ಬಾರ್ಜ್‌ನ್ನು ಮುಂಬೈಗೆ ಒಯ್ಯಲಾಗುತ್ತಿತ್ತು. ಮಧ್ಯರಾತ್ರಿ ಸಮುದ್ರದಲ್ಲಿ ಭಾರಿ ಗಾಳಿ ಬೀಸಿದ್ದರಿಂದ ಅಲೆಗೆ ಸಿಲುಕಿ, ಕಟ್ಟಿದ ಹಗ್ಗ ತುಂಡಾಗಿ ಬಾರ್ಜ್ ಸಮುದ್ರ ತೀರಕ್ಕೆ ಬಂದು ಅಪ್ಪಳಿಸಿದೆ.

ಕಾರ್ಯಾಚರಣೆ ಕಷ್ಟ: ಮಂಗಳವಾರ ಸಮುದ್ರ ತೀರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಕಂಪನಿಯ ಸಿಬ್ಬಂದಿ, ‘ಸಾವಿರಾರು ಟನ್ ಭಾರದ ಬಾರ್ಜ್ ಸಮುದ್ರದ ಉಸುಕಿನಲ್ಲಿ ಹುದುಗಿದೆ. ತೆರವು ಕಾರ್ಯ ಅಸಾಧ್ಯ. ಏರಿಳಿತ ತಗ್ಗಿದ ಬಳಿಕ ತೆರವು ಮಾಡಬಹುದು’ ಎಂದು ಕರಾವಳಿ ಕಾವಲು ಪಡೆಯ ಸಿಪಿಐ ಕುಸುಮಧರ ಅವರಿಗೆ ತಿಳಿಸಿದ್ದಾರೆ.

ದೊಡ್ಡತಪ್ಪಲೆ ಬಳಿ ಭೂಕುಸಿತ

ಹಾಸನ/ಸಕಲೇಶಪುರ: ಜಿಲ್ಲೆಯಾದ್ಯಂತ ಮುಂದಿನ 3 ದಿನ ಭಾರಿ ಗಾಳಿಯೊಂದಿಗೆ ಮಳೆ ಸುರಿಯುವ ಮುನ್ನೆಚ್ಚರಿಕೆ ನೀಡಲಾಗಿದೆ. ಸಕಲೇಶಪುರ, ಚಿಕ್ಕಮಗಳೂರು ಭಾಗದಲ್ಲಿ ಮಳೆ ಆಗುತ್ತಿದ್ದು, ಹೇಮಾವತಿ ಜಲಾಶಯಕ್ಕೆ 8,276 ಕ್ಯೂಸೆಕ್ ನೀರು ಬರುತ್ತಿದೆ. ನದಿ, ನಾಲೆಗಳು ಸೇರಿ ಒಟ್ಟು 350 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ.

ತಾಲ್ಲೂಕಿನ ದೋಣಿಗಾಲ್ ಸಮೀಪದ ದೊಡ್ಡತಪ್ಪಲೆ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಮುಂಜಾನೆ 3 ಗಂಟೆ ಸುಮಾರಿಗೆ ಮಣ್ಣು ಕುಸಿದು 3 ಗಂಟೆ ಸಂಚಾರ ಸ್ಥಗಿತವಾಗಿತ್ತು.

ಯಾರಿಗೂ ತೊಂದರೆಯಾಗಿಲ್ಲ. ಆದರೆ, ಮಣ್ಣು–ಮರಗಳು ಹೆದ್ದಾರಿಯ ಮೇಲೆ ಅಡ್ಡಲಾಗಿ ಬಿದ್ದಿದ್ದರಿಂದ ಸಾವಿರಾರು ಪ್ರಯಾಣಿಕರು ಗಂಟೆಗಟ್ಟಲೆ ವಾಹನಗಳನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸಿಕೊಂಡು ಕಾಯಬೇಕಾಯಿತು.

ಪೊಲೀಸರು ಸ್ಥಳಕ್ಕೆ ಬಂದು, ಚತುಷ್ಪಥ ಕಾಮಗಾರಿ ಮಾಡುತ್ತಿರುವ ಗುತ್ತಿಗೆದಾರರ ಕಂಪನಿಯ ಯಂತ್ರಗಳನ್ನು ತರಿಸಿ, ಮಣ್ಣು ಹಾಗೂ ಮರಗಳನ್ನು ತೆರವು ಮಾಡಿದರು. ಬೆಳಿಗ್ಗೆ 4.50ರ ಸುಮಾರಿಗೆ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬೆಳಗಿನ ಜಾವ ಮಣ್ಣು ಕುಸಿದಿತ್ತು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	111	16,936	951
ಹಾರಂಗಿ	2,859	2,850.35	8,000	18,000
ಕಬಿನಿ	2,284.00	2,279.76	21,404	10,000
ಹೇಮಾವತಿ	2,922	2,909.25	8,276	350
ಲಿಂಗನಮಕ್ಕಿ	1,819	1,769.70	50,576	2,550.76
ಸೂಪಾ (ಮೀ)	564	530.56	17,421	29,255
ಮಾಣಿ	595	579.59	6,724	-
ತುಂಗಭದ್ರಾ	1,633	1,605.27	14,621	160
ಮಲಪ್ರಭಾ	2,079.5	2,052.45	6,217	194
ಘಟಪ್ರಭಾ	2,175	2,109.01	13,709	115
ಭದ್ರಾ *	186	145.5	6,999	1,276
ಆಲಮಟ್ಟಿ (ಮೀ)	519.6	515.20	20,895	30,000
ನಾರಾಯಣಪುರ (ಮೀ)	492.25	490.49	30,000	30,075

* ನೆಲಮಟ್ಟದಿಂದ

111 ಅಡಿ ದಾಟಿದ ಕೆಆರ್‌ಎಸ್

ಶ್ರೀರಂಗಪಟ್ಟಣ (ಮಂಡ್ಯ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಯ ನೀರಿನ ಮಟ್ಟ 111 ಅಡಿಗೆ ತಲುಪಿದೆ. ಜಲಾಶಯಕ್ಕೆ 16,936 ಕ್ಯೂಸೆಕ್ ನೀರು ಹರಿದು ಬರುತ್ತಿದೆ.

‘ಇದೇ ಪ್ರಮಾಣದಲ್ಲಿ ನೀರು ಬಂದರೆ ನೀರಿನ ಮಟ್ಟದ 24 ಗಂಟೆಗಳಲ್ಲಿ 113 ಅಡಿ ತಲುಪಲಿದೆ’ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ವರ್ಷದ ಇದೇ ದಿನ ಜಲಾಶಯದಲ್ಲಿ 87 ಅಡಿ (14.22 ಟಿಎಂಸಿ) ನೀರಿತ್ತು. 2120 ಕ್ಯೂಸೆಕ್ ಒಳ ಹರಿವು, 461 ಕ್ಯೂಸೆಕ್ ಹೊರ ಹರಿವು ದಾಖಲಾಗಿತ್ತು. ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಒಳಹರಿವಿನ ಪ್ರಮಾಣ 21 ಸಾವಿರ ಕ್ಯೂಸೆಕ್‌ಗೆ ಏರಿದೆ. ಅಣೆಕಟ್ಟೆ ಭರ್ತಿಗೆ 4 ಅಡಿ ಬಾಕಿ ಇದೆ.

8 ತಾಸು ಸಂಚಾರ ಬಂದ್, ಪ್ರಯಾಣಿಕರು ಹೈರಾಣ

ಹುಲಿಕಲ್ ಘಾಟಿ: ಹೇರ್‌ಪಿನ್ ತಿರುವಿನಲ್ಲಿ ಆ್ಯಕ್ಸೆಲ್ ಕಟ್ ಆಗಿ ಕೆಟ್ಟುನಿಂತ ಲಾರಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹುಲಿಕಲ್ ಘಾಟಿಯ ಶಂಕರನಾರಾಯಣ ದೇವಸ್ಥಾನದ ಸಮೀಪ ಸೋಮವಾರ ತಡರಾತ್ರಿ ಹೇರ್ ಪಿನ್ ತಿರುವಿನಲ್ಲಿ ಲಾರಿ, ಆ್ಯಕ್ಸೆಲ್ ಕಟ್ ಆಗಿ ನಿಂತ ಪರಿಣಾಮ ಸುಮಾರು ಎಂಟು ತಾಸು ಉಡುಪಿ-ಶಿವಮೊಗ್ಗ ಜಿಲ್ಲೆಗಳ ನಡುವಿನ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಸರಕು ಹೊತ್ತ ಲಾರಿ ಶಿವಮೊಗ್ಗದಿಂದ ಉಡುಪಿ ಜಿಲ್ಲೆಯ ಸಿದ್ದಾಪುರದ ಕಡೆಗೆ ಹೊರಟಿತ್ತು. ಲಾರಿ ಕೆಟ್ಟು ರಸ್ತೆಗೆ ಅಡ್ಡಲಾಗಿ ನಿಂತ ಕಾರಣ, ಘಟ್ಟದ ಮೇಲಕ್ಕೆ ಬರುವ ಹಾಗೂ ಕೆಳಕ್ಕೆ ಹೋಗುವ ನೂರಾರು ವಾಹನಗಳು ಘಾಟಿಯಲ್ಲೇ ಉಳಿದವು. 10 ಕಿ.ಮೀನಷ್ಟು ದೂರ ದಟ್ಟಣೆ ಆಗಿತ್ತು. ವಿಪರೀತ ಮಳೆ, ಗುಡ್ಡ ಕುಸಿಯುವ ಭೀತಿಯಲ್ಲಿಯೇ ವಾಹನ ಸವಾರರು, ಪ್ರಯಾಣಿಕರು ರಸ್ತೆಯಲ್ಲೇ ಕಳೆದರು.

ಕೆಟ್ಟು ನಿಂತ ಲಾರಿಯನ್ನು ಕ್ರೇನ್ ಮೂಲಕ ತೆರವು ಮಾಡಿದ ನಂತರ, ಮಂಗಳವಾರ ಬೆಳಿಗ್ಗೆ 8.30ರಿಂದ ಮತ್ತೆ ವಾಹನಗಳ ಸಂಚಾರ ಆರಂಭವಾಯಿತು.

> ಘಾಟಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿರುವುದು ಗಮನಕ್ಕೆ ಬಂತು. ಕ್ರೇನ್ ಒಯ್ದು ಲಾರಿ ತೆರವುಗೊಳಿಸಲು ನಗರ ಪೊಲೀಸರಿಗೆ ಸೂಚನೆ ನೀಡಲಾಗಿತ್ತು
> **ಜಿ.ಕೆ.ಮಿಥುನ್ ಕುಮಾರ್,** ಶಿವಮೊಗ್ಗ ಎಸ್‌ಪಿ

ಪೊಲೀಸರು ಸ್ಪಂದಿಸಲಿಲ್ಲ: ‘ಪೊಲೀಸರಿಗೆ ರಾತ್ರಿಯೇ ಕರೆ ಮಾಡಿ ಲಾರಿ ತೆರವುಗೊಳಿಸಲು ಸಹಕರಿಸುವಂತೆ ಮನವಿ ಮಾಡಿದರೆ ಸ್ಪಂದಿಸಲಿಲ್ಲ. ಟ್ರಾಫಿಕ್ ಜಾಮ್ ಆಗಿದ್ದರೂ ಲಾರಿ ಚಾಲಕ ಹಾಗೂ ಕ್ಲೀನರ್ ನಿದ್ರೆಗೆ ಜಾರಿದ್ದರು’ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

‘ಮಳೆ, ಚಳಿಗೆ ಬಸ್‌ಗಳಲ್ಲಿದ್ದ ಮಕ್ಕಳು, ಮಹಿಳೆಯರು ನಲುಗಿದರು’ ಎಂದು ಪ್ರಯಾಣಿಕರು ತಿಳಿಸಿದರು.

ಹುಲಿಕಲ್ ಘಾಟಿ ಹೇರ್‌ಪಿನ್ ತಿರುವಿನಲ್ಲಿ ಆ್ಯಕ್ಸೆಲ್ ತುಂಡಾಗಿ ಲಾರಿ ಕೆಟ್ಟು ನಿಂತಿದ್ದರಿಂದ ಮಂಗಳವಾರ ಬೆಳಗಿನವರೆಗೆ ಸಂಚಾರ ಸ್ಥಗಿತಗೊಂಡಿತ್ತು

ಸಂಚಾರ ದಟ್ಟಣೆ ಹೆಚ್ಚಳ..

ಭಾರಿ ಮಳೆಯ ಕಾರಣ ಭೂ ಕುಸಿತದ ಭೀತಿಯಿಂದ ಆಗುಂಬೆ ಘಾಟಿಯಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ. ಅಂತೆಯೇ ಶಿವಮೊಗ್ಗ ಜಿಲ್ಲೆಯಿಂದ ಕರಾವಳಿ ಸಂಪರ್ಕಕ್ಕೆ ಹುಲಿಕಲ್ ಘಾಟಿ ಬಳಕೆ ಆಗುತ್ತಿದೆ. ಇದರಿಂದ ವಾಹನ ದಟ್ಟಣೆ ಹೆಚ್ಚಾಗಿದೆ. ವಾರದ ಹಿಂದೆ ಹುಲಿಕಲ್ ಘಾಟಿಯಲ್ಲೂ ಗುಡ್ಡ ಕುಸಿತ ಆಗಿದೆ. ಕೆಲವು ಕಡೆ ಕಿರಿದಾದ ದಾರಿಯಲ್ಲಿ ವಾಹನಗಳಿಗೆ ಸಂಚಾರಕ್ಕೆ ಅವಕಾಶ ಮಾಡಲಾಗಿದೆ.

ತ್ರಿವೇಣಿ ಸಂಗಮ ಮತ್ತೆ ಜಲಾವೃತ

ಮಡಿಕೇರಿ: ಕೊಡಗು ಜಿಲ್ಲೆಯ ಎಲ್ಲೆಡೆ ಸೋಮವಾರ ರಾತ್ರಿಯಿಂದ ಮಂಗಳವಾರ ಮಂಗಳವಾರ ಮಧ್ಯಾಹ್ನದವರೆಗೂ ಭಾರಿ ಮಳೆಯಾಗಿದೆ. ಮಂಗಳವಾರವೂ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ತಲಕಾವೇರಿ, ಭಾಗಮಂಡಲದಲ್ಲಿ ತ್ರಿವೇಣಿ ಸಂಗಮ ಈ ವರ್ಷ 2ನೇ ಬಾರಿಗೆ ಜಲಾವೃತಗೊಂಡಿತು. ಭಾಗಮಂಡಲ -ಮಡಿಕೇರಿ ರಸ್ತೆ, ನಾಪೋಕ್ಲು - ಭಾಗಮಂಡಲ ರಸ್ತೆಯಲ್ಲಿ ನೀರು ಹರಿಯುತ್ತಿದೆ. ಬಲಮುರಿಯಲ್ಲಿ ಹೊಳೆ ತುಂಬಿ ಹರಿಯುತ್ತಿದ್ದು, ಸೇತುವೆ ಮುಳುಗಿದೆ. ಚೇರಂಬಾಣೆ ಗ್ರಾಮ ಪಂಚಾಯತಿಯ ಬೆಂಗೂರು ಗ್ರಾಮದ ದೋಣಿ ಕಡುವು ಎಂಬಲ್ಲಿ ಪ್ರವಾಹ ಉಂಟಾಗಿದ್ದು, ಸ್ಥಳೀಯರು ದೋಣಿ ಮೂಲಕ ಸಂಚರಿಸುತ್ತಿದ್ದಾರೆ.

ಹಾರಂಗಿ ಜಲಾಶಯಕ್ಕೆ ಭಾರಿ ಪ್ರಮಾಣದ ನೀರು ಹರಿದು ಬರುತ್ತಿದ್ದು, 18 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡುತ್ತಿದ್ದು, ನದಿ ಪಾತ್ರದಲ್ಲಿ ಪ್ರವಾಹದ ಆತಂಕ ಎದುರಾಗಿದೆ.

14 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿಯಲ್ಲಿ ಬುಧವಾರ ಹಾಗೂ ಗುರುವಾರ ಗಂಟೆಗೆ 40ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರ ಪ್ರದೇಶಕ್ಕೆ ತೆರಳಬಾರದೆಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ರಾಜ್ಯದ ವಿವಿಧೆಡೆ ಬುಧವಾರವೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ಮೂರು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ 14 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವೆಡೆ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಬಾಗಲಕೋಟೆ, ಕೊಪ್ಪಳ, ಗದಗ, ವಿಜಯಪುರ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆ ಇದೆ. ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ನಿರಂತರ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ರಾಮನಗರ, ಕೋಲಾರ, ಮಂಡ್ಯ, ಚಾಮರಾಜನಗರ, ದಾವಣಗೆರೆ, ಹಾಸನ, ತುಮಕೂರು, ಬಳ್ಳಾರಿ, ವಿಜಯನಗರ ಮತ್ತು ಮೈಸೂರು ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಭಾರಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಜಿಲ್ಲೆಗಳಲ್ಲಿ ಗುರುವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಉತ್ತರ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಜೊಯಿಡಾ ಪೂರ್ಣ ಸಾವಯವ ತಾಲ್ಲೂಕು ಆಗಿಸುವ ಯೋಜನೆಗೆ ಚಾಲನೆ

‘ಡಿಎಪಿ ಬಳಕೆ ತಗ್ಗಿಸಿ’

ಪ್ರಜಾವಾಣಿ ವಾರ್ತೆ

ಕಾರವಾರ: ‘ದೇಶದಲ್ಲಿ ಡಿಎಪಿ ರಸಗೊಬ್ಬರ ಬಳಕೆ ನಿಯಂತ್ರಿಸಲು ಅಭಿಯಾನ ನಡೆದಿದ್ದು, ರಾಜ್ಯದಲ್ಲೂ ಬಳಕೆ ಕಡಿಮೆಯಾಗಬೇಕು’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಜೊಯಿಡಾ ತಾಲ್ಲೂಕನ್ನು ರಾಜ್ಯದ ಮೊದಲ ಸಾವಯವ ತಾಲ್ಲೂಕಾಗಿ ಪರಿವರ್ತಿಸುವ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು.

‘ರಾಸಾಯನಿಕ ಗೊಬ್ಬರ ಬಳಕೆ ಪ್ರಮಾಣ ಈ ತಾಲ್ಲೂಕಿನಲ್ಲಿ ಕಡಿಮೆಯಿದ್ದು, ಪೂರ್ಣ ತಡೆಗಟ್ಟುವ ಗುರಿಯಿದೆ. ಸಾವಯವ ಪದಾರ್ಥಗಳಿಗೆ ಮಾರುಕಟ್ಟೆ ಒದಗಿಸುವುದು ಸೇರಿ ಸಾವಯವ ಪದ್ಧತಿ ಬಲಗೊಳಿಸಲು ಹಂತ ಹಂತವಾಗಿ ಜಾರಿಗೊಳಿಸಲಿದ್ದೇವೆ’ ಎಂದರು.

‘ಈ ಬಾರಿ 69,526 ಟನ್ ಡಿಎಪಿ ರಸಗೊಬ್ಬರ ದಾಸ್ತಾನಿದೆ. ಕಬ್ಬು ಕಟಾವು ಯಂತ್ರಗಳ ಖರೀದಿಗೆ ಪರಿಶಿಷ್ಟ ಸಮುದಾಯದವರಿಗೆ ₹50 ಲಕ್ಷ, ಸಾಮಾನ್ಯ ವರ್ಗದ ರೈತರಿಗೆ ₹40 ಲಕ್ಷ ಸಹಾಯಧನ ನೀಡುವ ಮೂಲಕ ದೇಶದಲ್ಲೇ ಮಾದರಿ ಸೌಲಭ್ಯ ಕಲ್ಪಿಸಿದ್ದೇವೆ’ ಎಂದರು.

ಹಳಿಯಾಳದಲ್ಲಿ ಮುಂಗಾರು ಅವಧಿ ಬಿತ್ತನೆ ಕಾರ್ಯಕ್ಕೆ ಚಾಲನೆ ನೀಡಿದರು. ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಇದ್ದರು.

ಎನ್.ಚಲುವರಾಯಸ್ವಾಮಿ, ಆರ್.ವಿ.ದೇಶಪಾಂಡೆ ಬಿತ್ತನೆಗೆ ಚಾಲನೆ ನೀಡಿದರು

ವಿದ್ಯುತ್ ತಂತಿ ತಗುಲಿ ಇಬ್ಬರು ರೈತರ ಸಾವು

ಗಂಡಸಿ (ಹಾಸನ ಜಿಲ್ಲೆ): ಹೋಬಳಿಯ ಚಗಚಗೆರೆ ಗ್ರಾಮದ ತೋಟದ ಮನೆಯಲ್ಲಿ ಮಂಗಳವಾರ ಬಟ್ಟೆ ಒಣಗಿಸಲು ತಂತಿ ಕಟ್ಟುವಾಗ ವಿದ್ಯುತ್ ತಂತಿ ತಗುಲಿ ರೈತರಾದ ಚಗಚಗೆರೆಯ ಬಾಳೇಗೌಡ (75), ಕುಡುಕುಂದಿ ಗ್ರಾಮದ ಹೊಂಬೇಗೌಡ (55) ಮೃತಪಟ್ಟರು. ಇಬ್ಬರೂ ಸ್ನೇಹಿತರು. ಅಕ್ಕ ಪಕ್ಕದಲ್ಲಿ ತೋಟವಿದೆ. ಹೊಂಬೇಗೌಡ ತೋಟಕ್ಕೆ ಬಂದಾಗ, ಬಾಳೇಗೌಡರ ಮನೆಯಲ್ಲಿರುತ್ತಿದ್ದರು. ಮನೆಯ ವರಂಡಾದಲ್ಲೇ ಘಟನೆ ನಡೆದಿದೆ. ಉಪ ತಹಶೀಲ್ದಾರ್ ಮೋಹನ್ ಕುಮಾರ್, ಪಿಎಸ್‌ಐ ಆರತಿ ಸ್ಥಳಕ್ಕೆ ಭೇಟಿ ನೀಡಿದ್ದರು.

ಜೋಯಾಲುಕ್ಕಾಸ್‌ನಿಂದ ‘ವಿಶ್ವ ರಕ್ತದಾನಿಗಳ ದಿನ’



ಡಾ. ಜೋಯ್ ಆಲುಕ್ಕಾಸ್ ಮತ್ತು ಶ್ರೀಮತಿ ಜಾಲಿ ಜೋಯ್ ಆಲುಕ್ಕಾಸ್ ಅವರ ಸಂಯೋಜಿತ ದೃಷ್ಟಿಕೋನದಲ್ಲಿ ಜೋಯಾಲುಕ್ಕಾಸ್ ಸಮೂಹ ಮೆಗಾ ರಕ್ತದಾನ ಅಭಿಯಾನ ಕಾರ್ಯಕ್ರಮ ಆಯೋಜಿಸುವ ಮೂಲಕ ‘ವಿಶ್ವ ರಕ್ತದಾನಿಗಳ ದಿನ’ವನ್ನು ಆಚರಿಸಿತು. ಈ ಸಂದರ್ಭದಲ್ಲಿ ಭಾರತ ಮತ್ತು ಅಂತರರಾಷ್ಟ್ರೀಯ ಜೋಯಾಲುಕ್ಕಾಸ್ ಮಳಿಗೆಗಳಿಂದ 2500 ಯೂನಿಟ್‌ಗಳಿಗೂ ಅಧಿಕ ರಕ್ತ ಸಂಗ್ರಹಿಸಲಾಗಿದೆ. ಪ್ಯಾನ್-ಇಂಡಿಯಾ ಹಾಗೂ ಅಂತರರಾಷ್ಟ್ರೀಯ ಮಳಿಗೆಗಳಲ್ಲಿ ಏಕಕಾಲದಲ್ಲಿ ನಡೆದ ಈ ಅಭಿಯಾನದಲ್ಲಿ ಉದ್ಯೋಗಿಗಳು, ಗ್ರಾಹಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು. ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಉದ್ಯೋಗ ವಾಣಿ

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
(ಕೇಂದ್ರದ ಮಹಾರತ್ನ ಸಾರ್ವಜನಿಕ ವಲಯದ ಉದ್ಯಮ)
Delivering Happiness

ನಿಮ್ಮ ಸಾಮರ್ಥ್ಯವನ್ನು ವ್ಯಕ್ತಪಡಿಸಿ ವೃತ್ತಿಜೀವನವನ್ನು ಉನ್ನತಿಕರಿಸಿಕೊಳ್ಳಲು ನಮ್ಮೊಂದಿಗೆ ಸೇರಿ

ಭಾರತದ ಇಂಧನ ವಲಯದಲ್ಲಿ ಅತ್ಯಾಕರ್ಷಕ ಮತ್ತು ಸವಾಲಿನ ಕೆಲಸದ ಅವಕಾಶಗಳನ್ನು ಹುಡುಕುತ್ತಿರುವ ಮತ್ತು ನಮ್ಮ ಬೆಳವಣಿಗೆಯ ದಾರಿಯಲ್ಲಿ ನಮ್ಮೊಂದಿಗೆ ಕೈ ಜೋಡಿಸುವ ಮೂಲಕ ಭಾರತದ ಇಂಧನ ಕ್ಷೇತ್ರದ ಭವಿಷ್ಯಕ್ಕೆ ಕೊಡುಗೆ ನೀಡಲು ಬಯಸುವ ಪ್ರತಿಭಾನ್ವಿತ ಮತ್ತು ಪ್ರೇರಿತಸಂಶೋಧನೆ ಮತ್ತು ಅಭಿವೃದ್ಧಿ ವೃತ್ತಿಪರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು http://hindustanpetroleum.com ಎಂಬ ನಮ್ಮ ವೆಬ್ ಸೈಟ್ ನಲ್ಲಿ ವೃತ್ತಿ ಪುಟಕ್ಕೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಬಹುದು.

ಸಂಶೋಧನೆ ಮತ್ತು ಅಭಿವೃದ್ಧಿ ಇಲಾಖೆಯಲ್ಲಿ ಲಭ್ಯವಿರುವ ಪ್ರೊಫೈಲ್ ಗಳು

- ಅನಾಲಿಟಿಕಲ್
- ಬ್ಯಾಟರಿ ಸಂಶೋಧನೆ
- ಬಯೋ ಪ್ರೊಸೆಸ್
- ಬೀಟುಮೆನ್ ಸಂಶೋಧನೆ
- ಕೆಟಾಲಿಸಿಸ್
- ಕೆಟಲಿಸ್ಟ್ ಸ್ಕೇಲ್ ಅಪ್
- ಕಂಬಷನ್ ಸಂಶೋಧನೆ
- ಕರೊಶನ್ ಸಂಬಂಧಿತ ಅಧ್ಯಯನ
- ಕಚ್ಚಾ ತೈಲ ಮತ್ತು ಇಂಧನ ಸಂಶೋಧನೆ
- ಹೈಡ್ರೋಜನ್
- ಲೂಬ್ಸ್ ಸಂಶೋಧನೆ
- ನ್ಯಾನೋ ತಂತ್ರಜ್ಞಾನ
- ನೋವೆಲ್ ಸಪರೇಷನ್
- ಪೆಟ್ರೊಕೆಮಿಕಲ್ಸ್
- ಪ್ರೊಸೆಸ್ ಸ್ಕೇಲ್ ಅಪ್ ಅಂಡ್ ಡಿಸೈನ್
- ಸಂಶೋಧನೆ ಮತ್ತು ಅಭಿವೃದ್ಧಿ – ಸೆಂಟರ್ ಆಫ್ ಎಕ್ಸಲೆನ್ಸ್
- ಲೂಬ್ಸ್ ಸಂಶೋಧನೆ
- ಸೌರ ಶಕ್ತಿ
- ತಂತ್ರಜ್ಞಾನ ಸಂಬಂಧಿತ ಪರವಾನಗಿ
- ನೀರಿನ ಸಂಶೋಧನೆ
- ವೆಂಡರ್ ಡೆವಲಪ್ಮೆಂಟ್ / ಸೋರ್ಸಿಂಗ್

ಪ್ರಮುಖ ದಿನಾಂಕಗಳು
ಎಲ್ಲಾ ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ
ಪ್ರಾರಂಭ ದಿನಾಂಕ : 1ನೇ ಜೂನ್ 2025
ಎಲ್ಲಾ ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಇರುವ
ಕೊನೆಯ ದಿನಾಂಕ : 15ನೇ ಜುಲೈ 2025

ಈ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದಾದರೂ ತಿದ್ದುಪಡಿ / ಸೇರ್ಪಡಿಕೆ ಇತ್ಯಾದಿ ಇದ್ದರೆ, ನಮ್ಮ ಅಧಿಕೃತ ವೆಬ್‌ಸೈಟ್ http://hindustanpetroleum.com ನ ವೃತ್ತಿ ಪುಟದಲ್ಲಿ ಪ್ರಕಟಿಸಲಾಗುವುದು.

ನೊಂದಾಯಿತ ಕಛೇರಿ: 17, ಜಮ್‌ಶೆಡ್ಜಿ ಟಾಟಾ ರಸ್ತೆ ಮುಂಬೈ – 400020
CIN NO: L23201MH1952GOI008858
/hpcl | /hpcl | /hpcl
www.hindustanpetroleum.com

ಮಳೆಗಾಲದಲ್ಲಿ ಮನೆಯೇ ಇರಲಿ, ಕಚೇರಿಯೇ ಇರಲಿ ಚಾರ್ಜಿಂಗ್ ಪಾಯಿಂಟ್‌ಗಳು ತೇವವಾಗಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು

ಪ್ಲಾಸಿಬೊ ಎಂಬ ವಿಸ್ಮಯ

• ಸೂರ್ಯಕಿರಣ್

ಸಹಿಸಲಾರದ ಹೊಟ್ಟೆಯ ಬೇನೆಯಿಂದ ನೀವು ಬಳಲುತ್ತಿರುವಿರೆಂದು ಕಲ್ಪಿಸಿಕೊಳ್ಳಿ. ತಕ್ಷಣಕ್ಕೆ ಯಾವ ಔಷಧವೂ ಸಿಗುವಂತಿಲ್ಲ; ವೈದ್ಯರೂ ಲಭ್ಯರಿಲ್ಲ. ಆಗ ನಿಮ್ಮ ಪ್ರೀತಿಪಾತ್ರರಾದ ಮಡದಿಯೋ ಗಂಡನೋ ತಾಯಿಯೋ ಅಥವಾ ಮಿತ್ರರೋ ಬಿಸಿಯ ನೀರಿಗೆ ಒಂದಷ್ಟು ಶುಂಠಿಯ ರಸವನ್ನು ಸೇರಿಸಿ, ಸಮಾಧಾನದ ಮಾತುಗಳನ್ನಾಡುತ್ತ ಪ್ರೀತಿಯಿಂದ ಅದನ್ನು ನಿಮಗೆ ಕುಡಿಸಬಹುದು. ಅದನ್ನು ಸೇವಿಸಿದ ಬಳಿಕ ಕೆಲವೇ ನಿಮಿಷಗಳಲ್ಲಿ ಆ ಬೇನೆಯು ಶಮನವಾಗಿಬಿಡುತ್ತದೆ. ನೋವಿಲ್ಲದೆ ನೀವು ನಿರಾಳರಾಗುವಿರಿ. ಅದಕ್ಕೆ ಕಾರಣ ನೀವು ಕುಡಿದ ಬಿಸಿನೀರಿನಲ್ಲಿದ್ದ ಶುಂಠಿಯ ರಸವೇ? ಅದರ ಶಾಖವೇ? ವಸ್ತುತಃ ಅದು ನಿಮಗಿದ್ದ ಬೇನೆಗೆ ಔಷಧವೇ ಆಗಿಲ್ಲದಿರಬಹುದು. ಆದರೂ ನೋವು ಮಾಯವಾಯಿತಲ್ಲ! ಇದಾವುದೂ ಅಲ್ಲದೆ ನೀವು ಅದನ್ನು ಔಷಧವೆಂದು ಭಾವಿಸುವ ನಂಬಿಕೆಯಿಂದ ಬೇನೆ ತಗ್ಗಿತೆ? ಹೀಗಾಗುವುದು ಸಾಧ್ಯ. ವಿಜ್ಞಾನಿಗಳು ಇದನ್ನು 'ಪ್ಲಾಸಿಬೊ ಪರಿಣಾಮ' ಎನ್ನುವರು.

ಪ್ಲಾಸಿಬೊ: ಹಾಗೆಂದರೇನು?

ಯಾವುದೇ ರೋಗದ ಚಿಕಿತ್ಸೆಯ ಅಂಗವಾಗಿ ರೋಗಿಗೆ ಕೊಡಲಾಗುವ, ನೋಡಲು ಮಾತ್ರ ಔಷಧದಂತೆ ಕಾಣುವ ಪದಾರ್ಥವು 'ಪ್ಲಾಸಿಬೊ' ಎಂದೆನಿಸಿಕೊಳ್ಳುತ್ತದೆ. ಅದರಲ್ಲಿ ಔಷಧೀಯ ಗುಣವಿರಲೇಬೇಕೆಂದಿಲ್ಲ, ಹಾನಿಕಾರಕವಲ್ಲದಿದ್ದರೆ ಸಾಕು. ಹಾಗಾಗಿ ಅದನ್ನು ನಿರುಪದ್ರವಿ ನಕಲಿ ಔಷಧ ಎನ್ನಲಡ್ಡಿಯಿಲ್ಲ. ರೋಗಿಗೆ ಅದನ್ನು ಕೊಡುವಾಗ ಪ್ರೀತಿ, ಭರವಸೆ, ಸಮಾಧಾನ, ಸಾಂತ್ವನದ ಮಾತುಗಳನ್ನಾಡುತ್ತ ಒಂದಷ್ಟು ಆರೈಕೆ ಮಾಡಿದರೆ ರೋಗಿಯ ಮನಸ್ಸು ಅದನ್ನು ಔಷಧ ಎಂದೇ ನಂಬುತ್ತದೆ. ಮನಸ್ಸಿನ ಈ ನಂಬಿಕೆಯು ರೋಗದ ನಿವಾರಣೆಗೆ ಸಹಕಾರಿಯಾಗುತ್ತದೆ. ಮನಸ್ಸಿನ ಸಂಕಲ್ಪ ಮತ್ತು ನಿರ್ದೇಶನದಂತೆ ದೇಹವು ವರ್ತಿಸುತ್ತದೆ ಎನ್ನುವುದು ಈ ವಿದ್ಯಮಾನದಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಬೇನೆಯ ಪರಿಹಾರಕ್ಕಾಗಿ ದೇಹಕ್ಕೆ ಹೊರಗಿನಿಂದ ಕೊಡುವ ಔಷಧಗಳು ಎಷ್ಟು ಆವಶ್ಯಕವೊ, ಮಾನಸಿಕ ನೆಲೆಯಲ್ಲಿ ಭರವಸೆಯ ಮಾತುಗಳೊಂದಿಗೆ ಪ್ರೀತಿಯ ಆರೈಕೆಯೂ ಅಷ್ಟೇ ಅವಶ್ಯಕವೆನ್ನುವುದು ವೇದ್ಯವಾಗುತ್ತದೆ. ಆಧುನಿಕ ಜಗತ್ತಿನಲ್ಲಿ ಯಂತ್ರಗಳ ಮೇಲಿನ ಅವಲಂಬನೆ ಹೆಚ್ಚಾಗುತ್ತ, ಮಾತ್ರೆ, ಚುಚ್ಚುಮದ್ದು, ಶಸ್ತ್ರಚಿಕಿತ್ಸೆಗಳಿಂದ ಮಾತ್ರ ರೋಗಪರಿಹಾರ ಸಾಧ್ಯವೆಂದು ಭಾವಿಸಿದ್ದೇವೆ. ಆದರೆ ಸಕಾರಾತ್ಮಕ ಚಿಂತನೆ, ಆರೈಕೆ, ಮಾನಸಿಕ ಸ್ಥೈರ್ಯಗಳನ್ನು ಚಿಕಿತ್ಸೆಯ ಪ್ರಧಾನ ಅಂಶಗಳಾಗಿ ಆಧುನಿಕ ವೈದ್ಯಕೀಯ ವಿಜ್ಞಾನವು ಗಂಭೀರವಾಗಿ ಪರಿಗಣಿಸುತ್ತಿದೆ.

ನಂಬಿಕೆ - ಚಿಕಿತ್ಸೆಗೆ ಅಡಿಪಾಯ

ನಂಬಿಕೆಯನ್ನು ಇದ್ದ ಹಾಗೆಯೇ ಒಪ್ಪದೇ ಅದನ್ನು ಪ್ರಶ್ನಿಸಿ, ಪ್ರಯೋಗಗಳಿಂದ ಪರೀಕ್ಷಿಸಿ ಅದರಲ್ಲಿ ನಿರೀಕ್ಷಿತ ಸತ್ಯಾಂಶವಿದ್ದರೆ ಮಾತ್ರ ಸ್ವೀಕರಿಸುವುದು ವಿಜ್ಞಾನದ ಮಾರ್ಗ. ಆದರೆ ಪ್ಲಾಸಿಬೊ ವಿಚಾರದಲ್ಲಿ ವಿಜ್ಞಾನವು ರೋಗಿಯ ನಂಬಿಕೆಯನ್ನೂ ಒಪ್ಪುತ್ತದೆ. ಹೀಗೆಂದ ಮಾತ್ರಕ್ಕೆ ಪ್ಲಾಸಿಬೊದಿಂದ ಹೃದಯಾಘಾತ, ಕ್ಯಾನ್ಸರ್‌ನಂಥ ಗಂಭೀರ ಸಮಸ್ಯೆಗಳನ್ನು ಬಗೆಹರಿಸಬಹುದೆನ್ನುವುದು ತಪ್ಪಾಗುತ್ತದೆ. ಪ್ಲಾಸಿಬೊ ಒಂದರಿಂದಲೇ ರೋಗದ ನಿವಾರಣೆಯಾಗದು. ಅದು ರೋಗದಿಂದ ಉಂಟಾಗುವ ನೋವನ್ನು ಅಥವಾ ಇತರ ಲಕ್ಷಣಗಳನ್ನು ತಗ್ಗಿಸಬಹುದಷ್ಟೆ. ನಮ್ಮ ಮಿದುಳು ನೋವನ್ನು ಗ್ರಹಿಸುವ ಪ್ರಕ್ರಿಯೆಯನ್ನು ಪ್ಲಾಸಿಬೊ ಖಂಡಿತವಾಗಿಯೂ ಪ್ರಭಾವಿಸುತ್ತದೆ. ನೋವನ್ನು ನಿವಾರಿಸಿ ಸಕಾರಾತ್ಮಕ ಭಾವನೆಗಳನ್ನು ಪ್ರಚೋದಿಸುವ 'ಎಂಡಾರ್ಫಿನ್' ಮತ್ತು 'ಡೋಪಮಿನ್'ಗಳು ನಮ್ಮ ದೇಹದೊಳಗೆ ಬಿಡುಗಡೆಯಾಗುವಲ್ಲಿ ಪ್ಲಾಸಿಬೊ ಮತ್ತು ಅದನ್ನು ರೋಗಿಗೆ ನೀಡುವ ವಿಧಾನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

> ನಮ್ಮ ದೇಹದ ಒಳ–ಹೊರಗಿನ ಬಾಧೆಗಳಿಗೆ ಮನಸ್ಸೇ ಕೇಂದ್ರಸ್ಥಾನವೆನ್ನುವುದು ನಿಚ್ಚಳ. ಸಕಾರಾತ್ಮಕ ವಾತಾವರಣದಿಂದ ಮನಸ್ಸೆಂಬ ಕೇಂದ್ರಕ್ಕೆ ಸ್ಥೈರ್ಯ ನೀಡುವುದು ಚಿಕಿತ್ಸೆಗೆ ಅತ್ಯವಶ್ಯಕ.

ಸಂಶೋಧನೆಯಲ್ಲಿ

ಔಷಧಗಳನ್ನು ತಯಾರಿಸುವ ಮೊದಲು ಅದರ ತಯಾರಕರು ಸುದೀರ್ಘವಾದ ಪ್ರಯೋಗಸರಣಿಯನ್ನು ನಡೆಸುತ್ತಾರೆ. ಇದನ್ನು ಔಷಧೋದ್ಯಮದಲ್ಲಿ 'ಕ್ಲಿನಿಕಲ್ ಟ್ರಯಲ್ಸ್' ಎನ್ನುವರು. ಇಂತಹ ಪ್ರಯೋಗಗಳಲ್ಲಿ ಸ್ಥೂಲವಾಗಿ ಎರಡು ಗುಂಪುಗಳ ರೋಗಿಗಳಿರುತ್ತಾರೆ. ಒಂದು ಗುಂಪಿನ ರೋಗಿಗಳಿಗೆ ಔಷಧವನ್ನು ನೀಡುತ್ತ ಅದರ ಪರಿಣಾಮವನ್ನು ದಾಖಲಿಸುವರು. ಮತ್ತೊಂದು ಗುಂಪಿನಲ್ಲಿಯ ರೋಗಿಗಳಿಗೆ ಔಷಧ ಎಂದು ಹೇಳಿ ಪ್ಲಾಸಿಬೊಗಳನ್ನು ನೀಡುವರು. ಔಷಧದ ನಿಜವಾದ ಪರಿಣಾಮವನ್ನು ಅಳೆಯಲು ಔಷಧ ಸಂಶೋಧಕರು ಈ ವಿಧಾನವನ್ನು ಬಳಸುತ್ತಾರೆ. ಎರಡೂ ಗುಂಪುಗಳಲ್ಲಿ ಒಂದೇ ಪ್ರತಿಕ್ರಿಯೆ ಮತ್ತು ಪರಿಣಾಮ ಕಂಡುಬಂದಲ್ಲಿ ಔಷಧವು ನಿರೀಕ್ಷಿಸಿದಷ್ಟು ಪರಿಣಾಮಕಾರಿಯಲ್ಲ ಎಂದು ತೀರ್ಮಾನಿಸಲಾಗುತ್ತದೆ. ಅಂದರೆ ಅದು ಆ ಔಷಧದ ವೈಫಲ್ಯ ಎಂದು ಪರಿಗಣಿಸಲಾಗುತ್ತದೆ. ಅದರ ಸುಧಾರಣೆಗಾಗಿ ಮಾಡಬೇಕಾದ ಬದಲಾವಣೆಗಳ ಹುಡುಕಾಟದಲ್ಲಿ ಸಂಶೋಧನೆ ಮುಂದುವರೆಯುತ್ತದೆ.

ಪ್ಲಾಸಿಬೊಗಳನ್ನು ನಿಜವಾದ ಔಷಧ ಎಂದು ರೋಗಿಗಳಿಗೆ ನಂಬಿಸಿ ಕೊಡುವುದು ಒಂದು ವಿಧಾನವಾದರೆ, ಅವು ಹಾನಿಮಾಡದ ನಕಲಿ ಔಷಧವೆಂದು ಮೊದಲೇ ತಿಳಿಸಿ ಕೊಡುವ ಪ್ರಯೋಗವೂ ಉಂಟು. ವಿಜ್ಞಾನ ಮತ್ತು ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ 'ಸೈನ್ಸ್ ಟ್ರಾನ್ಸ್‌ಲೇಷನಲ್ ಮೆಡಿಸಿನ್' ಎನ್ನುವ ಅಂತರರಾಷ್ಟ್ರೀಯ ನಿಯತಕಾಲಿಕೆಯಲ್ಲಿ ಪ್ರಕಟಗೊಂಡಿರುವ ಸಂಶೋಧನೆಯೊಂದರ ವರದಿ ಅಚ್ಚರಿ ಮೂಡಿಸುವಂತಿದೆ. ಮೈಗ್ರೇನ್‌ನ ಚಿಕಿತ್ಸೆಗಾಗಿ ರೋಗಿಗಳ ಎರಡು ಗುಂಪುಗಳನ್ನು ರಚಿಸಲಾಗಿತ್ತು. ಒಂದು ಗುಂಪಿಗೆ ಔಷಧವನ್ನು ಅದರ ಹೆಸರು ಕಾಣುವಂತೆ ನೀಡಲಾಗಿದೆ. ಮತ್ತೊಂದು ಗುಂಪಿಗೆ ಕೊಡುತ್ತಿರುವುದು ಔಷಧವಲ್ಲದೆ ಪ್ಲಾಸಿಬೊ ಎಂದು ತಿಳಿಸಿ ಕೊಡಲಾಗಿದೆ. ಪ್ಲಾಸಿಬೊ ಎಂದು ತಿಳಿದು ಅದನ್ನು ಸೇವಿಸಿದ ಗುಂಪಿನಲ್ಲಿ ತಲೆನೋವು ಶೇ 50ರಷ್ಟು ಕಡಿಮೆಯಾಗಿರುವುದು ಈ ಸಂಶೋಧನೆಯಲ್ಲಿ ಕಂಡುಬಂದಿದೆ. ಔಷಧವೋ ಅಲ್ಲವೋ - ಒಂದು ಗುಳಿಗೆ ತೆಗೆದುಕೊಳ್ಳುವುದರಿಂದ, ಬಿಳಿಯ ಕೋಟುಗಳನ್ನು ತೊಟ್ಟ ವೈದ್ಯರು ನೀಡುವ ಗಮನದಿಂದ, ಅವರೊಟ್ಟಿಗಿನ ಮಾತುಕತೆಯಿಂದ ರೋಗಿಗಳ ಮನಸ್ಸಿನ ಮೇಲೆ ಪರಿಣಾಮವಾಗುವುದು, ಅದರಿಂದ ನೋವು ಸ್ವಲ್ಪವಾದರೂ ಕಡಿಮೆಯಾಗುವುದು ಎಂದು ಸಂಶೋಧಕರು ಈ ಅಧ್ಯಯನದಿಂದ ಅಭಿಪ್ರಾಯ ಪಟ್ಟಿದ್ದಾರೆ.

ಒಟ್ಟಿನಲ್ಲಿ ನಮ್ಮ ದೇಹದ ಒಳ ಹೊರಗಿನ ಬಾಧೆಗಳಿಗೆ ಮನಸ್ಸೇ ಕೇಂದ್ರಸ್ಥಾನವೆನ್ನುವುದು ನಿಚ್ಚಳ. ಸಕಾರಾತ್ಮಕ ವಾತಾವರಣದಿಂದ ಮನಸ್ಸೆಂಬ ಕೇಂದ್ರಕ್ಕೆ ಸ್ಥೈರ್ಯ ನೀಡುವುದು ಚಿಕಿತ್ಸೆಗೆ ಅತ್ಯವಶ್ಯಕ ಎನ್ನುವುದು ನಿರ್ವಿವಾದವಾದ ಸತ್ಯ. ಕೇಂದ್ರವೊಂದೇ ಮುಖ್ಯ ಮಿಕ್ಕಿದ್ದೆಲ್ಲವೂ ಗೌಣವೆನ್ನುವುದು ಸಾಧುವಲ್ಲ. ಆದರೆ ಕೇಂದ್ರದ ಮಹತ್ತ್ವವನ್ನು ಅರಿತು ಅದರೆಡೆಗೂ ಸೂಕ್ತ ಗಮನವನ್ನು ಹರಿಸಿದರೆ ಚಿಕಿತ್ಸೆಯು ಒಳಗಿನಿಂದ ಪುಷ್ಟಗೊಳ್ಳುತ್ತದೆ, ಆರೋಗ್ಯವು ನಮ್ಮದಾಗುತ್ತದೆ.

ಸ್ಮಾರ್ಟ್ ಆಗುತ್ತಿದೆ ಜೀವನ

• ಕೃಷ್ಣ ಭಟ್

ಈಗೊಂದು 10 ವರ್ಷಗಳ ಸಾಮಾನ್ಯ ಮಧ್ಯಮ ವರ್ಗದ ಮನೆಯಲ್ಲಿ ಮನೆಯಲ್ಲಿ ನೆಲ ಒರೆಸುವುದಕ್ಕೆಂದು ರೋಬೊ ವ್ಯಾಕ್ಯೂಮ್ ಕ್ಲೀನರ್‌ಗಳಿವೆ ಎಂದರೆ ಜನರು ಅದನ್ನು ಹಾಸ್ಯ ಎಂದೇ ತಿಳಿಯುತ್ತಿದ್ದರು. ಅದೊಂದು ಐಷಾರಾಮಿ ಮತ್ತು ಲಕ್ಷಾಂತರ ಬೆಲೆಯ ವಸ್ತುವಾಗಿತ್ತು. ಅಲೆಕ್ಸಾ ಮತ್ತು ಗೂಗಲ್ ಹೋಮ್‌ಗಳೆಲ್ಲ ಆಗ ಭಾರಿ ಆಕರ್ಷಣೀಯ ಸಂಗತಿಯಾಗಿತ್ತು. ಆದರೆ, ಈಗ 10 ವರ್ಷಗಳ ನಂತರ ಗಮನಿಸಿದರೆ, ಮನೆಯಲ್ಲಿ ನಾವು ನಮಗೇ ಅರಿವಿಗೆ ಬರದಂತೆ ತಂತ್ರಜ್ಞಾನವನ್ನು ಅಳವಡಿಸಿಕೊಂಡುಬಿಟ್ಟಿದ್ದೇವೆ. ನಗರದ ಮನೆಗಳಲ್ಲಿ ಈಗ ಹಲವು ತಂತ್ರಜ್ಞಾನ ಸಾಧನಗಳು ಅತ್ಯಂತ ಸಾಮಾನ್ಯ ಎಂಬಂತಾಗಿವೆ.

ರೋಬೋಟಿಕ್ ವ್ಯಾಕ್ಯೂಮ್ ಕ್ಲೀನರುಗಳು: ಇವು ಈ ಕಾಲದ ಅಗತ್ಯವೆಂಬಂತೆ ಬದಲಾಗಿವೆ. ಮನೆಕೆಲಸದವರನ್ನು ಅವಲಂಬಿಸುವುದು ಬೇಡ ಮತ್ತು ನಮ್ಮ ಕೆಲಸವನ್ನು ನಾವೇ ನಿರ್ವಹಿಸುವುದು ಉತ್ತಮ ಎಂಬ ಧೋರಣೆ ಇರುವ ಈಗಿನ ಜನರ ಮನಃಸ್ಥಿತಿಗೆ ಇದು ಹೊಂದಿಕೆಯಾಗುತ್ತದೆ. ಕಳೆದ ನಾಲ್ಕಾರು ವರ್ಷಗಳಿಂದ ಮಾರುಕಟ್ಟೆಯಲ್ಲಿ ಹೆಚ್ಚು ಹೆಚ್ಚು ಕಾಣಿಸುತ್ತಿದ್ದರೂ, ಕಳೆದ ಎರಡು ವರ್ಷಗಳಿಂದ ಇವುಗಳ ಬಳಕೆಯಲ್ಲಿ ಏರಿಕೆಯಾಗುತ್ತಿವೆ. ಅದರಲ್ಲೂ ನಗರಪ್ರದೇಶಗಳ ಜನರು ಇದನ್ನು ಹೆಚ್ಚು ಹೆಚ್ಚಾಗಿ ಬಳಕೆ ಮಾಡುತ್ತಿದ್ದಾರೆ. ನೆಲದ ಮೇಲಿನ ಕಸಗುಡಿಸುವುದು ಮತ್ತು ನೆಲ ಒರೆಸುವುದರಲ್ಲಿ ಈ ಆಧುನಿಕ ರೋಬೊಗಳು ಕೆಲಸದವರಿಗಿಂತ ಪರಿಣಾಮಕಾರಿಯಾಗಿವೆ. ಇದರ ಲಿಡಾರ್ ಸೆನ್ಸರ್‌ಗಳು ಎಷ್ಟು ಪರಿಣಾಮಕಾರಿಯಾಗಿವೆ ಎಂದರೆ, ಕಸಗುಡಿಸುತ್ತಾ ಮೆಟ್ಟಿಲುಗಳಿಂದ ಕೆಳಕ್ಕೆ ಧುಮುಕುವುದಿಲ್ಲ. ಬದಲಿಗೆ, ಆಳವನ್ನು ಅಂದಾಜು ಮಾಡಿ ಮೆಟ್ಟಿಲುಗಳ ಅಂಚಿನವರೆಗಷ್ಟೇ ತಮ್ಮ ಕೆಲಸ ಮುಗಿಸಿ ವಾಪಸಾಗುತ್ತವೆ. ನೆಲ ಒರೆಸುವ ಬಟ್ಟೆಗಳನ್ನು ಸ್ವತಃ ಸ್ವಚ್ಛಗೊಳಿಸಿಕೊಳ್ಳುವ ಹಾಗೂ ಕಸವನ್ನು ಸ್ವತಃ ಡಸ್ಟ್‌ಬಿನ್‌ಗೆ ಹಾಕಿಕುವ ಈ ರೋಬೊಗಳು ಒಂದೆರಡು ವರ್ಷಕ್ಕೆ ಕೆಲಸದವರಿಗೆ ಕೊಡುವ ಹಣದಲ್ಲೇ ಕೈಗೆ ಬರುತ್ತವೆ!

ಸ್ಮಾರ್ಟ್ ಲಾಕ್‌ಗಳು: ಇವು ಮಾರುಕಟ್ಟೆಗೆ ಬಂದು ಬಹಳ ವರ್ಷಗಳಾದವು. ಆದರೆ, ಇದರಲ್ಲಿರುವ ಫೀಚರ್‌ಗಳು ಕಾಲಕಾಲಕ್ಕೆ ಅಪ್‌ಡೇಟ್ ಆಗುತ್ತಲೇ ಇವೆ. ಹೊಸದಾಗಿ ಕಟ್ಟುತ್ತಿರುವ ಮನೆಗಳಲ್ಲಿ ಇವು ಅತ್ಯಂತ ಸಾಮಾನ್ಯವೂ ಹೌದು. ನಗರಗಳ ಎಲ್ಲ ಹೊಸ ಮನೆಗಳಲ್ಲೂ ಮಾಮೂಲಿ ಕೀ ಹಾಕಿ ತೆರೆಯುವ ಲಾಕ್‌ಗಳ ಬದಲಿಗೆ ಸ್ಮಾರ್ಟ್ ಲಾಕ್‌ಗಳನ್ನೇ ಅಳವಡಿಸಲಾಗುತ್ತಿದೆ. ಮೊದಮೊದಲು ಪಿನ್ ಅಷ್ಟೇ ಇರುತ್ತಿದ್ದ ಸ್ಮಾರ್ಟ್ ಲಾಕ್‌ನಲ್ಲಿ ಈಗ ಆಕ್ಸೆಸ್ ಕಾರ್ಡ್ ಸೌಲಭ್ಯ, ಫಿಂಗರ್‌ಪ್ರಿಂಟ್ ಹಾಗೂ ಫೇಸ್ ಅನ್‌ಲಾಕ್ ಸೌಲಭ್ಯಗಳೆಲ್ಲ ಬಂದಿವೆ. ಇನ್ನೂ ಮುಂದೆ ಹೋಗಿ ಕೈಯಾಡಿಸಿದರೆ ತೆರೆಯುವ ಡೋರ್ ಲಾಕ್‌ಗಳೂ ಬಂದಿವೆ.

ಸ್ಮಾರ್ಟ್ ಮನರಂಜನೆ: ಕಳೆದ 10 ವರ್ಷಗಳ ಹಿಂದೆ 'ಒಟಿಟಿ' ಎಂಬ ಪರಿಕಲ್ಪನೆ ಭಾರತದಲ್ಲಿ ಈ ಮಟ್ಟಕ್ಕೆ ವ್ಯಾಪಿಸಿರಲಿಲ್ಲ. ಮುಂದುವರಿದ ದೇಶಗಳಲ್ಲೆಲ್ಲ ಟಿ.ವಿ.ಯನ್ನು ನೋಡುವವರೇ ಕಡಿಮೆಯಾಗುತ್ತಿದ್ದಾರಂತೆ ಎಂಬ ಮಾತುಗಳು ಕೆಲವೇ ಕೆಲವರಲ್ಲಿ ಕೇಳಿಸುತ್ತಿತ್ತೇ ಹೊರತು, ಅಂದು ನೆಟ್‌ಫ್ಲಿಕ್ಸ್ ಹಾಗೂ ಅಮೆಜಾನ್ ಪ್ರೈಮ್ ವಿಡಿಯೊ ಸಾಮಾನ್ಯ ಜನರವರೆಗೆ ತಲುಪಿರಲಿಲ್ಲ. ಆದರೆ, ಈಗ ಸಾಮಾನ್ಯ ಟಿ.ವಿ.ಗಳೂ ಸ್ಮಾರ್ಟ್ ಆಗಿವೆ. ಅವೆಲ್ಲವುಗಳಲ್ಲೂ ಒಟಿಟಿ ಆ್ಯಪ್‌ಗಳು ಬಂದು ಕುಳಿತಿವೆ. ಜನರನ್ನೂ ಇವು ಸ್ಮಾರ್ಟ್ ಮಾಡಿವೆ. 2016ರಲ್ಲಿ ನೆಟ್‌ಫ್ಲಿಕ್ಸ್ ಮತ್ತು ಅಮೆಜಾನ್ ಪ್ರೈಮ್ ವಿಡಿಯೊಗಳೆರಡೂ ಭಾರತದಲ್ಲಿ ಬಿಡುಗಡೆಯಾದಾಗಿನಿಂದ ಸಾವಿರಗಟ್ಟಲೆ ಗಂಟೆಗಳ ಕಂಟೆಂಟ್ ಅನ್ನು ಭಾರತೀಯ ವೀಕ್ಷಕರಿಗೆಂದೇ ತಯಾರಿಸಿವೆ ಹಾಗೂ ತನ್ನೊಳಗೆ ಸೇರಿಸಿಕೊಂಡಿವೆ.

ವಾಯ್ಸ್ ಅಸಿಸ್ಟೆಂಟ್‌ಗಳು: 2018ರಲ್ಲಿ ಅಲೆಕ್ಸಾ ಎಂಬ ಒಂದು ಸಾಧನವನ್ನು ಅಮೆಜಾನ್ ಬಿಡುಗಡೆ ಮಾಡಿದೆ. ಅದು ನಾವು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸುತ್ತದೆ ಎಂಬುದು ನಮಗೆಲ್ಲರಿಗೂ ಕುತೂಹಲವಾಗಿತ್ತು. ಆದರೆ, ಇಂದು ಇವು ಮನೆಮನೆಗಳಲ್ಲೂ ಬಂದು ಕೂತಿವೆ. ಅಷ್ಟೇ ಅಲ್ಲ, ಜನಕ್ಕೆ ಈ ಏಳೆಂಟು ವರ್ಷಗಳಲ್ಲಿ ಇವುಗಳಿಂದ ಬೇಸರವೂ ಬಂದಾಗಿದೆ. ಇವು ಈಗ ಮೂಲೆಗೆ ಸರಿದು ಜೆನ್ ಎಐ ವಾಯ್ಸ್ ಅಸಿಸ್ಟೆಂಟ್‌ಗಳು ಮೊಬೈಲ್‌ನಲ್ಲೇ ಸಿಗುತ್ತಿವೆ! ಈ ಎಂಟು ವರ್ಷಗಳಲ್ಲಿ ಒಂದು ತಂತ್ರಜ್ಞಾನದ ಉತ್ಪನ್ನವೊಂದು ಜನಪ್ರಿಯವಾಗಿ, ಮರೆಯೂ ಆಗುತ್ತಿವೆ!

ಸ್ಮಾರ್ಟ್ ಮನೆ: 'ಇಂಟರ್‌ನೆಟ್ ಆಫ್ ದಿ ಥಿಂಗ್ಸ್' ಎಂಬ ಪರಿಕಲ್ಪನೆ ಶುರುವಾಗಿ ಹಲವು ವರ್ಷಗಳೇ ಆದವು. ಆದರೆ, ಇವುಗಳಿಗೆ ಇನ್ನಷ್ಟು ಬಲಬರುತ್ತಿದೆ. ಸ್ಮಾರ್ಟ್ ಎಲ್‌ಇಡಿಗಳು ಈಗ ಸರ್ವೇಸಾಮಾನ್ಯವಾಗಿವೆ. ಜೊತೆಗೆ ಸ್ಮಾರ್ಟ್ ಅಲ್ಲದ ಸಾಧನಗಳನ್ನು ಸ್ಮಾರ್ಟ್ ಮಾಡುವುದಕ್ಕೆ ಸ್ಮಾರ್ಟ್ ಪ್ಲಗ್‌ಗಳು ಬಂದಿವೆ. ಅವುಗಳನ್ನು ಬಳಸಿಕೊಂಡು ವೈಫೈ ಮೂಲಕ ನಾವು ಎಲ್ಲೇ ಇದ್ದರೂ ಯಾವುದೇ ಸಾಧನವನ್ನಾದರೂ ಆನ್ ಅಥವಾ ಆಫ್ ಮಾಡಬಹುದು. ಸ್ಮಾರ್ಟ್ ಎಸಿಗಳು ಹಾಗೂ ಸ್ಮಾರ್ಟ್ ಗೀಸರ್‌ಗಳೆಲ್ಲ ಈಗ ಸರ್ವೇಸಾಮಾನ್ಯವಾಗಿವೆ.

ಸ್ಮಾರ್ಟ್ ವಾಚ್: ಸ್ಮಾರ್ಟ್‌ವಾಚ್ ಎಂಬ ಪರಿಕಲ್ಪನೆ ಶುರುವಾಗಿದ್ದು, ತುಂಬಾ ಹಿಂದೆಯೇ ಆಗಿದ್ದರೂ, ಕಳೆದ ಆರೆಂಟು ವರ್ಷಗಳಿಂದ ಅವು ಹೆಚ್ಚು ಜನಪ್ರಿಯವಾದವು. ಜನರಲ್ಲಿ ಬೊಜ್ಜು ಹೆಚ್ಚಿದಂತೆಲ್ಲ ಸ್ಮಾರ್ಟ್ ವಾಚ್‌ಗಳ ಮಾರುಕಟ್ಟೆಯೂ ಹಿರಿದಾಗುತ್ತಾ ಬಂತು! ಒಂದು ಕಡೆ ಸಾಮಾನ್ಯ ಡಯಲ್ ಇರುವ ವಾಚ್‌ಗಳು ಮರೆಯಾಗುತ್ತಿದ್ದರೆ, ಇನ್ನೊಂದು ಕಡೆ ಈ ಸ್ಮಾರ್ಟ್ ವಾಚ್‌ಗಳು ಜನರ ಕೈಯಲ್ಲಿ ಕಾಣಿಸಿಕೊಳ್ಳುತ್ತಿವೆ. ಆರೋಗ್ಯದ ಬಗ್ಗೆ ಕೂಡ ಇವು ಹಲವು ಮಾಹಿತಿಗಳನ್ನು ನೀಡುತ್ತಿವೆ; ನಮ್ಮ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸುತ್ತಿವೆ!

ಒಟ್ಟಿನಲ್ಲಿ ತಂತ್ರಜ್ಞಾನದ ಜೊತೆಜೊತೆಗೆ ನಮ್ಮ ಜೀವನಶೈಲಿ ಮತ್ತು ಗುಣಮಟ್ಟ – ಎರಡೂ ಬದಲಾವಣೆಗಳನ್ನು ಕಾಣುತ್ತಿರುವುದಂತೂ ನಿಜ.



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

11) ಯಾವುದಕ್ಕೆ ತಟಸ್ಥೀಕರಣ ಕ್ರಿಯೆ ಎನ್ನುವರು?

ಉತ್ತರ:– ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆಯಿಂದ ಲವಣ ಮತ್ತು ನೀರು ಉಂಟಾಗುವುದನ್ನು ತಟಸ್ಥೀಕರಣ ಕ್ರಿಯೆ ಎನ್ನುವರು.

12) ಏಕೆ ಲೋಹೀಯ ಆಕ್ಸೈಡ್‌ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್‌ಗಳು ಎನ್ನುವರು.?

ಉತ್ತರ:– ಲೋಹೀಯ ಆಕ್ಸೈಡ್‌ಗಳು ಆಮ್ಲಗಳೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉಂಟುಮಾಡುತ್ತವೆ. ಇದು ಪ್ರತ್ಯಾಮ್ಲದೊಂದಿಗೆ ಆಮ್ಲದ ಕ್ರಿಯೆಯಂತೆಯೇ ಇರುವುದರಿಂದ, ಲೋಹೀಯ ಆಕ್ಸೈಡ್‌ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್‌ಗಳು ಎನ್ನುವರು.

13) ಅಲೋಹದ ಆಕ್ಸೈಡ್‌ಗಳು ಆಮ್ಲೀಯ ಗುಣ ಹೊಂದಿವೆ ಎಂದು ನಾವು ಹೇಗೆ ನಿರ್ಣಯಿಸಬಹುದು.?

ಉತ್ತರ:– ಕಾರ್ಬನ್ ಡೈಆಕ್ಸೈಡ್ ಮತ್ತು ಕ್ಯಾಲ್ಸಿಯಂ ಹೈಡ್ರಾಕ್ಸೈಡ್(ಸುಣ್ಣದ ತಿಳಿನೀರು)ಗಳ ನಡುವಣ ಕ್ರಿಯೆಯನ್ನು ನೋಡಿದ್ದಾಗ ಪ್ರತ್ಯಾಮ್ಲವಾದ ಕ್ಯಾಲ್ಸಿಯಂ ಹೈಡ್ರಾಕ್ಸೈಡ್, ಕಾರ್ಬನ್ ಡೈಆಕ್ಸೈಡ್‌ನೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತದೆ. ಇದು ಪ್ರತ್ಯಾಮ್ಲ ಮತ್ತು ಆಮ್ಲಗಳ ನಡುವಿನ ಕ್ರಿಯೆಯಂತೆಯೇ ಇರುವುದರಿಂದ, ಅಲೋಹದ ಆಕ್ಸೈಡ್‌ಗಳು ಆಮ್ಲೀಯ ಗುಣ ಹೊಂದಿವೆ ಎಂದು ನಾವು ನಿರ್ಣಯಿಸಬಹುದು.

14) ಕ್ಷಾರದ ಬಗ್ಗೆ ಬರೆಯಿರಿ

ಉತ್ತರ:– ಕ್ಷಾರವು ನೀರಿನಲ್ಲಿ ವಿಲೀನವಾಗುವ ಒಂದು ಪ್ರತ್ಯಾಮ್ಲ. ಅವು ಮುಟ್ಟಲು ಸಾಬೂನಿನಂತಿದ್ದು, ಕಹಿ ರುಚಿ ಮತ್ತು ಸಂಕ್ಷಾರಕ ಗುಣ ಹೊಂದಿವೆ. ಅವು ಹಾನಿಯನ್ನು ಉಂಟುಮಾಡಬಹುದಾದ್ದರಿಂದ ಅವುಗಳನ್ನು ಮುಟ್ಟುವುದಾಗಲೀ ಅಥವಾ ರುಚಿ ನೋಡುವುದಾಗಲೀ ಮಾಡಬಾರದು.

15) ಯಾವ ಪ್ರಕ್ರಿಯೆಯು ತೀವ್ರ ಬಹಿರುಷ್ಣಕವಾಗಿದೆ?

ಉತ್ತರ:– ಆಮ್ಲ ಮತ್ತು ಪ್ರತ್ಯಾಮ್ಲವನ್ನು ನೀರಿನಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯು ತೀವ್ರ ಬಹಿರುಷ್ಣಕವಾಗಿದೆ.

16) ಯಾವ ಪ್ರಕ್ರಿಯೆಯನ್ನು ಸಾರರಿಕ್ತಗೊಳಿಸುವಿಕೆ ಎಂದು ಕರೆಯುತ್ತಾರೆ?

ಉತ್ತರ:– ಆಮ್ಲ ಅಥವಾ ಪ್ರತ್ಯಾಮ್ಲವನ್ನು ನೀರಿನೊಂದಿಗೆ ಮಿಶ್ರಣ ಮಾಡಿದಾಗ ಏಕಮಾನ ಗಾತ್ರದಲ್ಲಿರುವ ಅಯಾನು (H_3O^+/OH^-)ಗಳ ಸಾರತೆಯು ಕಡಿಮೆಯಾಗುತ್ತದೆ ಈ ಪ್ರಕ್ರಿಯೆಯನ್ನು ಸಾರರಿಕ್ತಗೊಳಿಸುವಿಕೆ ಎಂದು ಕರೆಯುತ್ತಾರೆ ಮತ್ತು ಇವುಗಳನ್ನು ಸಾರರಿಕ್ತ ಆಮ್ಲ ಅಥವಾ ಸಾರರಿಕ್ತ ಪ್ರತ್ಯಾಮ್ಲ ಎನ್ನುತ್ತಾರೆ.

17) ಆಮ್ಲವನ್ನು ಸಾರರಿಕ್ತಗೊಳಿಸುವಾಗ, ಆಮ್ಲವನ್ನೇ ನೀರಿಗೆ ಸೇರಿಸಬೇಕೆಂದೂ ಮತ್ತು ಆಮ್ಲಕ್ಕೆ ನೀರನ್ನು ಸೇರಿಸಬಾರದೆಂದು ಶಿಫಾರಸು ಮಾಡುವುದೇಕೆ?

ಉತ್ತರ:– ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು. ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು.

18) pH ಮಾನದ ಬಗ್ಗೆ ಬರೆಯಿರಿ

ಉತ್ತರ:– ದ್ರಾವಣದಲ್ಲಿನ ಹೈಡ್ರೋಜನ್ ಅಯಾನುಗಳ ಸಾರತೆಯನ್ನು ಅಳೆಯಲು pH ಮಾನ ಎಂಬ ಅಳತೆಯನ್ನು ಅಭಿವೃದ್ಧಿಪಡಿಸಲಾಗಿದೆ. pHನಲ್ಲಿರುವ p ಜರ್ಮನ್ ಭಾಷೆಯ 'potenz' ಎಂಬ ಪದವಾಗಿದ್ದು 'ಸಾಮರ್ಥ್ಯ' ಎಂಬ ಅರ್ಥ ಹೊಂದಿದೆ. pH ಅಳತೆಪಟ್ಟಿಯಲ್ಲಿ ನಾವು ಸಾಮಾನ್ಯವಾಗಿ 0 (ತೀವ್ರ ಆಮ್ಲೀಯ) ದಿಂದ 14 (ತೀವ್ರ ಕ್ಷಾರೀಯ)ರವರೆಗೆ ಅಳೆಯಬಹುದು. pH ಅನ್ನು ಸರಳವಾಗಿ ದ್ರಾವಣದ ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಸ್ವಭಾವವನ್ನು ಸೂಚಿಸುವ ಸಂಖ್ಯೆಯಾಗಿ ಭಾವಿಸಬೇಕು.

ಹೈಡ್ರೋನಿಯಂ ಅಯಾನುಗಳ ಸಾರತೆ ಹೆಚ್ಚಿದ್ದಷ್ಟೂ pH ಮೌಲ್ಯ ಕಡಿಮೆ ಇರುತ್ತದೆ.

ತಟಸ್ಥ ದ್ರಾವಣದ pH ಮೌಲ್ಯ 7. pH ಅಳತೆಯಲ್ಲಿ 7ಕ್ಕಿಂತ ಕಡಿಮೆ ಬೆಲೆ ಆಮ್ಲೀಯ ದ್ರಾವಣವನ್ನು ಪ್ರತಿನಿಧಿಸುತ್ತದೆ.

pH ಮೌಲ್ಯ 7 ರಿಂದ 14ರೆಡೆಗೆ ಹೆಚ್ಚಾದಂತೆ, ಇದು ದ್ರಾವಣದಲ್ಲಿನ OH– ಅಯಾನುಗಳ ಸಾರತೆ ಹೆಚ್ಚುವುದನ್ನು ಸೂಚಿಸುತ್ತದೆ. ಅಂದರೆ ಕ್ಷಾರದ ಶಕ್ತಿ ಹೆಚ್ಚುತ್ತದೆ

ಸಾಮಾನ್ಯವಾಗಿ ಸಾರ್ವತ್ರಿಕ ಸೂಚಕದಿಂದ ಮಾಡಲ್ಪಟ್ಟ ಕಾಗದವನ್ನು pH ಅಳೆಯಲು ಬಳಸುತ್ತಾರೆ.



19) ನಮ್ಮ ದೇಹವು ಯಾವ pH ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ?

ಉತ್ತರ:– ನಮ್ಮ ದೇಹವು 7.0 ಯಿಂದ 7.8 pH ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ

20) ಮಳೆ ನೀರಿನ pH ಮೌಲ್ಯ ....ಕ್ಕಿಂತ ಕಡಿಮೆಯಾದಾಗ ಅದನ್ನು ಆಮ್ಲಮಳೆ ಎನ್ನುತ್ತಾರೆ.

ಉತ್ತರ:– 5.6

21) ಆಮ್ಲಮಳೆಯು ನದಿಗೆ ಹರಿದಾಗ ಏನಾಗುತ್ತದೆ?

ಉತ್ತರ:– ಆಮ್ಲಮಳೆಯು ನದಿಗೆ ಹರಿದಾಗ ಇದು ನದಿಯ ನೀರಿನ **pH**ಅನ್ನು ಕಡಿಮೆ ಮಾಡುತ್ತದೆ. ಇಂತಹ ನದಿಗಳಲ್ಲಿ ಜಲಚರಗಳ ಉಳಿವು ದುಸ್ತರವಾಗುತ್ತದೆ.

22) ನಮ್ಮ ಜಠರವು ಯಾವ ಆಮ್ಲ ಉತ್ಪಾದಿಸುತ್ತದೆ?

ಉತ್ತರ:– ನಮ್ಮ ಜಠರವು ಹೈಡ್ರೋಕ್ಲೋರಿಕ್ ಆಮ್ಲ ಉತ್ಪಾದಿಸುತ್ತದೆ

23) ಸಾಮಾನ್ಯವಾಗಿ ಜನರು ಯಾವಾಗ ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಏಕೆ ಬಳಸುತ್ತಾರೆ?

ಉತ್ತರ:–

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

ELECTROCHEMISTRY

32. Distinguish between emf and potential difference.

Ans:-

Emf	*Potential difference*
It is the difference in the electrode potentials when no current flows through the cell.	It is the difference in the electrode potentials when current is flowing through the cell.
It is the maximum voltage which can be obtained from the cell.	It is less than the maximum voltage which can be obtained from the cell.
It is responsible for the flow of steady current.	It is not responsible for the flow of steady current.
It can be measured by a potentiometer.	It can be measured by a voltmeter.

33. Write a note on the function of the Salt Bridge

Ans:- A salt bridge is an inverted U-shaped glass tube which contains in it a suitable salt in the form of a thick paste made in agar-agar.

A salt bridge has the following functions to perform:

(i) A salt bridge completes the inner cell circuit.

(ii) A salt bridge prevents the transference of electrolyte from one half cell to the other.

(iii) A salt bridge maintains the electrical neutrality of the electrolytes in the two half cells.

34. Write a note on Standard Hydrogen Electrode.

Ans:- In a standard hydrogen electrode, a platinum wire coated with finely divided platinum called platinum black is sealed in a glass tube. It carries a platinum foil at one end as in the fig. The wire is dipped in an aqueous solution containing 1 molar H^+ ion connection (normally 1 M HCl is used). Pure hydrogen gas under a pressure of 1 bar is constantly bubbled through the solution. The temperature of the solution is maintained at 298 K.



Standard hydrogen electrode

It can act both as cathode and anode. When it is to act as anode (oxidation is to take place), molecules of hydrogen gas change to H^+ ions as follows:

$$H_2(g) \rightarrow 2H^+(aq) + 2e^-$$

The ions formed go into the solution. In case, it is to act as cathode (reduction is to take place) then H^+ ions from the solution accept electrons and are reduced to $H_2(g)$ as follows:

$$2H^+(aq) + 2e^- \rightarrow H_2(g)$$

It is also known as reversible electrode as it can act both as cathode and anode. The coating of platinum black over platinum foil absorbs hydrogen and also helps to establish an equilibrium between the molecules of H_2 and the ions formed in solution. A standard hydrogen electrode is represented as Pt, $H_2(g)H^+$ (1M).

As pointed earlier, its standard oxidation as well reduction potentials are taken as zero.

Limitations of SHE

The standard hydrogen electrode or normal hydrogen electrode suffers from following limitations:

(i) It is not so easy to maintain a pressure of 1 atmosphere for hydrogen gas throughout.

(ii) It is quite difficult to the kept the $[H^+]$ as 1 M.

(iii) Platinum which is a part of the electrode, gets easily poisoned even by small traces of impurities present.

Calomel and silver electrodes can also be used as reference electrodes.

Measurement of Standard Electrode Potential (E^o).

A standard hydrogen electrode acts as the reference electrode and it helps in measuring the standard electrode potential of an electrode.

An electrochemical cell is set up in which the metal electrode under consideration is kept in one half cell and the standard hydrogen electrode acts as the other half cell. The potential difference developed as a result of the redox reaction is measured with the help of a high resistance voltmeter (or better by a potentiometer).

Since the electrode potential of the hydrogen electrode under standard conditions is taken as zero, the reading of the voltmeter will therefore, give the standard electrode potential of the electrode under consideration.

The deflection of the voltmeter in the cell circuit represents the flow of current. The flow of electrons is towards opposite side. If it is towards the metal electrode, this means that the flow of electrons is towards the standard hydrogen electrode.

Therefore, metal electrode will act as anode and standard hydrogen electrode as cathode. In case, the deflection is towards the hydrogen electrode, this means that the flow of electrons is from hydrogen electrode towards the metal electrode. In such a case, hydrogen electrode will act as anode and the metal electrode as the cathode.

In general, $E^o_{cell} = E^o_{cathode} - E^o_{anode}$

Here, E^o value represents the standard reduction potential of the electrode.

35. When is an electrode said to be under the standard conditions?

Ans: An electrode is said to be under standard conditions if:

(a) Concentration of electrolyte solution is 1 molar (1 M)

(b) Pressure of gas/gases involved is one atmosphere

(c) Temperature is constant (generally 298K)

36. Mention some of the applications of electrolysis.

Ans:- Some of the applications of electrolysis are –

(a) Determination of equivalent masses of the elements. That is, the masses of metals collected at the respective electrodes are directly proportional to their equivalent masses.

(b) Used in electrometallurgy - that is in the isolation of reactive metals like sodium, potassium, magnesium, calcium, aluminium etc., by the electrolysis of their fused salts.

ಉನ್ನತ ಶಿಕ್ಷಣದಲ್ಲಿ ಪರಿಸರ ಪಠ್ಯಕ್ರಮ

ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉನ್ನತ ಶಿಕ್ಷಣದಲ್ಲಿ ಪರಿಸರದ ವಿಷಯವನ್ನು ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅರಣ್ಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಂಗಳವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಪರಿಸರ ಸಂರಕ್ಷಣೆ, ಅದರ ಬಗ್ಗೆ ಅರಿವು ಮೂಡಿಸುವುದು ಅತ್ಯಂತ ಅವಶ್ಯ. ಪರಿಸರ ಶುದ್ಧವಾಗಿದ್ದರೆ ಜನರ ಆರೋಗ್ಯ, ಪ್ರಕೃತಿಯನ್ನು ಉಳಿಸಿಕೊಳ್ಳಲು ಸಾಧ್ಯ. ರಾಸಾಯನಿಕ ಗೊಬ್ಬರ ಬಳಸಿ ಮಣ್ಣಿನ ಫಲವತ್ತತೆ ಕಡಿಮೆಯಾಗಿದೆ. ಹೀಗೆ ಮುಂದುವರಿದರೆ, ಕರ್ನಾಟಕ ಮರುಭೂಮಿಯಾಗಲಿದೆ. ನಾವೆಲ್ಲ ಈಗಲೇ ಎಚ್ಚರಿಕೆ ವಹಿಸಲೇಬೇಕು' ಎಂದರು.

'ಬೆಂಗಳೂರು ಒಂದರಲ್ಲೇ ದಿನವೊಂದಕ್ಕೆ 900 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತದೆ. 1.50 ಕೋಟಿ ಜನಸಂಖ್ಯೆಯನ್ನು ಬೆಂಗಳೂರು ಹೊಂದಿದ್ದು, ಜನಸಂಖ್ಯೆ ಬೆಳೆದಷ್ಟು ಪರಿಸರದ ಮೇಲೆ ಹಾನಿ ಉಂಟಾಗುತ್ತಿದೆ. ಜನಸಂಖ್ಯೆಯ ನಿಯಂತ್ರಣದ ಜೊತೆಗೆ ಪರಿಸರದ ಕುರಿತು ಜ್ಞಾನವನ್ನು ಬೆಳೆಸಿಕೊಳ್ಳಬೇಕಿದೆ' ಎಂದರು.

'20 ನೀರು ನಿಗಾ ಕೇಂದ್ರ'

'ರಾಜ್ಯದಲ್ಲಿ ಎಂಟು ನದಿ ಮೂಲಗಳಲ್ಲಿ ನೀರು ನಿಗಾ ಕೇಂದ್ರಗಳಿದ್ದು, ಇನ್ನೂ 20 ಕೇಂದ್ರಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪಿಸಲಾಗುತ್ತದೆ' ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

'ರಾಜ್ಯದಲ್ಲಿ ಎಲ್ಲ ಭಾಗಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಘನತ್ಯಾಜ್ಯ ವಿಲೇವಾರಿಯಾಗಬೇಕು. ತ್ಯಾಜ್ಯ ಸಂಸ್ಕರಣಾ ಘಟಕಗಳು (ಎಸ್‌ಟಿಪಿ) ಗುಣಮಟ್ಟದಲ್ಲಿ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಜಿಲ್ಲಾಮಟ್ಟದಲ್ಲಿ ಸಮಿತಿ ರಚಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ರಾಜ್ಯ ಪರಿಸರ ಪ್ರಶಸ್ತಿ'ಗಳನ್ನು ಪ್ರದಾನ ಮಾಡಿದರು. ಸಲೀಂ ಅಹಮದ್, ದಿನೇಶ್ ಗುಂಡೂರಾವ್, ಪಿ.ಎಂ.ನರೇಂದ್ರಸ್ವಾಮಿ, ಅಶೋಕ ಪಟ್ಟಣ, ಮೋಹನ್ ಕೊಂಡಜ್ಜಿ, ಡಿ.ಕೆ.ಶಿವಕುಮಾರ್, ಈಶ್ವರ ಬಿ. ಖಂಡ್ರೆ, ಡಾ.ಎಂ.ಸಿ. ಸುಧಾಕರ್, ಎ.ಎಸ್. ಪೊನ್ನಣ್ಣ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಅರಣ್ಯ ಇಲಾಖೆಗೆ ಬಿಬಿಎಂಪಿ ಧನಸಹಾಯ'

'ಬೆಂಗಳೂರಿನಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಭೂಮಿಗಳನ್ನು ಲಾಲ್‌ಬಾಗ್, ಕಬ್ಬನ್ ಪಾರ್ಕ್ ರೀತಿ ಅಭಿವೃದ್ಧಿ ಮಾಡಲು ಅರಣ್ಯ ಇಲಾಖೆ ಮುಂದಾದರೆ ಬಿಬಿಎಂಪಿಯಿಂದ ಧನಸಹಾಯ ನೀಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

'ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ 8.5 ಕೋಟಿ ಸಸಿಗಳನ್ನು ನೆಡಲಾಗಿದೆ. ಈ ವರ್ಷ 2.5 ಕೋಟಿ ಸಸಿಗಳನ್ನು ನೆಡಲಾಗುತ್ತದೆ. 6,231 ಎಕರೆ ಅರಣ್ಯ ಭೂಮಿ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಬೆಂಗಳೂರಿನಲ್ಲಿ ಕಳೆದ ದಶಕಗಳಲ್ಲಿ ಐದು ಚದರ ಕಿಲೋಮೀಟರ್ ಅರಣ್ಯ ಕಡಿಮೆಯಾಗಿದೆ. ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೆ ಜನಾಂದೋಲನವಾಗಬೇಕು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಶಾಲೆಗಳಲ್ಲಿ 'ಜಾಗೃತಿ ಕ್ಲಬ್': ಡಿಸಿಎಂ

ಪರಿಸರ ಮತ್ತು ಹವಾಮಾನ ವೈಪರೀತ್ಯದಂತಹ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಶಾಲೆಯಲ್ಲೂ 'ಜಾಗೃತಿ ಕ್ಲಬ್'ಗಳನ್ನು ಕಡ್ಡಾಯವಾಗಿ ಆರಂಭಿಸಲು ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.
ವಿಶ್ವ ಪರಿಸರ ದಿನದ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿಧಾನಸೌಧದ ಆವರಣದಲ್ಲಿ ಹಮ್ಮಿಕೊಂಡಿದ್ದ ಮ್ಯಾರಥಾನ್‌ಗೆ ಚಾಲನೆ ನೀಡಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಪ್ರತಿ 'ಜಾಗೃತಿ ಕ್ಲಬ್'ನಲ್ಲೂ ಕನಿಷ್ಠ 25 ವಿದ್ಯಾರ್ಥಿಗಳು ಇರಬೇಕು. ಈ ಜಾಗೃತಿ ಕ್ಲಬ್‌ಗಳು ಪರಿಸರ ಮತ್ತು ನಿಸರ್ಗವನ್ನು ಉಳಿಸುವ ದಿಸೆಯಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯ ಮಾಡಲಿದೆ. ಅಲ್ಲದೇ ಪ್ರತಿಯೊಂದು ಶಾಲೆಯೂ ಮರಗಳನ್ನು ಬೆಳೆಸಲು ಸಮೀಪದ ಪ್ರದೇಶಗಳನ್ನು ದತ್ತು ತೆಗೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

'ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ಸಸಿಯನ್ನು ದತ್ತು ಪಡೆದು ನೆಡುವ ಆಂದೋಲನ ಆರಂಭಿಸಲಾಗಿದೆ. ಈಗಾಗಲೇ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ತೊಡಗಿದ್ದಾರೆ. ಎರಡು ದಿನಗಳ ಹಿಂದೆ ದೆಹಲಿ ಮತ್ತು ಅಹಮದಾಬಾದ್‌ನಲ್ಲಿ ಇದ್ದೆ. ಅಲ್ಲಿನ ಉಷ್ಣಾಂಶ ಸುಮಾರು 49 ಡಿಗ್ರಿ ಸೆಲ್ಸಿಯಸ್‌ನಷ್ಟು ಇತ್ತು. ಬೆಂಗಳೂರಿನಲ್ಲಿ 22ರಿಂದ 23 ಡಿಗ್ರಿ ಸೆಲ್ಸಿಯಸ್ ಇದೆ. ಈ ವಾತಾವರಣವನ್ನು ನಾವು ಉಳಿಸಿಕೊಳ್ಳಬೇಕು' ಎಂದರು.

ಪರಿಸರ ಸಂರಕ್ಷಣೆ ಪ್ರಶಸ್ತಿ ಪ್ರದಾನ

ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮೂವರು ವ್ಯಕ್ತಿ ಹಾಗೂ ಮೂರು ಸಂಸ್ಥೆಗಳಿಗೆ 'ರಾಜ್ಯ ಪರಿಸರ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಫಲಕ ಹಾಗೂ ತಲಾ ₹1 ಲಕ್ಷ ನಗದನ್ನು ಒಳಗೊಂಡಿದೆ.
ವೈಯಕ್ತಿಕ ವಿಭಾಗ: ದಕ್ಷಿಣ ವಲಯ– ಪ್ರೊ. ಕೃಷ್ಣರಾಜ್, ಆರ್ಥಿಕ ಅಧ್ಯಯನ ಮತ್ತು ನೀತಿ ಕೇಂದ್ರ, ಬೆಂಗಳೂರು. ಮಲೆನಾಡು, ಕರಾವಳಿ ವಲಯ– ಸಿ.ಎಂ. ವೆಂಕಟೇಶ್, ಶಂಕರಪುರ ಬಡಾವಣೆ, ಚಾಮರಾಜನಗರ. ಉತ್ತರ ವಲಯ– ಎಚ್.ಕೆ. ಪ್ರಕಾಶ್‌ಗೌಡ, ಕುಸುಮನಗರ, ಕೆಲಗೇರಿ ರಸ್ತೆ, ಧಾರವಾಡ.
ಸಂಸ್ಥೆ ವಿಭಾಗ: ದಕ್ಷಿಣ ವಲಯ– ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅಥಾರಿಟಿ (ಇಎಲ್‌ಸಿಐಟಿಎ), ಬೆಂಗಳೂರು. ಮಲೆನಾಡು, ಕರಾವಳಿ ವಲಯ– ಏಕಲವ್ಯ ಜಲಜೀವ ಫೌಂಡೇಷನ್, ರಾಮದೇವರಪುರ, ಹಾಸನ. ಉತ್ತರ ವಲಯ– ಮಾತಾಜಿ ಸೇವಾ ಸಂಸ್ಥೆ, ಬಸವಕಲ್ಯಾಣ, ಬೀದರ್.

ಚಿಟಿಕೆ ಸುದ್ದಿ

'ವಿಶ್ವದರ್ಜೆಯಲ್ಲಿ ಶಿಲಾಸಮಾಧಿ ಅಭಿವೃದ್ಧಿ'

ಕೊಪ್ಪಳ: 'ವಿಶ್ವ ಪಾರಂಪರಿಕ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್ ಗ್ರಾಮದ, ಪುರಾತನ ಶಿಲಾ ಸಮಾಧಿಗಳ ಪ್ರಾಗೈತಿಹಾಸಿಕ ಸ್ಥಳವನ್ನು ವಿಶ್ವ ದರ್ಜೆಯಲ್ಲಿ ಅಭಿವೃದ್ಧಿಪಡಿಸಲಿದ್ದೇವೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿದ್ದ ಅವರು, 'ವಿಶ್ವ ಪಾರಂಪರಿಕ ಕಾಯಂ ಪಟ್ಟಿಯಲ್ಲಿ ಸ್ಥಾನ ಪಡೆಯಲು ಬೇಕಾದ ಎಲ್ಲ ಕೆಲಸಗಳನ್ನು ಮಾಡಲಾಗುವುದು' ಎಂದರು.

'ಈ ಸ್ಥಳದ ಮಹತ್ವ ತಿಳಿಸಲು ಬೆಂಗಳೂರಿನಲ್ಲಿ ಆಗಸ್ಟ್ 15ರ ಒಳಗೆ ಶಿಲಾ ಸಮಾಧಿಗಳ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸಬೇಕು. ಬೆಟ್ಟದ ಸುತ್ತಲಿನ ಐದು ಕಿ.ಮೀ. ವ್ಯಾಪ್ತಿಯಲ್ಲಿ ಇನ್ನಷ್ಟು ಸಂಶೋಧನೆ ನಡೆಸಬೇಕು' ಎಂದು ಕೇಂದ್ರ ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪರಮಾಣು ಸ್ಥಾವರ ಅಗತ್ಯವಿಲ್ಲ: ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆ ಅಗತ್ಯವಿಲ್ಲ. ಇದರ ಬದಲು ಸೌರ ಶಕ್ತಿ ಅಥವಾ ಪವನ ಶಕ್ತಿ ಮೂಲಕ ವಿದ್ಯುತ್ ಉತ್ಪಾದನೆ ಮಾಡಲಿ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಬುದ್ಧಿಜೀವಿಗಳಿಗೆ ಭಯಪಡುವ ಜಾತಿವಾದಿಗಳು'

ಹೊಸಪೇಟೆ (ವಿಜಯನಗರ): 'ಬುದ್ಧಿಜೀವಿಗಳನ್ನು ಲದ್ದಿಜೀವಿಗಳು, ಗಂಜಿ ಗಿರಾಕಿಗಳು ಎಂದು ಹಂಗಿಸುವವರಿಗೆ ಮತ್ತು ಜಾತಿವಾದಿಗಳಿಗೆ ಬುದ್ಧಿಜೀವಿಗಳ ಬಗ್ಗೆ ಭಯವಿದೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ಅಕಾಡೆಮಿ ವತಿಯಿಂದ ಇಲ್ಲಿ ಮಂಗಳವಾರ ಏರ್ಪಡಿಸಿದ್ದ ಕಲಬುರಗಿ ವಿಭಾಗ ಮಟ್ಟದ ಯುವ ಕವಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಾಜ ಕಟ್ಟುವ ಬುದ್ಧಿಜೀವಿಗಳನ್ನು ಮತ್ತು ಬರಹಗಾರರನ್ನು ಬೇರೆ ಬೇರೆ ಕಾರಣಕ್ಕೆ ಗುರಿಪಡಿಸಲಾಗುತ್ತದೆ' ಎಂದರು.

'ಸಂವಿಧಾನ, ಸೌಹಾರ್ದದ ಪರ ಮಾತನಾಡುವವರನ್ನು ಉಳಿಸಬಾರದು ಎಂಬ ಸ್ಥಿತಿ ಇದೆ. ಲೇಖಕರ ಮೇಲೆ ಹಲ್ಲೆ ಕೊಲೆಗಳು ಆಗುತ್ತವೆ' ಎಂದು ಕಳವಳ ವ್ಯಕ್ತಪಡಿಸಿದರು.

'ಈಗ ಯುವ ಕವಿಗಳು ಪ್ರೀತಿ, ಪ್ರೇಮ, ಪ್ರಣಯದ ವಿಷಯಗಳಿಗಿಂತ ಕಾಲದ ಮನೋಧರ್ಮಕ್ಕೆ ಸ್ಪಂದಿಸುತ್ತಾರೆ. ಅಂಥವರಿಗೆ ತೊಂದರೆಯಾದರೆ ಯಾರು ಹೊಣೆ? ಅವರನ್ನು ಪ್ರೋತ್ಸಾಹಿಸಬೇಕಾದ ಹಿರಿಯರು ಹೊಣೆಗೇಡಿಗಳು ಆಗಿದ್ದೇವೆ' ಎಂದರು.

'ಯೋಗ ದಿನ: 5 ಲಕ್ಷ ಮಂದಿ ಯೋಗಾಭ್ಯಾಸ'

ಆಯುಷ್ ಇಲಾಖೆಯಿಂದ ವಿವಿಧ ಕಾರ್ಯಕ್ರಮ ಆಯೋಜನೆ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯುಷ್ ಇಲಾಖೆಯು ಇದೇ 21ರಂದು ಬೆಳಿಗ್ಗೆ 6ರಿಂದ 8 ಗಂಟೆವರೆಗೆ ರಾಜ್ಯದ ವಿವಿಧೆಡೆ 'ಯೋಗ ಸಂಗಮ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಡಿ 5 ಲಕ್ಷಕ್ಕೂ ಅಧಿಕ ಮಂದಿ ಯೋಗಾಭ್ಯಾಸ ಮಾಡಲಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಯೋಗ ದಿನಾಚರಣೆಯ ಮುಖ್ಯ ಕಾರ್ಯಕ್ರಮ ವಿಧಾನಸೌಧದ ಆವರಣದಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೆ ಸಚಿವರು, ಸಂಸದರು ಭಾಗವಹಿಸುತ್ತಾರೆ. ಚಲನಚಿತ್ರ ತಾರೆಯರಿಗೂ ಆಹ್ವಾನ ನೀಡಲಾಗಿದೆ. 7 ಗಂಟೆಯಿಂದ 7.45ರವರೆಗೆ ಯೋಗ ಪ್ರಾತ್ಯಕ್ಷಿಕೆ ನಡೆಯಲಿದೆ. ವಿಧಾನಸೌಧದ ಆವರಣದಲ್ಲಿ 3 ಸಾವಿರ ಮಂದಿ ಯೋಗಾಭ್ಯಾಸ ಮಾಡುತ್ತಾರೆ. ಇದೇ ವೇಳೆ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳು, 360 ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಯೋಗಾಭ್ಯಾಸ ನಡೆಯಲಿದೆ' ಎಂದು ತಿಳಿಸಿದರು.

'ಯೋಗದಿನದಂದು ಮೈಸೂರಿನಲ್ಲಿಯೂ ಬೃಹತ್ ಕಾರ್ಯಕ್ರಮ ನಡೆಸಲಾಗುತ್ತಿದೆ. 'ಯೋಗ ಮಹಾಕುಂಭ' ಶೀರ್ಷಿಕೆಯಡಿ ಮೈಸೂರು ಅರಮನೆ ಮೈದಾನದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ, 15 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ' ಎಂದು ವಿವರಿಸಿದರು.

ಯೋಗ ದಿನ ಕಾರ್ಯಕ್ರಮಗಳ ಕಿರು ಹೊತ್ತಗೆಯನ್ನು ದಿನೇಶ್ ಗುಂಡೂರಾವ್ ಬಿಡುಗಡೆ ಮಾಡಿದರು. ವಿಪಿನ್ ಸಿಂಗ್ ಉಪಸ್ಥಿತರಿದ್ದರು

ವರ್ಷವಿಡೀ ಯೋಗಾಭ್ಯಾಸ: 'ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಜುಲೈ ಅಂತ್ಯದವರೆಗೂ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಈ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. 'ಯೋಗ ಪಾರ್ಕ್' ಕಾರ್ಯಕ್ರಮದಡಿ ಬೆಂಗಳೂರು ಹಾಗೂ ಜಿಲ್ಲೆಗಳಲ್ಲಿರುವ ಉದ್ಯಾನಗಳಲ್ಲಿ ಯೋಗ ಸಂಬಂಧಿ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಈ ಕಾರ್ಯಕ್ರಮ ವರ್ಷವಿಡೀ ನಡೆಯಲಿದೆ' ಎಂದು ಸಚಿವರು ಹೇಳಿದರು.

'ಹಸಿರು ಯೋಗ ಕಾರ್ಯಕ್ರಮದಡಿ ಅರಣ್ಯ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ 5 ಲಕ್ಷ ಗಿಡಗಳನ್ನು ನೆಡುವ ಸಂಕಲ್ಪ ಮಾಡಲಾಗಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ ಈ ಕಾರ್ಯ ಮಾಡಲಾಗುವುದು' ಎಂದರು. ಆಯುಷ್ ಇಲಾಖೆ ಆಯುಕ್ತ ವಿಪಿನ್ ಸಿಂಗ್ ಉಪಸ್ಥಿತರಿದ್ದರು.

'ಯೋಗ ಜಿಲ್ಲೆ ಪ್ರಸ್ತಾವ ಸಲ್ಲಿಕೆ'

'ಮೈಸೂರನ್ನು ಯೋಗ ಜಿಲ್ಲೆಯೆಂದು ಘೋಷಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಕ್ರಮವಹಿಸಿದ್ದೇವೆ. ಜಿಲ್ಲೆಯ ಪ್ರತಿಯೊಂದು ಮನೆಯವರೂ ಯೋಗಾಭ್ಯಾಸ ಮಾಡುವಂತಾಗಬೇಕು. ಮುಂದಿನ ಎರಡು ಮೂರು ವರ್ಷಗಳಲ್ಲಿ ಈ ಗುರಿ ಸಾಕಾರ ಮಾಡಲು ಕಾರ್ಯಕ್ರಮ ರೂಪಿಸುತ್ತಿದ್ದೇವೆ. ಇದು ಸಾಧ್ಯವಾದರೆ, ದೇಶದ ಪ್ರಥಮ ಯೋಗ ಜಿಲ್ಲೆ ಮೈಸೂರು ಆಗಲಿದೆ. ಕರ್ನಾಟಕಕ್ಕೂ ಯೋಗಕ್ಕೂ ಹತ್ತಿರದ ಸಂಬಂಧವಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಸಾರ್ವತ್ರಿಕ ವರ್ಗಾವಣೆ ಅವಧಿ ಜೂನ್ 30ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ (ಡಿಪಿಎಆರ್) ಇಲಾಖೆ ಆದೇಶ ಹೊರಡಿಸಿದೆ.

ವರ್ಗಾವಣೆಗೆ ಮೇ 15ರಿಂದ ಜೂನ್ 14ರವರೆಗೆ ಅವಕಾಶ ನೀಡಿ ಈ ಹಿಂದೆ ಡಿಪಿಎಆರ್ ಆದೇಶ ಹೊರಡಿಸಿತ್ತು.

ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ನೌಕರರನ್ನು ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ 6ರಷ್ಟನ್ನು ಮೀರದಂತೆ ವರ್ಗಾವಣೆಗೆ ಅವಕಾಶ ನೀಡಲಾಗಿದೆ. 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಯ ಸಚಿವರಿಗೆ ಹಾಗೂ 'ಸಿ' ಮತ್ತು 'ಡಿ' ವೃಂದದ ನೌಕರರಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ನೀಡಲಾಗಿದೆ.

ಥಗ್ ಲೈಫ್ ವಿವಾದ....

ಒಂದನೇ ಪುಟದಿಂದ....

'ಯಾರಾದರೂ ಏನಾದರೂ ಮೌಖಿಕ ಹೇಳಿಕೆ ನೀಡಿದ್ದರೆ, ಅದಕ್ಕೆ ಹೇಳಿಕೆಯಿಂದಲೇ ಪ್ರತ್ಯುತ್ತರ ನೀಡಿ. ಯಾರಾದರೂ ಏನಾದರೂ ಬರೆದಿದ್ದರೆ, ಬರಹ ರೂಪದಲ್ಲೇ ಅದಕ್ಕೆ ಪ್ರತ್ಯುತ್ತರ ನೀಡಿ. ಆದರೆ, ಹೀಗೆ ನಿಷೇಧದ ಸನ್ನಿವೇಶ ಸೃಷ್ಟಿಸಲು ಅವಕಾಶ ಇಲ್ಲ' ಎಂದು ಕರ್ನಾಟಕ ಸರ್ಕಾರದ ಪರ ವಕೀಲರಿಗೆ ನ್ಯಾಯಮೂರ್ತಿ ಭುಯಾನ್ ಸೂಚಿಸಿದರು. ಈ ವಿಷಯದ ಬಗ್ಗೆ ಜೂನ್ 18ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನವನ್ನೂ ನೀಡಿದರು.

'ಚಲನಚಿತ್ರ ಪ್ರದರ್ಶನಗೊಂಡಾಗ ಜನರು ಅದನ್ನು ವೀಕ್ಷಿಸದೇ ಇರಬಹುದು. ಆದರೆ, ಚಿತ್ರ ಪ್ರದರ್ಶಿಸಿದರೆ ಚಿತ್ರ ಮಂದಿರಕ್ಕೆ ಬೆಂಕಿ ಹಚ್ಚುವುದಾಗಿ ಬೆದರಿಕೆಯನ್ನು ಹಾಕಲಾಗದು' ಎಂದೂ ಪೀಠ ಅಭಿಪ್ರಾಯಪಟ್ಟಿತು.

ಕರ್ನಾಟಕದಲ್ಲಿ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡದಿರುವುದನ್ನು ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಿರುವ ಅರ್ಜಿದಾರ ಎಂ.ಮಹೇಶ್ ರೆಡ್ಡಿ ಪರವಾಗಿ ಹಾಜರಾದ ವಕೀಲ ಎ.ವೇಲಂ, 'ಅಂತಹ ಬೆದರಿಕೆ ಒಡ್ಡುವವರ ವಿರುದ್ಧ ರಾಜ್ಯ ಸರ್ಕಾರ ದೂರು ದಾಖಲಿಸಿಲ್ಲ' ಎಂದು ಪೀಠದ ಗಮನಕ್ಕೆ ತಂದರು.

ಆಗ ನ್ಯಾಯಮೂರ್ತಿ ಮನಮೋಹನ್, 'ಕಾನೂನಿನ ಪ್ರಕಾರ ಸಿಬಿಎಫ್‌ಸಿ ಪ್ರಮಾಣಪತ್ರ ಹೊಂದಿರುವ ಯಾವುದೇ ಚಿತ್ರವನ್ನು ಬಿಡುಗಡೆ ಮಾಡಬಹುದು ಮತ್ತು ಅದರ ಪ್ರದರ್ಶನವನ್ನು ರಾಜ್ಯಗಳು ಖಾತರಿಪಡಿಸಬೇಕು. ನೀವು ಜನರ ತಲೆಗೆ ಬಂದೂಕು ಹಿಡಿದು ಚಿತ್ರ ಪ್ರದರ್ಶನ ಮಾಡದಂತೆ ಹೇಳಲಾಗದು' ಎಂದರು.

ಕರ್ನಾಟಕ ಸರ್ಕಾರದ ವಕೀಲರು, 'ಚಿತ್ರ ನಿರ್ಮಾಪಕರು ಸಲ್ಲಿಸಿರುವ ಅರ್ಜಿಯು ಕರ್ನಾಟಕ ಹೈಕೋರ್ಟ್ ಮುಂದೆ ಜೂನ್ 20ರಂದು ವಿಚಾರಣೆಗೆ ಬರಲಿದೆ' ಎಂಬ ಅಂಶವನ್ನು ಪೀಠದ ಗಮನಕ್ಕೆ ತಂದರು. ಆಗ ನ್ಯಾಯಪೀಠ, ಕರ್ನಾಟಕ ಹೈಕೋರ್ಟ್ ಮುಂದೆ ಬಾಕಿ ಇರುವ ಅರ್ಜಿಯನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಸೂಚನೆ ನೀಡಿತು.

ರಾಜ್ಯ ಸರ್ಕಾರದ ಪರ ವಕೀಲರು, 'ಕರ್ನಾಟಕ ಚಲನಚಿತ್ರ ಮಂಡಳಿಯೊಂದಿಗಿನ ಸಮಸ್ಯೆಯನ್ನು ಕಮಲ್ ಹಾಸನ್ ಅವರು ಬಗೆಹರಿಸಿಕೊಳ್ಳುವವರೆಗೆ ಚಿತ್ರ ಬಿಡುಗಡೆಗೊಳಿಸದಿರುವ ಆಯ್ಕೆ ಚಿತ್ರ ನಿರ್ಮಾಪಕರಾಗಿತ್ತು' ಎಂಬ ವಿಷಯವನ್ನು ಪೀಠದ ಮುಂದಿಟ್ಟರು. ಆಗ ನ್ಯಾಯಪೀಠ, 'ಜನರು ವಿಭಿನ್ನ ಅಭಿಪ್ರಾಯ ಹಾಗೂ ದೃಷ್ಟಿಕೋನ ಹೊಂದಿರುತ್ತಾರೆ. ಆದರೆ, ಆ ಕಾರಣಕ್ಕಾಗಿ ಚಿತ್ರವೊಂದು ಪ್ರದರ್ಶನಗೊಳ್ಳುವುದನ್ನು ತಡೆಯಲಾಗದು' ಎಂದು ಹೇಳಿತು.

ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠವು ಜೂನ್ 19ರಂದು ಮುಂದುವರಿಸಲಿದೆ.

'ತಮಿಳಿನಿಂದ ಕನ್ನಡ ಹುಟ್ಟಿದೆ' ಎಂಬ ಕಮಲ್ ಹಾಸನ್ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಕಮಲ್ ಕ್ಷಮೆಯಾಚಿಸಬೇಕೆಂಬ ಒತ್ತಾಯವೂ ಬಲವಾಗಿತ್ತು. 'ಥಗ್ ಲೈಫ್' ಸಿನಿಮಾ ಪ್ರದರ್ಶನಕ್ಕೆ ಕರ್ನಾಟಕದಲ್ಲಿ ಅವಕಾಶ ಕೊಡುವುದಿಲ್ಲ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೇಳಿತ್ತು.

ಈ ಮಧ್ಯೆ, ಹೈಕೋರ್ಟ್ ಮೊರೆ ಹೋಗಿದ್ದ ರಾಜ್‌ಕಮಲ್ ಫಿಲ್ಮ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವಿ. ನಾರಾಯಣನ್, 'ಸಿನಿಮಾ ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದರು.

ಈ ರಿಟ್ ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕನ್ನಡ, ತಮಿಳಿನಿಂದ ಹುಟ್ಟಿದೆ ಎಂಬ ಹೇಳಿಕೆ ನೀಡಲು ನೀವೇನು ಇತಿಹಾಸಕಾರರೇ ಅಥವಾ ಭಾಷಾ ತಜ್ಞರೇ' ಎಂದೂ ಪ್ರಶ್ನಿಸಿತ್ತು. 'ಕನ್ನಡಿಗರನ್ನು ಕೆಣಕಿರುವ ನೀವೀಗ ಅವರ ಕ್ಷಮೆ ಕೇಳಲು ಯಾಕೆ ಹಿಂಜರಿಯುತ್ತಿದ್ದೀರಿ' ಎಂದೂ ಪ್ರಶ್ನಿಸಿತ್ತು.

● 'ಕಮಲ್ ಹಾಸನ್ ಅವರು ನಿಮಗೆ ಇಷ್ಟವಾಗದ ಯಾವುದೇ ಹೇಳಿಕೆ ನೀಡಿದ್ದರೆ ಅದನ್ನೇ ಪರಮ ಸತ್ಯ ಎಂದು ಪರಿಗಣಿಸುವ ಅಗತ್ಯವಿಲ್ಲ ಮತ್ತು ಕರ್ನಾಟಕದ ಪ್ರಬುದ್ಧ ಜನರು ಚರ್ಚೆ ನಡೆಸಿ ಅವರು ಹೇಳಿದ್ದು ತಪ್ಪು ಎಂದು ಸಾಬೀತುಪಡಿಸಬೇಕಿತ್ತು. ಒಬ್ಬ ವ್ಯಕ್ತಿ ಒಂದು ಹೇಳಿಕೆ ನೀಡುತ್ತಾರೆ ಮತ್ತು ಅದನ್ನು ಪರಮಸತ್ಯ ಎಂದು ಪರಿಗಣಿಸಲಾಗುತ್ತದೆ ಎಂದಾದಲ್ಲಿ ವ್ಯವಸ್ಥೆಯಲ್ಲಿ ಏನೋ ಲೋಪವಿದೆ ಎಂದರ್ಥ. ಆತ ಹೇಳಿದ್ದು ಸರಿಯಲ್ಲ ಎಂದು ಜನರು ಬೇಕಿದ್ದಲ್ಲಿ ಆಕ್ಷೇಪಿಸಲಿ
-ನ್ಯಾಯಪೀಠ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ
2025–26ನೇ ಸಾಲಿಗೆ ಶುಲ್ಕ ಮರುಪಾವತಿ ವಿದ್ಯಾರ್ಥಿವೇತನ ಘೋಷಣೆ.

ಆನ್‌ಲೈನ್ ಅರ್ಜಿ
2025–26ನೇ ಸಾಲಿಗೆ ಸಂಬಂಧಿಸಿದಂತೆ ಪಿ.ಯು.ಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ & ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರದ ಶುಲ್ಕ ಮರುಪಾವತಿ ಯೋಜನೆಯಡಿ SSP portalನಲ್ಲಿ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ
https://ssp.postmatric.karnataka.gov.in/post_sa/signin.aspx
(ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ – SSP)
https://dom.karnataka.gov.in
(ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ)

ಸಮಯಾವಕಾಶ
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 13.06.2025.
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30.09.2025.

ಅರ್ಹತೆ
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ವರ್ಗಕ್ಕೆ ಸೇರಿದವರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಯು ಕಳೆದ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು.
- ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ರೂ. 2.5 ಲಕ್ಷಗಳನ್ನು ಮೀರಬಾರದು (ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳಿಗೆ)
- ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ರೂ. 2.00 ಲಕ್ಷಗಳನ್ನು ಮೀರಬಾರದು (ಸಾಮಾನ್ಯ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳು)
- ಸದರಿ ಯೋಜನೆಯ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ ಸಿಡಿಂಗ್ ಆಗಿರುವ ಬಗ್ಗೆ ಹಾಗೂ NPCI Mapping Active ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
- ಸದರಿ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಕ್ಕೆ ಭೇಟಿ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳು (MIC)/ಜಿಲ್ಲಾ ಅಲ್ಪಸಂಖ್ಯಾತರ ಕಛೇರಿಗಳಿಗೆ ಸಂಪರ್ಕಿಸಬಹುದಾಗಿದೆ.

ದಿನಾಂಕ : 13.06.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1287/25–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ
2025–26ನೇ ಸಾಲಿಗೆ ಮೆಟ್ರಿಕ್ ಪೂರ್ವ (1ರಿಂದ 8ನೇ ತರಗತಿ) ವಿದ್ಯಾರ್ಥಿವೇತನ ಪ್ರಕಟಣೆ

ಆನ್‌ಲೈನ್ ಅರ್ಜಿ
2025–26ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತರ ಸಮುದಾಯದ **ವಿದ್ಯಾರ್ಥಿಗಳಿಗಾಗಿ (1ರಿಂದ 8ನೇ ತರಗತಿ) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ** ಯೋಜನೆಯಡಿ SSP Portal ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ
https://ssp.postmatric.karnataka.gov.in/ssppre/
(ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ – SSP)
https://dom.karnataka.gov.in
(ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು)

ಸಮಯಾವಕಾಶ
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 13.06.2025.
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30.09.2025.

ಅರ್ಹತೆ
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ರೂ. 1.00 ಲಕ್ಷಗಳನ್ನು ಮೀರಬಾರದು.

ವಿಶೇಷ ಸೂಚನೆ:
- 2024–25ನೇ ಸಾಲಿನಲ್ಲಿ ಅನುಮೋದನೆಗೊಂಡ ಅರ್ಜಿಗಳು ಹಾಗೂ ವಿದ್ಯಾರ್ಥಿವೇತನ ಮಂಜೂರಾದ ವಿದ್ಯಾರ್ಥಿಗಳ ಅರ್ಜಿಗಳನ್ನು Auto Renewal ಎಂದು ಪರಿಗಣಿಸಲಾಗುವುದರಿಂದ ಸದರಿ ವಿದ್ಯಾರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
- 2024–25ನೇ ಸಾಲಿನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನ ಮಂಜೂರಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 1ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು
- ಸದರಿ ಯೋಜನೆಯ ಪ್ರಯೋಜನ ಪಡೆಯಲು ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ ಸಿಡಿಂಗ್ ಆಗಿರುವ ಬಗ್ಗೆ ಹಾಗೂ NPCI Mapping Active ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
- ಸದರಿ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್: https://dom.karnataka.gov.in ಕ್ಕೆ ಭೇಟಿ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು (MIC) ಸಂಪರ್ಕಿಸಿ.

ದಿನಾಂಕ : 13.06.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1286/25–26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268 E.Mail: eepwdgad@gmail.com
ಕಾರ್ಯಪಾಲಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
ನಂ:ಕಾನಿಇಂಗಃಲೋಇ: ಪಿಬಿ–1: ತಿದ್ದುಪಡಿ 2025–26: 1048 ದಿನಾಂಕ: 17–06–2025
ತಿದ್ದುಪಡಿ ಹಾಗೂ ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ನಂ: 925 ದಿ: 05–06–2025 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಕರೆಯಲಾದ ಕಾಮಗಾರಿಯ ವರ್ಕ ಇಂಡೆಂಟ್ ನಂ: 22056 ಟೆಂಡರ್‌ನ ಪರಿಷ್ಕೃತ ವೇಳಾಪಟ್ಟಿ ಈ ಕೆಳಗಿನಂತಿರುತ್ತವೆ.
ಮೇಲಿನ ಕಾಮಗಾರಿಗೆ ಟೆಂಡರ್ ವಿವರ ಪ್ರಶ್ನೋತ್ತರ **ದಿನಾಂಕ: 19–06–2025** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24–06–2025** ಮಧ್ಯಾಹ್ನ 4:00 ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25–06–2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 26–06–2025.**
ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
ವಾ.ಸಾ.ಇ/ಗದಗ/111/ದೇಶಪಾಂಡೆಪಬ್ಲಿಸಿಟಿ/2025–26

ಹುಲಿ–ಸಿಂಹಧಾಮ, ತ್ಯಾವರೆಕೊಪ್ಪ, ಶಿವಮೊಗ್ಗ
ಸಂ:ಕಾ.ನಿ.ನಿ/ಟಿ&ಎಲ್/Herbivore Feed/ಸಿಆರ್/25–26 ದಿ: 13.06.2025
(kppp ಪೋರ್ಟಲ್ ಮುಖಾಂತರ)
ಹುಲಿ–ಸಿಂಹಧಾಮ, ತ್ಯಾವರೆಕೊಪ್ಪದ ಸಸ್ಯಹಾರಿ ಪ್ರಾಣಿಗಳಿಗೆ ಒಂದು ವರ್ಷದ ಅವಧಿಗೆ Herbivore Feed & Fodder ಸರಬರಾಜು ಮಾಡಲು kppp ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ:27.06.2025ರ ಸಂಜೆ:5.00 ಘಂಟೆಯವರೆಗೆ ನಿಗದಿಪಡಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ನಿರ್ದೇಶಕರು, ಹುಲಿ–ಸಿಂಹಧಾಮ, ತ್ಯಾವರೆಕೊಪ್ಪ ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/69/06/428

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು–560009
ದೂ. ಸಂಖ್ಯೆ: 080–22876553, ಫ್ಯಾಕ್ಸ್: 080–22340139
ಇ–ಮೇಲ್: directorayush@gmail.com
ಸಂಖ್ಯೆ: ಆಯುಷ್/7/ಸಿಬ್ಬಂದಿ(5)/ಇ.ಆ. ದಿನಾಂಕ: 16–06–2025
ಪತ್ರಿಕಾ ಪ್ರಕಟಣೆ
ಕರ್ನಾಟಕ ನಾಗರಿಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 ಹಾಗೂ ತಿದ್ದುಪಡಿ ನಿಯಮಗಳು 2025 ರನ್ವಯ, ಆಯುಷ್ ಇಲಾಖೆಯಲ್ಲಿನ 2025–26ನೇ ಸಾಲಿನ ವರ್ಗಾವಣೆಗೆ ಸಂಬಂಧಿಸಿದಂತೆ, ವರ್ಗಾವಣೆ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ವಿಶೇಷ ವರ್ಗ (Special Category) 1–6 ರವರೆಗಿನ ವಿಶೇಷ ಪ್ರಕರಣಗಳಡಿ ಅರ್ಜಿ ಸಲ್ಲಿಸಿ ವರ್ಗಾವಣೆ/ವಿನಾಯಿತಿ ಕೋರಿರುವ ಅಧಿಕಾರಿ/ಸಿಬ್ಬಂದಿಗಳ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕಡ್ಡಾಯ ವರ್ಗಾವಣೆಗೆ ಒಳಪಟ್ಟ ಅಧಿಕಾರಿ/ಸಿಬ್ಬಂದಿಗಳ ಅಂತಿಮ ಪಟ್ಟಿಯನ್ನು ಈಗಾಗಲೇ ದಿನಾಂಕ: 16–06–2025 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
ಈ ಅಂತಿಮ ವರ್ಗಾವಣೆ ಪಟ್ಟಿಯಲ್ಲಿರುವ ವಿವಿಧ ವೃಂದಗಳ ಅಧಿಕಾರಿ/ಸಿಬ್ಬಂದಿಗಳಿಗೆ ದಿನಾಂಕ: 18–06–2025 ರಿಂದ ಸಮಾಲೋಚನೆ ಮುಖಾಂತರ ವರ್ಗಾವಣೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಅಂತಿಮ ಪಟ್ಟಿಯಲ್ಲಿರುವ ಅಧಿಕಾರಿ/ಸಿಬ್ಬಂದಿಗಳಿಗೆ ದಿನಾಂಕ ಮತ್ತು ವೇಳಾಪಟ್ಟಿಯನ್ನು ನಿಗದಿಪಡಿಸಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಿದೆ. ಪಟ್ಟಿಯಲ್ಲಿ ಹೆಸರು ಹೊಂದಿರುವವರು ನಿಗದಿಪಡಿಸಲಾದ ದಿನಾಂಕಗಳಂದು ವೇಳಾಪಟ್ಟಿಯಂತೆ ಏರ್ಪಡಿಸಿರುವ ಕೌನ್ಸಿಲಿಂಗ್‌ಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದೆ. ಗೈರು ಹಾಜರಾದವರಿಗೆ ನಿಯಮ 11 ರಂತೆ ಸ್ಥಳ ಹಂಚಿಕೆ ಮಾಡಲಾಗುವುದು. **ಕೌನ್ಸಿಲಿಂಗ್ ನಡೆಯುವ ಸ್ಥಳ** : ಆಯುಷ್ ನಿರ್ದೇಶನಾಲಯ, ಬೆಂಗಳೂರು.
ಸಹಿ/– ಆಯುಕ್ತರು
ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ (ಆಯುಷ್) ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು – 560009
ವಾ.ಸಾ.ಸಂ.ಇ/ವಾಪ್ರ/1283/ಆಕಾರ್/2025–26

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.
ಸಂ: 03/ಕಾಅ/ಗ್ರಾ.ಕು.ನೀ.&ನೈವಿ/ರಾ/ಕ.ಇ–01/ಟೆಂಡರು ಜಾಹೀರಾತು/388/2025–26 ದಿನಾಂಕ: 17.06.2025
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ರಾಮನಗರ ಇವರು ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಾಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.
ಕಾಮಗಾರಿಯ ಹೆಸರು: **Hiring and Empanelment of Third Party Agency Under Jal Jeevan Mission for Rural Drinking Water Works (In village Distribution Works) and Chartered Accountant for Rural Drinking Water Schemes for RDWS&S Division Ramanagara Call-02.**
1) ಟೆಂಡರ್‌ಗಿಟ್ಟ ಮೊತ್ತ : **ರೂ.89.38 ಲಕ್ಷಗಳು** ಇ.ಎಂ.ಡಿ ಮೊತ್ತ : **ರೂ. 1,78,000/– 2)** ಕಾಲಾವಧಿ:12 ತಿಂಗಳು. **3)** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ : 02.07.2025 ಸಂಜೆ 5.30 ಗಂಟೆಯವರೆಗೆ 4)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.07.2025 ಬೆಳಿಗ್ಗೆ 11.00 ಗಂಟೆಯ ನಂತರ. 5)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 05.07.2025 ಬೆಳಿಗ್ಗೆ 11.00 ಗಂಟೆಯ ನಂತರ.**
ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್ https://kppp.karnataka.gov.in/ರಲ್ಲಿ ಪಡೆಯಬಹುದು.
ಸಹಿ/–
ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
DIPR/BSD/174/SA/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ತಪ್ಪು ಮಾಡುವುದು ಒಂದು ತಪ್ಪಾದರೆ, ಅದನ್ನು ತಿದ್ದಿಕೊಳ್ಳದಿರುವುದು ಇನ್ನೊಂದು ತಪ್ಪು.

-ಕನ್‌ಫ್ಯೂಷಿಯಸ್

ಸಂಪಾದಕೀಯ

ಕ್ಯಾನ್ಸರ್‌ಬಾಧಿತ ಮಕ್ಕಳಿಗೆ ವಸತಿಶಾಲೆ ಅಗತ್ಯ ಕ್ರಮ, ದಕ್ಷವಾಗಿ ಜಾರಿಯಾಗಲಿ

ಕ್ಯಾನ್ಸರ್‌ಬಾಧಿತ ಮಕ್ಕಳಿಗಾಗಿ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಮೀಪದಲ್ಲಿ ವಸತಿಸಹಿತ ಶಾಲೆ ಸ್ಥಾಪಿಸುವ ನಿರ್ಧಾರವನ್ನು ಕರ್ನಾಟಕ ಸರ್ಕಾರ ಕೈಗೊಂಡಿದೆ. ಆರೋಗ್ಯ ರಕ್ಷಣೆ ಮತ್ತು ಶಿಕ್ಷಣವು ಎಲ್ಲರನ್ನೂ ಒಳಗೊಳ್ಳಬೇಕು ಎಂಬ ದಿಸೆಯಲ್ಲಿ ಇದೊಂದು ಶ್ಲಾಘನೆಗೆ ಅರ್ಹವಾದ ಕ್ರಮ. ರಾಜ್ಯದಲ್ಲಿ ಶಾಲೆಗೆ ಹೋಗುವ ವಯಸ್ಸಿನ 3,500 ಮಕ್ಕಳು ಕ್ಯಾನ್ಸರ್ ಬಾಧಿತರಾಗಿದ್ದಾರೆ. ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ ವಸತಿಸಹಿತ ಶಾಲೆಯಲ್ಲಿ ಒಮ್ಮೆಗೆ 1,500 ಮಕ್ಕಳಿಗೆ ಅವಕಾಶ ಇದೆ. ಇಲ್ಲಿ ಉಚಿತ ವಸತಿ, ಪೌಷ್ಟಿಕ ಆಹಾರ, ವಿಶೇಷ ಆರೈಕೆ ಮತ್ತು ಅನಿರ್ಬಂಧಿತ ಕಲಿಕೆಗೆ ಅವಕಾಶ ಇದೆ ಎಂಬ ಭರವಸೆಯನ್ನು ಸರ್ಕಾರ ನೀಡಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಮಧು ಬಂಗಾರಪ್ಪ ಅವರು ಈ ಯೋಜನೆಯನ್ನು ಘೋಷಿಸಿದ್ದಾರೆ. ಎಳೆ ವಯಸ್ಸಿನ ಮಕ್ಕಳು ಆರೋಗ್ಯ ಮತ್ತು ಭವಿಷ್ಯ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡುವ ಸಂದಿಗ್ಧಕ್ಕೆ ಒಳಗಾಗದಂತೆ ಈ ಯೋಜನೆಯು ಖಾತರಿ ನೀಡುತ್ತದೆ. ಈ ಮಾದರಿಯಲ್ಲಿ ಹಲವು ಅನುಕೂಲಗಳು ಇವೆ ಎಂಬುದು ಮೇಲ್ನೋಟಕ್ಕೇ ಕಾಣಿಸುತ್ತದೆ. ನಿರಂತರ ವೈದ್ಯಕೀಯ ಆರೈಕೆಯ ಜೊತೆಗೆ ವ್ಯವಸ್ಥಿತ ಶಿಕ್ಷಣವನ್ನೂ ಒಂದೇ ಕಡೆಯಲ್ಲಿ ನೀಡುವ ಮೂಲಕ ಕ್ಯಾನ್ಸರ್ ಇರುವ ಮಕ್ಕಳ ಸಮಗ್ರ ಅಭಿವೃದ್ಧಿಯನ್ನು ಬೆಂಬಲಿಸುವುದು ಸಾಧ್ಯವಾಗುತ್ತದೆ. ಈ ಸಮನ್ವಯದಿಂದಾಗಿ ಮಕ್ಕಳ ಜೀವನ ಗುಣಮಟ್ಟವು ಗಮನಾರ್ಹ ಪ್ರಮಾಣದಲ್ಲಿ ಉತ್ತಮಗೊಳ್ಳುತ್ತದೆ.

ನಿರಂತರ ವೈದ್ಯಕೀಯ ಆರೈಕೆಯ ಜೊತೆಗೆ ವ್ಯವಸ್ಥಿತ ಶಿಕ್ಷಣವನ್ನೂ ಒಂದೇ ಕಡೆಯಲ್ಲಿ ನೀಡುವ ಮೂಲಕ ಮಕ್ಕಳ ಸಮಗ್ರ ಅಭಿವೃದ್ಧಿಯನ್ನು ಬೆಂಬಲಿಸುವುದು ಇದರಿಂದ ಸಾಧ್ಯವಾಗುತ್ತದೆ

ಕಿದ್ವಾಯಿ ಸಂಸ್ಥೆಯ ಸಮೀಪದಲ್ಲಿಯೇ ಶಾಲೆಯು ಸ್ಥಾಪನೆ ಆಗಲಿರುವುದರಿಂದ ಕ್ಯಾನ್ಸರ್ ತಜ್ಞರು ತಕ್ಷಣವೇ ಲಭ್ಯರಾಗುತ್ತಾರೆ. ಇದರಿಂದಾಗಿ ಕುಟುಂಬದ ಮೇಲಿನ ಹೊರೆ ತಗ್ಗುತ್ತದೆ. ಇದೂ ಅಲ್ಲದೆ, ತಮ್ಮಂತಹುದೇ ಸವಾಲು ಎದುರಿಸುತ್ತಿರುವ ಸಹವರ್ತಿಗಳ ಜೊತೆಗಿನ ಬದುಕು ಮಕ್ಕಳಲ್ಲಿ ಭಾವನಾತ್ಮಕ ಒಗ್ಗಟ್ಟು, ಪರಸ್ಪರ ಗ್ರಹಿಕೆ ಮತ್ತು ಸಹಪಯಣದ ಭಾವವನ್ನು ಮೂಡಿಸುತ್ತದೆ. ಆಗಾಗ ಆಸ್ಪತ್ರೆಗೆ ಹೋಗುವುದು ಮತ್ತು ಸುದೀರ್ಘ ಅವಧಿಗೆ ಶಾಲೆಯಿಂದ ಹೊರಗೆ ಉಳಿಯುವುದು ತಪ್ಪಿ ಕಲಿಕೆಯು ನಿರಂತರವಾಗುತ್ತದೆ.

ಎಷ್ಟೇ ಸದುದ್ದೇಶ ಇದ್ದರೂ ಪ್ರಸ್ತಾವವನ್ನು ಸಮಗ್ರವಾದ ಪರಿಶೀಲನೆಗೆ ಒಳಪಡಿಸಬೇಕು. ವಸತಿ ಶಾಲೆಯಲ್ಲಿ ಇರುವುದರಿಂದ ಮಕ್ಕಳಲ್ಲಿ ಒಬ್ಬಂಟಿ ಭಾವ ಮೂಡಬಹುದು ಎಂಬುದು ತಕ್ಷಣದ ಕಳವಳವಾಗಿದೆ. ವಸತಿಯುತ ಶಾಲೆಯ ಪ್ರತ್ಯೇಕ ವಾತಾವರಣಕ್ಕೆ ಸೀಮಿತವಾಗುವ ಮಕ್ಕಳಿಗೆ ಶಾಲೆಯ ಹೊರಗಿನ ಸಹವರ್ತಿಗಳ ಜೊತೆಗೆ ಸಂವಹನ ಇಲ್ಲವಾಗುತ್ತದೆ. ಇದರಿಂದಾಗಿ ಅವರಿಗೆ ಸಾಮಾಜಿಕ ಒಡನಾಟ ತಪ್ಪಿಹೋಗಬಹುದು. ಕ್ಯಾನ್ಸರ್‌ನ ವೇದನೆಯಿಂದ ಬಳಲುತ್ತಿರುವ ಮಕ್ಕಳು ಕುಟುಂಬದಿಂದಲೂ ಬೇರ್ಪಟ್ಟು ಭಾವನಾತ್ಮಕ ಒತ್ತಡಕ್ಕೆ ಒಳಗಾಗಬಹುದು. ಸಣ್ಣ ವಯಸ್ಸಿನ ಮಕ್ಕಳಲ್ಲಿ ಈ ಸಮಸ್ಯೆ ಇನ್ನೂ ಹೆಚ್ಚಾಗಬಹುದು. ಸರ್ಕಾರಿ ವ್ಯವಸ್ಥೆಯಲ್ಲಿನ ಶಿಕ್ಷಣದ ಗುಣಮಟ್ಟವೂ ಕಳವಳದ ವಿಚಾರವೇ ಆಗಿದೆ. ಈ ಬಾರಿ ಸರ್ಕಾರಿ ಶಾಲೆಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಶೇ 62.7ರಷ್ಟು ಮಾತ್ರ ಇದೆ. ಹಾಗಾಗಿ, ವಸತಿಯುತ ಶಾಲೆಯೊಂದನ್ನು ಸ್ಥಾಪಿಸುವುದರಿಂದ ಮಾತ್ರ ಹೆಚ್ಚಿನದನ್ನು ಸಾಧಿಸಿದಂತಾಗದು. ಸ್ಪರ್ಧಾತ್ಮಕವಾದ ಶಿಕ್ಷಣಕ್ಕೆ ಈ ಮಕ್ಕಳು ಅರ್ಹರು ಮತ್ತು ಅದು ಅವರಿಗೆ ಸಿಗಲೇಬೇಕು. ಮಕ್ಕಳ ಆರೋಗ್ಯ ಮತ್ತು ಶೈಕ್ಷಣಿಕ ಕ್ಷಮತೆ ಈ ಎರಡರಲ್ಲೂ ಅತ್ಯುತ್ತಮ ಸಾಧನೆ ದಾಖಲಿಸುವ ಮೂಲಕ ಇಂತಹ ಮಾದರಿ ಶಾಲೆಯ ಸ್ಥಾಪನೆಯು ಸಮರ್ಥನೀಯ ಎನಿಸಿಕೊಳ್ಳಬೇಕು. ಇಂತಹ ಕೇಂದ್ರವೊಂದನ್ನು ನಡೆಸಿಕೊಂಡು ಹೋಗಲು ಗಣನೀಯ ಮೊತ್ತದ ನಿಧಿಯೂ ಬೇಕಾಗುತ್ತದೆ. ಹಣಕಾಸಿನ ಕೊರತೆ ಆಗುವುದಿಲ್ಲ ಎಂಬುದನ್ನು ಸರ್ಕಾರ ಖಾತರಿಪಡಿಸಬೇಕು.

ವಸತಿಸಹಿತ ಶಾಲೆಯ ಸ್ಥಾಪನೆ ಉದ್ದೇಶವು ಸರಿಯಾದ ದಿಕ್ಕಿನಲ್ಲಿ ಇರಿಸಲಾದ ಹೆಜ್ಜೆ. ಹಾಗಿದ್ದರೂ ಇತರ ಅಂಶಗಳ ಕುರಿತು ಕೂಡ ಸರ್ಕಾರ ಗಮನ ಹರಿಸಬೇಕು. ಆರೋಗ್ಯ ಸೇವೆಗಳ ಅತಿಯಾದ ಕೇಂದ್ರೀಕರಣದ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಬೇಕಾಗಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಅತಿಯಾದ ಹೊರೆಯಿಂದ ಬಳಲುತ್ತಿದೆ. ಹಾಗಾಗಿ, ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರವು ಚಿಂತನೆ ನಡೆಸಬೇಕು. ಇದರಿಂದ ಕ್ಯಾನ್ಸರ್ ಬಾಧಿತರಾದ ಎಲ್ಲ ರೋಗಿಗಳಿಗೂ ನೆರವಾಗುತ್ತದೆ. ಜೊತೆಗೆ, ಮಹತ್ವದ ಚಿಕಿತ್ಸೆಗಳನ್ನು ಪಡೆಯುವಾಗ ಮಕ್ಕಳು ಹೆತ್ತವರ ಜೊತೆಯಲ್ಲಿಯೇ ಇರುವುದು ಸಾಧ್ಯವಾಗುತ್ತದೆ. ಕುಟುಂಬವು ಅನಗತ್ಯವಾಗಿ ತೊಂದರೆ ಎದುರಿಸುವುದು ತಪ್ಪುತ್ತದೆ. ಸರ್ಕಾರವು ಇಂತಹ ಅತ್ಯಗತ್ಯ ಕ್ರಮಗಳನ್ನು ದಕ್ಷವಾಗಿ ಜಾರಿಗೆ ತರುವುದರ ಮೂಲಕ ಕ್ಯಾನ್ಸರ್‌ಬಾಧಿತ ಮಕ್ಕಳ ಭವಿಷ್ಯವನ್ನು ಉಜ್ವಲವೂ, ಆರೋಗ್ಯಪೂರ್ಣವೂ ಆಗಿಸಬಹುದು.

ವಿಮಾನ ದುರಂತ ಮತ್ತು ನಾವು

ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಏರ್ ಇಂಡಿಯಾ ಕಂಪನಿಯ 787–8 ಡ್ರೀಮ್‌ಲೈನರ್ ವಿಮಾನವು ಅಹಮದಾಬಾದ್ ವಿಮಾನ ನಿಲ್ದಾಣದಿಂದ ಆಗಸಕ್ಕೆ ಜಿಗಿದ ಕೆಲವೇ ಕ್ಷಣಗಳಲ್ಲಿ ದುರಂತಕ್ಕೆ ತುತ್ತಾಗಿದ್ದುದು ಭಯಾನಕ. ವಿಮಾನದಲ್ಲಿ ಸಿಬ್ಬಂದಿ ಸೇರಿದಂತೆ 242 ಮಂದಿ ಇದ್ದರು. ವಿಮಾನ ನಿಲ್ದಾಣದ ಹೊರಗೆ ಅನತಿ ದೂರದಲ್ಲಿ ಇದ್ದ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಈ ವಿಮಾನ ಅಪ್ಪಳಿಸಿದೆ. ವಿಮಾನದಲ್ಲಿದ್ದ ಒಬ್ಬ ಪ್ರಯಾಣಿಕನನ್ನು ಹೊರತುಪಡಿಸಿ ಇನ್ನೆಲ್ಲರೂ ಜೀವ ಕಳೆದುಕೊಂಡಿದ್ದಾರೆ.

ಈ ದುರಂತವು ಜಗತ್ತಿನ ಎಲ್ಲ ಪ್ರಮುಖ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಯಿತು. ಇದು ವಿಶ್ವ ಕಂಡ ಅತಿಕೆಟ್ಟ ವಿಮಾನ ದುರಂತಗಳಲ್ಲಿ ಒಂದು.

ಏರ್ ಇಂಡಿಯಾ ಕಂಪನಿಯ ಮಾಲೀಕತ್ವ ಹೊಂದಿರುವ ಟಾಟಾ ಸಮೂಹವು ಇಂತಹ ಸಂದರ್ಭದಲ್ಲಿ ಅಸಾಮಾನ್ಯ ಬಗೆಯಲ್ಲಿ ಸ್ಪಂದಿಸಿರುವುದು ಹೃದಯ ತುಂಬಿಬರುವಂತೆ ಮಾಡಿದೆ. ಕೇಂದ್ರ ಸರ್ಕಾರ ಹಾಗೂ ಟಾಟಾ ಸಮೂಹ ಜೊತೆಯಾಗಿ ಕೆಲಸ ಮಾಡುತ್ತಿವೆ. ಪ್ರಧಾನಿ, ಕೇಂದ್ರ ಗೃಹ ಸಚಿವ ಮತ್ತು ವಿಮಾನಯಾನ ಸಚಿವ, ಗುಜರಾತ್ ಮುಖ್ಯಮಂತ್ರಿ ದುರ್ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ದುರಂತದಲ್ಲಿ ಜೀವ ಕಳೆದುಕೊಂಡ ಪ್ರತಿ ವ್ಯಕ್ತಿಯ ಕುಟುಂಬಕ್ಕೆ ತಲಾ ₹1 ಕೋಟಿ ಪರಿಹಾರ ನೀಡುವುದಾಗಿ ಟಾಟಾ ಸಮೂಹದ ಅಧ್ಯಕ್ಷ ಎನ್. ಚಂದ್ರಶೇಖರನ್ ಪ್ರಕಟಿಸಿದ್ದಾರೆ. ದಾನ ಕಾರ್ಯಗಳಿಗೆ ಹೆಸರಾಗಿರುವ ಟಾಟಾ ಸಮೂಹವು ತನಗಿರುವ ಹೆಸರಿಗೆ ತಕ್ಕಂತೆ ವರ್ತಿಸುವ ನಿರೀಕ್ಷೆ ಇಟ್ಟುಕೊಳ್ಳಬಹುದು.

ಟಾಟಾ ಸಮೂಹದ ಆಡಳಿತ ಮಂಡಳಿ ಹಾಗೂ ಕೇಂದ್ರ ಸರ್ಕಾರವು ಈ ದುರ್ಘಟನೆ ಬಗ್ಗೆ ಕಾಲಮಿತಿಯಲ್ಲಿ ಆಳವಾದ ಹಾಗೂ ಪ್ರಾಮಾಣಿಕವಾದ ತನಿಖೆ ನಡೆಸುವಲ್ಲಿ ಮತ್ತು ತಮ್ಮವರನ್ನು ಕಳೆದುಕೊಂಡಿರುವವರ ಬಗೆಗೆ ಇರಬೇಕಾದ ನೈತಿಕ ಹೊಣೆಗಾರಿಕೆಯ ವಿಚಾರದಲ್ಲಿ ಯಾವುದೇ ಬಗೆಯ ಅಲಕ್ಷ್ಯಕ್ಕೆ ಅವಕಾಶ ಮಾಡಿಕೊಡಬಾರದು. ಈ ದಿಸೆಯಲ್ಲಿ ಆಗಬೇಕಿರುವ ಕೆಲಸಗಳು ಆಗದಂತಹ ಸ್ಥಿತಿಯನ್ನು ಸೃಷ್ಟಿಸಿಕೊಳ್ಳಬಾರದು. ಈ ದುರಂತವು ಟಾಟಾ ಸಮೂಹಕ್ಕೂ ಸರ್ಕಾರಕ್ಕೂ ಪಾಠ ಆಗಬೇಕು.

ವಿಮಾನ ದುರಂತದ ತನಿಖೆಗಳು ತೀರಾ ಸಂಕೀರ್ಣವಾಗಿರುತ್ತವೆ. ಅವು ಪೂರ್ಣಗೊಳ್ಳಲು ತಿಂಗಳುಗಳೇ ಬೇಕಾಗುತ್ತವೆ. ಕೆಲವು ಸಂದರ್ಭಗಳಲ್ಲಿ ದುರ್ಘಟನೆಗೆ ನಿಖರ ಕಾರಣ ಪತ್ತೆ ಮಾಡಲು ವರ್ಷಗಳೇ ಬೇಕಾಗುತ್ತವೆ. ಹೀಗಿದ್ದರೂ ಕೆಲವರಿಗೆ ಊಹೆಗಳನ್ನು ಮಾಡುವ, ನಿರ್ಣಯಕ್ಕೆ ಬರುವ ಬಯಕೆಯನ್ನು ಅದುಮಿಟ್ಟುಕೊಳ್ಳುವುದು ಕಷ್ಟದ್ದು. ಈ ವಿಮಾನವು ಪತನವಾಗುವುದಕ್ಕೂ ಮೊದಲಿನ ದೃಶ್ಯಾವಳಿಗಳನ್ನು, ರೇಡಾರ್ ದತ್ತಾಂಶವನ್ನು, ವಿಮಾನಗಳ ಹಾರಾಟವನ್ನು ಪರಿಶೀಲಿಸುವ ಕೆಲವು ಇಂಟರ್‌ನೆಟ್ ವೇದಿಕೆಗಳಲ್ಲಿನ ಮಾಹಿತಿಯನ್ನು ಅವಲೋಕಿಸಿರುವ ವೈಮಾನಿಕ ಕ್ಷೇತ್ರದ ತಜ್ಞರು, ವಿಶ್ಲೇಷಕರು, ಹಿರಿಯ ಪೈಲಟ್‌ಗಳು ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ.

ಅಮೆರಿಕದ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯಲ್ಲಿ ತನಿಖಾಧಿಕಾರಿ ಆಗಿದ್ದ ಗ್ರೆಗ್ ಫೇತ್ ಅವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ‘ಟೇಕ್– ಆಫ್ ಆದಾಗ ವಿಮಾನದಲ್ಲಿ ಎಲ್ಲವೂ ಸರಿಯಾಗಿ ಇತ್ತೇ? ವಿಮಾನದ ಎಂಜಿನ್‌ಗಳಿಂದ ಸರಿಯಾಗಿ ನೂಕುಬಲ ಸಿಗುತ್ತಿತ್ತೇ? ಇಂಧನ ಕಲಬೆರಕೆ ಆಗಿತ್ತೇ? ವಿಮಾನದ ಎಂಜಿನ್‌ಗಳಿಗೆ ಇಂಧನ ಸರಿಯಾಗಿ ಲಭ್ಯವಾಗದೆ, ಅವು ನೂಕುಬಲ ಸೃಷ್ಟಿಸದಂತೆ ಆಯಿತೇ’ ಎಂದು ಅವರು ಕೇಳಿದ್ದಾರೆ.

ಅಪಘಾತಕ್ಕೆ ಪೈಲಟ್ ಕಡೆಯಿಂದ ಆದ ಲೋಪ ಕಾರಣವೇ ಎಂಬ ಪ್ರಶ್ನೆಯನ್ನು ಇತರ ಕೆಲವು ತಜ್ಞರು ಎತ್ತಿದ್ದಾರೆ. ವಿಮಾನ ಮೇಲಕ್ಕೆ ಜಿಗಿದ ನಂತರದಲ್ಲಿ ಅದರ ಲ್ಯಾಂಡಿಂಗ್ ಗೇರ್‌ಗಳು (ಚಕ್ರಗಳು) ಒಳಕ್ಕೆ ಮಡಚಿಕೊಂಡಿರಲಿಲ್ಲ. ವಿಮಾನದ ಫ್ಲ್ಯಾಪ್‌ಗಳನ್ನು ತಗ್ಗಿಸಿರಲಿಲ್ಲವಾದ ಕಾರಣದಿಂದಾಗಿ ವಿಮಾನವು ಮೇಲಕ್ಕೆ ಏರುವುದು ಕಷ್ಟವಾಗಿತ್ತು. ಅಲ್ಲದೆ, ಅಹಮದಾಬಾದ್‌ನಲ್ಲಿ ಆ ಮಧ್ಯಾಹ್ನದ ಹೊತ್ತಿನಲ್ಲಿ ತಾಪಮಾನವು ಹೆಚ್ಚಿದ್ದ ಕಾರಣಕ್ಕೆ ವಿಮಾನದ ಎಂಜಿನ್ ಬಲವು ಸಾಕಾಗುವಷ್ಟು ಇರಲಿಲ್ಲ. ಈ ವಿಮಾನದ ದುರಂತವು 1987ರಲ್ಲಿ ಅಮೆರಿಕದ ಮಿಷಿಗನ್‌ನಲ್ಲಿ ನಾರ್ತ್‌ವೆಸ್ಟ್ ಏರ್‌ಲೈನ್ಸ್ ವಿಮಾನ ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ದುರಂತಕ್ಕೆ ತುತ್ತಾಗಿದ್ದಕ್ಕೆ ಹೋಲುತ್ತದೆ ಎಂದು ಕೆಲವರು ಹೇಳಿದ್ದಾರೆ.

ವಿಮಾನದ ಎರಡೂ ಎಂಜಿನ್‌ಗಳಿಗೆ ಹಕ್ಕಿಗಳು ಬಡಿದು, ಅವು ಬಲ ಕಳೆದುಕೊಂಡಿರುವ ಸಾಧ್ಯತೆ ಇದೆ. ಆದರೆ, ಹೀಗೆ ಆಗುವ ಸಾಧ್ಯತೆ ಲಕ್ಷಕ್ಕೆ ಒಂದು ಮಾತ್ರ. ಯುಎಸ್ ಏರ್‌ವೇಸ್ ವಿಮಾನವೊಂದು ನ್ಯೂಯಾರ್ಕ್ ವಿಮಾನ ನಿಲ್ದಾಣದಿಂದ ಟೇಕ್–ಆಫ್ ಆದ ನಂತರ ಹಕ್ಕಿಗಳಿಗೆ ಬಡಿಯಿತು, ಆ ವಿಮಾನದ ಎರಡೂ ಎಂಜಿನ್‌ಗಳಿಗೆ ಹಾನಿಯಾಗಿ ಅವು ಬಲ ಕಳೆದುಕೊಂಡಿದ್ದವು. ಆದರೆ, ಆ ವಿಮಾನದ ಪೈಲಟ್‌ಗಳು ಸ್ಥಿತಪ್ರಜ್ಞರಾಗಿ, ಪ್ರಾಣಹಾನಿ ಆಗದಂತೆ ವಿಮಾನವನ್ನು ಹಡ್ಸನ್ ನದಿಯ ಮೇಲೆ ಇಳಿಸಿದ್ದರು.

ನಮ್ಮ ವಿಮಾನ ನಿಲ್ದಾಣಗಳು ಟೇಕ್–ಆಫ್ ಮತ್ತು ವಿಮಾನ ಇಳಿಸುವುದಕ್ಕೆ ಸುರಕ್ಷಿತವಾಗಿ ಇವೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಭಾರತದ ವಿಮಾನ ನಿಲ್ದಾಣಗಳಲ್ಲಿ ವಿಮಾನಗಳು ಇಳಿಯುವ ಹಾಗೂ ಟೇಕ್–ಆಫ್ ಆಗುವ ಕಡೆಗಳಲ್ಲಿ, ವಿಮಾನ ನಿಲ್ದಾಣದ ಪರಿಧಿಯ ಆಚೆಗಿನ (ಫನಲ್ ವಲಯ) ಪ್ರದೇಶವನ್ನು ಕಟ್ಟಡಗಳು ಆಕ್ರಮಿಸಿಕೊಂಡಿವೆ. ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ರನ್‌ವೇ ಆಚೆಗೆ ಕಟ್ಟಡಗಳ ರಾಶಿಯನ್ನು ಚಿತ್ರಗಳಲ್ಲಿ ಕಾಣಬಹುದು. ಅಹಮದಾಬಾದ್ ದುರಂತದಲ್ಲಿ ವಿಮಾನದ ಎಂಜಿನ್‌ಗಳಿಂದ ಹೊಗೆ ಬರುತ್ತಿರಲಿಲ್ಲ. ಹೀಗಾಗಿ ಆ ದುರ್ಘಟನೆಗೆ ಹಕ್ಕಿ ಬಡಿದಿದ್ದು ಕಾರಣ ಅಲ್ಲ ಎಂದು ಹೇಳಲಾಗಿದೆ. ಆದರೆ, ವಿಮಾನದ ನೂಕುಬಲ ಕಡಿಮೆ ಆಗಿದ್ದು ಇತರ ಕಾರಣಗಳಿಂದ ಎಂದಾಗಿದ್ದರೆ, ರನ್‌ವೇ ಆಚೆಗೆ ಅಡ್ಡಿಗಳು ಇಲ್ಲವಾಗಿದ್ದಿದ್ದರೆ, ಹಿಂದೆ ಪೈಲಟ್‌ಗಳಾಗಿ ಕೆಲಸ ಮಾಡಿರುವವರು ಹೇಳಿರುವಂತೆ, ಈ ವಿಮಾನದ ಪೈಲಟ್‌ಗಳು ವಿಮಾನವನ್ನು ತೇಲಿಸಿಕೊಂಡು ಹೋಗಿ ಸುರಕ್ಷಿತವಾಗಿ ಇಳಿಸುತ್ತಿದ್ದರೇನೋ. ಆಗ ಜೀವಹಾನಿ ಕಡಿಮೆ ಆಗುತ್ತಿತ್ತೇನೋ.

> ವಿಮಾನ ದುರಂತಗಳ ಕುರಿತ ತನಿಖೆಯ ಪ್ರಾಥಮಿಕ ವರದಿಯನ್ನು ಅಮೆರಿಕ ಮತ್ತು ಯುರೋಪಿನಲ್ಲಿ ಐದರಿಂದ ಆರು ತಿಂಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಆ ವರದಿಯನ್ನು ಎಲ್ಲ ವಿಮಾನಯಾನ ಕಂಪನಿಗಳಿಗೆ ನೀಡಿ, ಲೋಪಗಳನ್ನು ಸರಿಪಡಿಸಿಕೊಳ್ಳಲು ಹೇಳಲಾಗುತ್ತದೆ. ಈ ನಡೆಯನ್ನು ಭಾರತದಲ್ಲಿಯೂ ಅನುಸರಿಸಬೇಕು

ರನ್‌ವೇ ಕೊನೆಯಲ್ಲಿ ಹಾಗೂ ಅದರ ಆರಂಭದಲ್ಲಿ ಜಮೀನಿನಲ್ಲಿ ಯಾವುದೇ ಕಟ್ಟಡಗಳು ಇಲ್ಲದಂತೆ ನೋಡಿಕೊಳ್ಳುವುದರ ಅಗತ್ಯ, ಅಲ್ಲಿ ಪ್ರಾಣಿವಧೆ ಘಟಕಗಳಿಗೆ ಪರವಾನಗಿ ನೀಡದೇ ಇರುವುದರ ಪಾಲನೆ ಬಗ್ಗೆ ಕೂಡ ತನಿಖೆ ಆಗಬೇಕು. ಈ ವಿಚಾರದಲ್ಲಿ ಆಗಿರುವ ತಪ್ಪುಗಳನ್ನು ಭಾರತದ ಎಲ್ಲೆಡೆ ಸರಿಪಡಿಸಿಕೊಳ್ಳಬೇಕು. ಆದರೆ, ವಿಮಾನದ ಬ್ಲ್ಯಾಕ್‌ಬಾಕ್ಸ್ ಮತ್ತು ಕಾಕ್‌ಪಿಟ್‌ನ ಧ್ವನಿಯನ್ನು ದಾಖಲಿಸಿಕೊಳ್ಳುವ ಸಾಧನವು ಪತ್ತೆಯಾಗಿ, ಅದರ ವಿಶ್ಲೇಷಣೆ ಆಗದ ಹೊರತು ಯಾವುದೇ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ ಎಂಬ ವಿಚಾರದಲ್ಲಿ ಅನುಭವ ಇರುವ ಪ್ರತಿ ತನಿಖಾಧಿಕಾರಿ ಕೂಡ ಸಹಮತ ಹೊಂದಿರುತ್ತಾರೆ. ಬ್ಲ್ಯಾಕ್‌ಬಾಕ್ಸ್ ಸಿಕ್ಕಿದೆ. ಅದರ ವಿಶ್ಲೇಷಣೆ ನಡೆಯುವವರೆಗೆ ನಾವು ಕಾಯಬೇಕು.

ಫೇತ್ ಅವರು ಒಂದು ಒಳ್ಳೆಯ ಮಾತು ಹೇಳಿದ್ದಾರೆ. ‘ದುರಂತದ ಬಗ್ಗೆ ನಡೆಯುವ ತನಿಖೆಯ ಉದ್ದೇಶ ಸುರಕ್ಷತೆಯ ದೃಷ್ಟಿಯಿಂದ ಮಹತ್ವದ್ದಾದ ಅಂಶಗಳನ್ನು ಗುರುತಿಸುವುದು. ವಿಮಾನಯಾನ ಕಂಪನಿಯಲ್ಲಿ, ಸಿಬ್ಬಂದಿಯಲ್ಲಿ ಹಾಗೂ ವಿಮಾನದಲ್ಲಿ ದೋಷ ಇದ್ದರೆ ಅದನ್ನು ಗುರುತಿಸಬೇಕು ಮತ್ತು ದೋಷಗಳನ್ನು ಸರಿಪಡಿಸುವ ಕೆಲಸವು ಬಹಳ ವೇಗವಾಗಿ ಆಗಬೇಕು’ ಎಂದು ಅವರು ಹೇಳಿದ್ದಾರೆ.

ಅಹಮದಾಬಾದ್ ದುರಂತವು ಬಹಳ ಗಮನ ಸೆಳೆಯುವುದಕ್ಕೆ ಒಂದು ಕಾರಣ ಇದೆ. ಡ್ರೀಮ್‌ಲೈನರ್ ಮಾದರಿಯ ವಿಮಾನವು ಜಗತ್ತಿನಲ್ಲೇ ಅತ್ಯಾಧುನಿಕವಾದ ಪ್ರಯಾಣಿಕ ವಿಮಾನ. ಈ ಮಾದರಿಯ 1,100 ವಿಮಾನಗಳು ಒಂದು ದಶಕಕ್ಕೂ ಹೆಚ್ಚಿನ ಅವಧಿಯಿಂದ ಯಾವುದೇ ಕಳಂಕ ಇಲ್ಲದೆ ಕಾರ್ಯಾಚರಣೆ ನಡೆಸುತ್ತಿವೆ. ಈ ಮಾದರಿಯ ವಿಮಾನಗಳ ಬಗ್ಗೆ ಕೆಲವು ಆರೋಪಗಳು ಬಂದ ನಂತರ ಅಮೆರಿಕದ ಎಫ್‌ಎಎ ತನಿಖೆ ನಡೆಸಿದೆ, ವಿಮಾನಗಳ ಕಾರ್ಯಾಚರಣೆಗೆ ಹಸಿರುನಿಶಾನೆ ತೋರಿದೆ. ಈಗ ಈ ವಿಮಾನದ ತಯಾರಿಕಾ ಕಂಪನಿಯ ಬಗ್ಗೆ ಹೊಸದಾಗಿ ಒಂದಿಷ್ಟು ಪ್ರಶ್ನೆಗಳು ಮೂಡಬಹುದು.

ಅಪಘಾತಕ್ಕೆ ತುತ್ತಾದ ವಿಮಾನದ ಪೈಲಟ್‌ಗಳು ಬಹಳ ಅನುಭವಿಗಳಾಗಿದ್ದರು, ವಿಮಾನ ನಿರ್ವಹಣೆ ಮತ್ತು ಸುರಕ್ಷತಾ ಮಾನದಂಡವನ್ನು ಉತ್ತಮಪಡಿಸಲು ಟಾಟಾ ಸಮೂಹವು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿತ್ತು. ಹೀಗಿದ್ದರೂ ಈ ದುರಂತ ಆಗಿದ್ದು ಹೇಗೆ? ಇದಕ್ಕೆ ಹಲವು ಕಾರಣಗಳು ಇದ್ದಿರಬಹುದು. ಏರ್ ಇಂಡಿಯಾ ಕಂಪನಿಯು ಯಾವಾಗಲೂ ಒಂದಲ್ಲ ಒಂದು ಸಮಸ್ಯೆಯಲ್ಲಿ ಇರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಟಾಟಾ ಸಮೂಹವು ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ವಿಸ್ತಾರ ಮತ್ತು ಏರ್ ಏಷ್ಯಾ ಕಂಪನಿಗಳನ್ನು ವಿಲೀನಗೊಳಿಸಿದ ನಂತರದಲ್ಲಿ ಸಮಸ್ಯೆಗಳು ಇನ್ನಷ್ಟು ಸಂಕೀರ್ಣಗೊಂಡಿರಬಹುದು. ಏಕೆಂದರೆ ಈ ನಾಲ್ಕೂ ಕಂಪನಿಗಳ ವಹಿವಾಟಿನ ಮಾದರಿಗಳು ಬೇರೆ ಆಗಿದ್ದವು, ಅವು ಪ್ರತಿಪಾದಿಸುವ ಮೌಲ್ಯಗಳು ಭಿನ್ನವಾಗಿದ್ದವು. ಅವುಗಳು ಬಳಸುವ ವಿಮಾನ ಮಾದರಿಗಳು, ತರಬೇತಿ ಮಾದರಿಗಳು ಕೂಡ ಬೇರೆ ಬೇರೆ ಆಗಿದ್ದವು. ಒಬ್ಬ ಎಂಜಿನಿಯರ್ ಬಹಳ ದೊಡ್ಡ ಅರ್ಹತೆ ಹೊಂದಿರಬಹುದು, ಪೈಲಟ್‌ಗೆ ಅನುಭವ ಹೆಚ್ಚಿರಬಹುದು. ಆದರೆ ಅವರಿಬ್ಬರ ನಡುವೆ ಸಮನ್ವಯ ಸಾಧ್ಯವಾಗದೇ ಇದ್ದರೆ ಸರಿಯಾಗಿ ಜೋಡಣೆ ಆಗದ ವಿಮಾನದಂತೆ ಅವರು ಬೇರೆಯಾಗುತ್ತಾರೆ. ಟಾಟಾ ಸಮೂಹವು ಮಾಡಬೇಕಿರುವ ಕೆಲಸಗಳು ಬಹಳಷ್ಟು ಇವೆ.

ವಿಮಾನ ದುರಂತಗಳ ಕುರಿತ ತನಿಖೆಯ ಪ್ರಾಥಮಿಕ ವರದಿಯನ್ನು ಅಮೆರಿಕ ಮತ್ತು ಯುರೋಪಿನಲ್ಲಿ ಐದರಿಂದ ಆರು ತಿಂಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಆ ವರದಿಯನ್ನು ಎಲ್ಲ ವಿಮಾನಯಾನ ಕಂಪನಿಗಳಿಗೆ ನೀಡಿ, ಲೋಪಗಳನ್ನು ಸರಿಪಡಿಸಿಕೊಳ್ಳಲು ಹೇಳಲಾಗುತ್ತದೆ. ನಿಖರವಾದ ನಿರ್ಣಯಗಳಿಗೆ ಬಂದ ನಂತರ ವಿಸ್ತೃತ ವರದಿಯನ್ನು ಬಿಡುಗಡೆ ಮಾಡಲಾಗುತ್ತದೆ. ಈ ನಡೆಯನ್ನು ಭಾರತದಲ್ಲಿಯೂ ಅನುಸರಿಸಬೇಕು. ಈಗಿನ ಸಂದರ್ಭದಲ್ಲಿ ಭಾರತದಲ್ಲಿ ತನಿಖಾ ವರದಿಯು ವಿಮಾನಯಾನ ಕಂಪನಿಗೆ 3–4 ವರ್ಷಗಳಾದರೂ ತಲುಪುವುದೇ ಇಲ್ಲ. ಸಾರ್ವಜನಿಕರು ಭೀತರಾಗುವ ಅಗತ್ಯ ಇಲ್ಲ. ವಿಮಾನಯಾನವು ಈವರೆಗಿನ ಎಲ್ಲ ಬಗೆಯ ಸಾರಿಗೆಗಳಲ್ಲಿ ಅತ್ಯಂತ ಸುರಕ್ಷಿತ ಎಂಬುದು ನಿಜ. ವಿಮಾನ ನಿಲ್ದಾಣಕ್ಕೆ ಸಾಗುವ ಮಾರ್ಗದಲ್ಲಿ ಸಾಯುವ ಜನರ ಸಂಖ್ಯೆಯು ವಿಮಾನ ದುರಂತಗಳಲ್ಲಿ ಸಾಯುವವರ ಸಂಖ್ಯೆಗಿಂತ ಹೆಚ್ಚಿದೆ.

ಲೇಖಕ: ‘ಏರ್ ಡೆಕ್ಕನ್’ ವಿಮಾನಯಾನ ಕಂಪನಿಯ ಸಂಸ್ಥಾಪಕ

ವಾಚಕರ ವಾಣಿ

ವೆಬ್‌ಕಾಸ್ಟಿಂಗ್ ಔಚಿತ್ಯಪೂರ್ಣ

ದೇಶದ ಎಲ್ಲ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಕೇಂದ್ರ ಚುನಾವಣಾ ಆಯೋಗವು ಮುಂದಾಗಿರುವುದು ಔಚಿತ್ಯಪೂರ್ಣ (ಪ್ರ.ವಾ., ಜೂನ್ 17). ಇದರಿಂದ ಪ್ರಜಾಪ್ರಭುತ್ವದ ನೈಜ ಮೌಲ್ಯಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಸಾಧ್ಯವಾಗಲಿದೆ. ಜೊತೆಗೆ, ನಕಲು ಮತದಾನಕ್ಕೆ ಕಡಿವಾಣ ಬೀಳಲಿದೆ. ಪ್ರಾದೇಶಿಕ ಪಕ್ಷಗಳು ಹಾಗೂ ರಾಷ್ಟ್ರೀಯ ಪಕ್ಷಗಳು ಪಕ್ಷಾತೀತವಾಗಿ ಬದ್ಧತೆ ಪ್ರದರ್ಶಿಸಿ ಒಮ್ಮತದಿಂದ ಸಹಕಾರ ನೀಡಿದಾಗಲಷ್ಟೇ ಆಯೋಗದ ಉದ್ದೇಶಗಳು ಸಾಕಾರಗೊಳ್ಳಲು ಸಾಧ್ಯ.

ಜಯವೀರ ಎ.ಕೆ., ರಾಯಬಾಗ

ಕೆಆರ್‌ಎಸ್ ಜಲಾಶಯ: ಭದ್ರತೆ ಲೋಪ

ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಬಲದಂಡೆ ನಾಲೆಯ ದುರಸ್ತಿ ಕಾರ್ಯ ನಡೆಯುವ ವೇಳೆ ಕೂಲಿ ಕಾರ್ಮಿಕರ ಜೊತೆ ತೆರಳಿ ಜಲಾಶಯದಲ್ಲಿ ನೀರು ಖಾಲಿಯಾಗುತ್ತಿರುವುದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದ ವ್ಯಕ್ತಿಗಳನ್ನು ಬಂಧಿಸಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 15). ಇಲ್ಲಿ ಜಲಾಶಯದ ಸುರಕ್ಷತೆ ಬಗ್ಗೆ ನಿರ್ಲಕ್ಷ್ಯ ತಳೆದಿರುವ ಭದ್ರತಾ ವಿಭಾಗ ಹಾಗೂ ಅವಕಾಶ ಸಿಕ್ಕಾಗ ಜಲಾಶಯದೊಳಗೆ ನುಸುಳಿರುವ ವ್ಯಕ್ತಿಗಳ ತಪ್ಪು ಎದ್ದು ಕಾಣುತ್ತದೆ. ರೀಲ್ಸ್ ಮಾಡಲು ಆರೋಪಿಗಳು ಜಲಾಶಯದೊಳಗೆ ನುಸುಳಿರುವುದು ಅಲ್ಲಿನ ಭದ್ರತಾ ಲೋಪಕ್ಕೆ ಕನ್ನಡಿ ಹಿಡಿದಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ.

ಕೆ.ಎಂ. ನಾಗರಾಜು, ಮೈಸೂರು

ಪಂಚಾಯಿತಿ ಆಡಳಿತ: ನಿಗಾ ಇರಲಿ

ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ (ಪಿಡಿಒ) ಪ್ರಾಮಾಣಿಕತೆ ಮತ್ತು ಅಧ್ಯಕ್ಷರ ಸಮರ್ಥ ನಾಯಕತ್ವ ಅಗತ್ಯ. ಆದರೆ, ಪಂಚಾಯಿತಿಗಳಲ್ಲಿರುವ ಇಂದಿನ ಸ್ಥಿತಿಯು ಇದಕ್ಕೆ ಪೂರಕವಾಗಿಲ್ಲ. ಇತ್ತೀಚೆಗೆ ಪಿಡಿಒ ಒಬ್ಬರ ಅಹಂಕಾರ ಮತ್ತು ವಸೂಲಿ ಧೋರಣೆ ಸಹಿಸದೆ ಗ್ರಾಮವೊಂದರ ಜನರು ದೂರು ನೀಡಿದ ಬಳಿಕ ಲೋಕಾಯುಕ್ತ ಪೊಲೀಸರು ಆ ಅಧಿಕಾರಿಯ ಮನೆ ಮೇಲೆ ದಾಳಿ ಮಾಡಿದ್ದಾರೆ. ಮತ್ತೊಂದೆಡೆ ಕೆಲವು ಪಿಡಿಒಗಳು ಭ್ರಷ್ಟಾಚಾರದ ಆರೋಪದಡಿ ಅಮಾನತುಗೊಂಡಿರುವುದು ವರದಿಯಾಗಿದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪಿಡಿಒಗಳ ಕಾರ್ಯವೈಖರಿ ಮೇಲೆ ಸೂಕ್ತ ರೀತಿಯಲ್ಲಿ ನಿಗಾ ವಹಿಸಬೇಕಿದೆ. ಈ ನಡುವೆಯೂ ಕೆಲವು ಗ್ರಾಮ ಪಂಚಾಯಿತಿಗಳು ಉತ್ತಮ ಆಡಳಿತ ನಿರ್ವಹಣೆಯಿಂದ ರಾಷ್ಟ್ರ ಮಟ್ಟದ ಪ್ರಶಸ್ತಿಗೆ ಭಾಜನವಾಗಿವೆ. ಗ್ರಾಮೀಣರಿಗೆ ಉತ್ತಮ ಸೇವೆ ನೀಡುವ ಮೂಲಕ ಪಂಚಾಯಿತಿಗಳು, ನಜೀರ್ ಸಾಬ್ ಅವರ ಗ್ರಾಮ ರಾಜ್ಯದ ಕನಸನ್ನು ನನಸು ಮಾಡಬೇಕಿದೆ.

ಸತ್ಯಬೋಧ, ಬೆಂಗಳೂರು

ಬಾಲ್ಯವಿವಾಹ: ಕಠಿಣ ಶಿಕ್ಷೆ ವಿಧಿಸಿ

ಚಾಮರಾಜನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತ ಬಿ.ಟಿ. ಅವರು, ತಮ್ಮ ಲೇಖನದಲ್ಲಿ (ಪ್ರ.ವಾ., ಜೂನ್ 16) ಬಾಲ್ಯವಿವಾಹಕ್ಕೆ ಕಾರಣಗಳು ಮತ್ತು ಅದರಿಂದಾಗುವ ದುಷ್ಪರಿಣಾಮ ಕುರಿತು ಮಾಹಿತಿ ನೀಡಿದ್ದಾರೆ. ಈ ಅನಿಷ್ಟ ಪದ್ಧತಿಯ ಮೂಲೋತ್ಪಾಟನೆಗೆ ಪರಿಹಾರ ಕೂಡ ಸೂಚಿಸಿದ್ದಾರೆ.

ಬಾಲ್ಯವಿವಾಹ ತಡೆ ಕಾಯ್ದೆಯಡಿ ತಪ್ಪಿತಸ್ಥರಿಗೆ 2 ವರ್ಷ ಜೈಲು ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಲು ಅವಕಾಶವಿದೆ. ಶಿಕ್ಷೆಗೆ ಹೆದರದವರು ಬುದ್ಧಿಮಾತು ಹೇಳಿದರೆ ಕೇಳುವುದಿಲ್ಲ. ಬಾಲ್ಯವಿವಾಹ ಮಾಡಿದ ಪೋಷಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಈ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು. ಆಗಷ್ಟೇ ಸುಧಾರಣೆ ಕಾಣಲು ಸಾಧ್ಯ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಗುಂಡುತೋಪು ಸಂರಕ್ಷಣೆಗೆ ನಿರ್ಲಕ್ಷ್ಯ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವನ್ನು ‘ಜೈವಿಕ ವೈವಿಧ್ಯ ವನ’ ಅಥವಾ ‘ಪಾರಂಪರಿಕ ತಾಣ’ವಾಗಿ ಘೋಷಿಸುವಂತೆ ಪರಿಸರ ಕಾರ್ಯಕರ್ತರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ಇದೇ ಮಾದರಿಯಲ್ಲಿ ಹಳ್ಳಿಗಳಲ್ಲಿರುವ ‘ಗುಂಡುತೋಪು’ಗಳನ್ನೂ ‘ಪಾರಂಪರಿಕ ತಾಣ’ಗಳನ್ನಾಗಿ ಘೋಷಿಸಬೇಕಿದೆ. ಇದರಿಂದ ಪರಿಸರ ಸಂರಕ್ಷಣೆಯ ಜೊತೆಗೆ ಗ್ರಾಮೀಣ ಪರಂಪರೆಯೂ ಉಳಿಯಲಿದೆ.

ಅಭಿವೃದ್ಧಿ ಹೆಸರಿನಲ್ಲಿ ಗುಂಡುತೋಪು, ಹುಲ್ಲುಗಾವಲು, ಗ್ರಾಮಾರಣ್ಯ, ಕೆರೆ-ಕುಂಟೆಗಳ ಜೊತೆಗೆ ಜಲಮೂಲಗಳು ನಾಶವಾಗುತ್ತಿವೆ. ಇದರಿಂದಾಗಿ ಜೀವ ವೈವಿಧ್ಯಕ್ಕೆ ಧಕ್ಕೆ ಉಂಟಾಗಿದೆ. ಸರ್ಕಾರಿ ಹಾಗೂ ಖಾಸಗಿ ಜಮೀನುಗಳಲ್ಲಿ ಸಣ್ಣ ಅರಣ್ಯಗಳ ಅಭಿವೃದ್ಧಿಗೂ ಒತ್ತು ನೀಡಿದರೆ ಜೀವಿವೈವಿಧ್ಯ ಉಳಿಯಲಿದೆ.

ಜಿ. ಬೈರೇಗೌಡ, ನೆಲಮಂಗಲ

ಜಾತೀಯತೆ ನಿರ್ಮೂಲನೆಯಾಗಲಿ

ಕೇಂದ್ರ ಸರ್ಕಾರವು ಜನಗಣತಿಯ ಜೊತೆಗೆ ಜಾತಿ ಜನಗಣತಿ ನಡೆಸುವುದಾಗಿ ಹೇಳಿದೆ. ರಾಜ್ಯದಲ್ಲಿ ಹತ್ತು ವರ್ಷಗಳ ಹಿಂದೆ ನಡೆದಿದ್ದ ಜಾತಿ ಜನಗಣತಿ ವರದಿಯು (ಆರ್ಥಿಕ, ಸಾಮಾಜಿಕ ಸಮೀಕ್ಷೆ) ಮಾನ್ಯತೆ ಕಳೆದುಕೊಂಡಿದೆ. ಹೊಸದಾಗಿ ಜಾತಿ ಜನಗಣತಿ ನಡೆಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿದೆ. ಈಗಿನ ಬಹುತೇಕ ಜನನಾಯಕರು ಜಾತೀಯತೆ ವಿರುದ್ಧ ಉದ್ದುದ್ದ ಭಾಷಣ ಮಾಡುತ್ತಲೇ ಬಂದಿದ್ದಾರೆ. ಆದರೆ, ಜಾತೀಯತೆ ನಿರ್ಮೂಲನೆಯಾಗಿಲ್ಲ. ಸಂವಿಧಾನವು ಸಾಮಾಜಿಕವಾಗಿ ಹಿಂದುಳಿದ ಜಾತಿಗಳ ಶ್ರೇಯೋಭಿವೃದ್ಧಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದೆ ಎಂಬುದು ನಿಜ. ಆದರೆ, ಇದು ಜಾರಿಗೊಂಡು ಹಲವು ದಶಕಗಳೇ ಉರುಳಿದರೂ ಇನ್ನೂ ಮೀಸಲಾತಿಗಾಗಿ ಪೈಪೋಟಿ ನಡೆಯುತ್ತಿರುವುದು ದುರಂತ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ವೈಫಲ್ಯಗಳ ಬಗ್ಗೆ ಮೌನ

ನರೇಂದ್ರ ಮೋದಿ ಅವರ ಹನ್ನೊಂದು ವರ್ಷಗಳ ಆಡಳಿತ ಕುರಿತು ಅವರ ಪಕ್ಷದ ಮುಖಂಡರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಇದು ಅವರಿಗೆ ಕರಗತವಾಗಿರುವ ವಿಷಯ. ದೇಶದಲ್ಲಿ ಎಲ್ಲವೂ ಸರಿ ಇರಲಿಲ್ಲ. ಈಗ ಎಲ್ಲವನ್ನೂ ಸರಿಪಡಿಸಲಾಗಿದೆ ಎಂಬ ಸಂಕಥನದ ಸುಳಿಗೆ ಬಹಳಷ್ಟು ಜನ ಸಿಲುಕಿ ಕೊಚ್ಚಿಹೋಗಿದ್ದಾರೆ. ವೈಫಲ್ಯಗಳ ಬಗ್ಗೆ ಮಾತಿಲ್ಲ...

ರೋಹಿತ್ ಸಿಂಹ, ಎಂಜಿನಿಯರ್
‘ಎಕ್ಸ್’ನಿಂದ

ಕಿಡಿನುಡಿ

ಅರಮನೆಗೆ ಸೀಮಿತವಾಗಿದ್ದ ಕಲೆ, ಸಾಹಿತ್ಯ, ಸಂಗೀತವನ್ನು ಜನರ ಬಳಿಗೆ ತಂದವರು ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್. ಕನ್ನಡ ಸಾಹಿತ್ಯ ಪರಿಷತ್ತಿಗೆ ಸ್ವಾಯತ್ತತೆ ನೀಡಿ ಪ್ರೋತ್ಸಾಹಿಸಿದ್ದರು. ಸಾಹಿತ್ಯ ಪರಿಷತ್ತನ್ನು ಎಂದಿಗೂ ಅರಮನೆಯ ತಮಟೆಯಾಗಿ ಬಳಸಿಕೊಳ್ಳಲಿಲ್ಲ. ಅವರ ಆಶಯಗಳಿಗೆ ವಿರುದ್ಧವಾಗಿ ಮಹೇಶ್ ಜೋಶಿ (ಕಸಾಪ ಅಧ್ಯಕ್ಷ) ನಡೆದುಕೊಳ್ಳುತ್ತಿದ್ದಾರೆ.

ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

25 ವರ್ಷಗಳ ಹಿಂದೆ

ಭಾನುವಾರ, 18-6-2000

• ಬಿಹಾರ: ರಣವೀರ ಸೇನೆಯಿಂದ 40 ಜನರ ಮಾರಣಹೋಮ

ಮಿಯಾಪುರ (ಔರಂಗಾಬಾದ್), ಜೂನ್ 17– ಪ್ರಬಲ ಜಾತಿಯ ಭೂಮಾಲೀಕರ ನಿಷೇಧಿತ ರಣವೀರ ಸೇನೆಯು ಮಿಯಾಪುರ ಕುಗ್ರಾಮದ 40 ಮಂದಿ ಯಾದವರು ಮತ್ತು ದಲಿತರ ಹತ್ಯಾಕಾಂಡ ನಡೆಸಿದ ಮತ್ತೊಂದು ಭೀಕರ ಘಟನೆ ನಡೆದಿದೆ.

ಶುಕ್ರವಾರ ರಾತ್ರಿ 11 ಗಂಟೆಗೆ ಯಾದವರು ಮತ್ತು ದಲಿತರ ಮನೆಗಳ ಮೇಲೆ ರಣವೀರ ಸೇನೆ ಗುಂಡಿನ ದಾಳಿ ನಡೆಸಿತು.

• ಅವಳಿನಗರದಲ್ಲಿ ‘ಸರ್ಕಿಟ್ ಬೆಂಚ್’

ಬೆಂಗಳೂರು, ಜೂನ್ 17– ಉತ್ತರ ಕರ್ನಾಟಕದಲ್ಲಿ ಹೈಕೋರ್ಟಿನ ಪೀಠ ಸ್ಥಾಪನೆಯಾಗುವವರೆಗೆ ಬೆಳಗಾವಿ ವಿಭಾಗದ ಏಳು ಜಿಲ್ಲೆಗಳ ಪ್ರಕರಣಗಳನ್ನು ಇತ್ಯರ್ಥಪಡಿಸಲು ಹೈಕೋರ್ಟಿನ ಕನಿಷ್ಠ ಐದು ಮಂದಿ ನ್ಯಾಯಮೂರ್ತಿಗಳನ್ನು ಒಳಗೊಂಡ ‘ಸರ್ಕಿಟ್ ಬೆಂಚ್’ ಅನ್ನು ಹುಬ್ಬಳ್ಳಿ– ಧಾರವಾಡದಲ್ಲಿ ಸ್ಥಾಪಿಸುವಂತೆ ಇಂದು ಸಚಿವ ಸಂಪುಟ ಸಭೆಯು ಹೈಕೋರ್ಟಿಗೆ ಮನವಿ ಮಾಡಲು ನಿರ್ಧರಿಸಿತು.

75 ವರ್ಷಗಳ ಹಿಂದೆ

ಭಾನುವಾರ, 18-6-1950

• ರಾಷ್ಟ್ರೀಯತೆ ಸಾಮಾಜಿಕ ಪರಿವರ್ತನೆಯ ನಿಕಟ ಒಡನಾಡಿ

ಸಿಂಗಪುರ, ಜೂನ್ 17– ‘ನೆಲಸು ನಾಡಿನ ಪದ್ಧತಿಯಿಂದು ತೀರಾ ಬಿಗಿ ತಪ್ಪಿದೆ. ಕೊನೆಗೆ ಈ ಪದ್ಧತಿಯ ನಾಮಾವಶೇಷವಾಗುವುದರಲ್ಲಿ ಸಂಶಯವಿಲ್ಲ. ಸಾಮಾಜಿಕ ಪರಿವರ್ತನೆಯೊಡನೆ ಹೊಂದಿಕೊಂಡು ಬಂದಿರುವ ಮಹತ್ತರ ಶಕ್ತಿಯೆಂದರೆ ರಾಷ್ಟ್ರೀಯತೆಯ ಮಹಾಶಕ್ತಿ. ಕಮ್ಯುನಿಸಂ ರಾಷ್ಟ್ರೀಯತೆಯಿಂದ ಪೂರ್ಣ ಪ್ರತ್ಯೇಕವಾದುದಲ್ಲದೆ ರಾಷ್ಟ್ರೀಯತೆಯನ್ನೂ ವಿರೋಧಿಸಿದುದರಿಂದ ಅದು ಬಲಗುಂದಬೇಕಾಯಿತು’ ಎಂಬುದಾಗಿ ಪಂಡಿತ ನೆಹರೂ ಅವರು, ಸಿಂಗಪುರದ ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ತಿಳಿಸಿದರು.

ಚುರುಮುರಿ

ಬೆಂಗಳೂರು ಸಾಮ್ರಾಜ್ಯ

• ಮಣ್ಣೆ ರಾಜು

‘ಬೆಂಗಳೂರು ಸಾಮ್ರಾಜ್ಯ ಇನ್ನಷ್ಟು ವಿಸ್ತರಣೆ ಆಗುತ್ತೇನ್ರೀ?’ ಸುಮಿ ಕೇಳಿದಳು.

‘ರಾಮನಗರ ಜಿಲ್ಲೆಯು ಬೆಂಗಳೂರು ದಕ್ಷಿಣ ಜಿಲ್ಲೆಯಾಗಿದೆ. ತುಮಕೂರು ಜಿಲ್ಲೆಯನ್ನು ಬೆಂಗಳೂರು ಉತ್ತರ ಜಿಲ್ಲೆಯೆಂದು ಹೆಸರು ಬದಲಾಯಿಸ್ತಾರಂತೆ’ ಅಂದ ಶಂಕ್ರಿ.

ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರನ್ನು ಬೆಂಗಳೂರು ಹೆಸರಿನ ಜಿಲ್ಲೆ ಎಂದು ಮರುನಾಮಕರಣ ಮಾಡೋದಿಲ್ವಾ?’

‘ಬೆಂಗಳೂರು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಈಶಾನ್ಯ, ಆಗ್ನೇಯ, ನೈರುತ್ಯ, ವಾಯವ್ಯ ಅಂತ ಸರ್ವ ದಿಕ್ಕಿನಲ್ಲೂ ಬೆಂಗಳೂರು ಹೆಸರು ಬೆಳೆಸಬಹುದು’.

‘ಇರುವ ಎಂಟು ದಿಕ್ಕನ್ನು ಎಂಟು ಜಿಲ್ಲೆಗೆ ಇಟ್ಟರೆ ಉಳಿದ ಜಿಲ್ಲೆಗಳ ಪಾಡೇನು?

‘ಉಳಿದ ಜಿಲ್ಲೆಗಳ ಹೆಸರನ್ನು ಬೆಂಗಳೂರು 1, 2, 3, 4... ಎಂದು ಬದಲಾಯಿಸಿದರಾಯ್ತು’.

‘ಹಿಂದೆ ರಾಜಮಹಾರಾಜರು ಯುದ್ಧದಲ್ಲಿ ಸೋತ ರಾಜ್ಯಗಳನ್ನು ವಶಪಡಿಸಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಳ್ಳುತ್ತಿದ್ದರಲ್ಲ, ಹಾಗೆ ಅಕ್ಕಪಕ್ಕದ ಜಿಲ್ಲೆಗಳನ್ನು ಬೆಂಗಳೂರು ಆಕ್ರಮಿಸಿಕೊಂಡು ಬ್ರಾಡ್ ಬೆಂಗಳೂರು ಆಗುತ್ತದೆ’.

‘ಇದರ ಬದಲು ರಾಜ್ಯವನ್ನೇ ಬೆಂಗಳೂರು ಸಾಮ್ರಾಜ್ಯವೆಂದು ಹೆಸರು ಬದಲಾಯಿಸಿಬಿಡಬೇಕು’.

‘ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು, ಹೃದಯವಾಯಿತು ಬೆಂಗಳೂರು ನಾಡು...’ ಎಂದು ಹಾಡಬಹುದು.

‘ವಿದೇಶಿ ಮಟ್ಟದಲ್ಲಿ ಹೇಳಹೆಸರಿಲ್ಲದ ಜಿಲ್ಲೆಗಳಿಗೆ ಬೆಂಗಳೂರು ಲೇಬಲ್ ಅಂಟಿಸಿದರೆ ಕಿಮ್ಮತ್ತು ಬರುವುದಂತೆ. ವಿದೇಶಿ ಉದ್ದಿಮೆದಾರರು ಬಂಡವಾಳ ಹೂಡಿ ಅಭಿವೃದ್ಧಿಗೆ ನೆರವಾದರೆ ಬಡ ಜಿಲ್ಲೆಗಳ ಅಭ್ಯುದಯವಾಗುವುದಂತೆ’.

‘ಹೆಸರು ಬದಲಾಯಿಸಿದರೆ ಜಿಲ್ಲೆಗಳ ಅಸ್ಮಿತೆ ನಾಶ ಮಾಡಿದಂತಾಗುವುದಿಲ್ಲವೆ?’

‘ಯಾವುದು ನಾಶವಾಗುತ್ತದೆ ಎನ್ನುವುದಕ್ಕಿಂಥಾ ಎಷ್ಟು ಲಾಭ ಆಗುತ್ತದೆ ಎನ್ನುವುದು ಕೆಲವರಿಗೆ ಮುಖ್ಯ...’ ಎಂದ ಶಂಕ್ರಿ.

ಸಂಗತ

ರಾಜ್ಯದ ಜಾತಿ ಜನಗಣತಿ ಹಳಿ ತಪ್ಪಿದ್ದೆಲ್ಲಿ?

ಪ್ರಬಲ ಜಾತಿಗಳ ಅಪಸ್ವರ ಪಕ್ಕಕ್ಕಿಟ್ಟು ನೋಡಿದರೂ ಜಾತಿ ಜನಗಣತಿ ವರದಿಯಲ್ಲಿ ಇರುವ ಅಹಿಂದ ಸಮುದಾಯಗಳ ದತ್ತಾಂಶಗಳೂ ವಿಶ್ವಾಸಾರ್ಹತೆ ಹುಟ್ಟಿಸುವಂತಿಲ್ಲ...

• ವಾದಿರಾಜ್

ಜನಗಣತಿಯೊಂದಿಗೆ ಜಾತಿ ಜನಗಣತಿಯನ್ನೂ ಮಾಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದಾಗ, ‘ತೆಲಂಗಾಣದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಮಾಡಿರುವಂತಹ ಜಾತಿ ಜನಗಣತಿಯ ಮಾದರಿಯನ್ನು ಕೇಂದ್ರವೂ ಅನುಸರಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆಗ್ರಹಿಸಿದ್ದರು. ಅವರು ಕರ್ನಾಟಕದ ಜಾತಿ ಜನಗಣತಿ ಮಾದರಿಯನ್ನೇಕೆ ಉಲ್ಲೇಖಿಸಲಿಲ್ಲ ಎಂಬ ಪ್ರಶ್ನೆಗೆ ಈಗ ಉತ್ತರ ಸಿಕ್ಕಿದೆ.

ಕರ್ನಾಟಕದ ಜಾತಿ ಜನಗಣತಿಯನ್ನು ಕಾಂಗ್ರೆಸ್ ಹೈಕಮಾಂಡ್ ತಿರಸ್ಕರಿಸಿದೆ. ಜಾತಿ ಜನಗಣತಿಯನ್ನು ಹೊಸದಾಗಿ ಮಾಡಲು ರಾಜ್ಯ ನಾಯಕತ್ವಕ್ಕೆ ನಿರ್ದೇಶಿಸಿದೆ. ಜಾತಿ ಜನಗಣತಿ ನಡೆದು ಹತ್ತು ವರ್ಷ ಆಗಿರುವುದರಿಂದ, ಹಿಂದುಳಿದ ವರ್ಗಗಳ ಆಯೋಗದ 1995ರ ಕಾಯ್ದೆಯ ಸೆಕ್ಷನ್ 11(2)ರ ಅನ್ವಯ ಇನ್ನೊಮ್ಮೆ ಗಣತಿ ಮಾಡಬೇಕಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ಕೊಟ್ಟಿದ್ದಾರೆ.

2013ರಲ್ಲಿ ಮೊದಲ ಸಲ ಮುಖ್ಯಮಂತ್ರಿಯಾದಾಗಲೇ ಜಾತಿ ಜನಗಣತಿ ನಡೆಸುವುದಾಗಿ ಹೇಳಿದ್ದರು. 2014ರ ಜನವರಿ 23ರಂದು ಜಾತಿ ಜನಗಣತಿಗೆ ಸರ್ಕಾರ ಆದೇಶಿಸಿ, ಬಜೆಟ್‌ನಲ್ಲಿ ಹಣ ತೆಗೆದಿರಿಸಿತು. ಆದರೆ, ವಾಸ್ತವದಲ್ಲಿ ಜಾತಿ ಜನಗಣತಿಯ ಸಮೀಕ್ಷೆ ನಡೆದದ್ದು 2015ರ ಏಪ್ರಿಲ್ 11ರಿಂದ ಮೇ 30ರವರೆಗೆ. ಸಮೀಕ್ಷೆ ಆರಂಭಿಸುವುದಕ್ಕೇ ಕಾಂತರಾಜ ಆಯೋಗಕ್ಕೆ 15 ತಿಂಗಳು ಹಿಡಿಯಿತು. ಸಮೀಕ್ಷೆಯ ವರದಿ ಸಿದ್ಧಪಡಿಸಲು ಮೂರು ವರ್ಷಗಳಾದರೂ ಸಾಧ್ಯವಾಗಲಿಲ್ಲ. ಏಕೆ ಈ ವಿಳಂಬ?

ಎಲ್.ಜಿ. ಹಾವನೂರು ವರದಿ ಸಿದ್ಧಗೊಂಡಿದ್ದು ತಂತ್ರಜ್ಞಾನದ ನೆರವಿಲ್ಲದ ಕಾಲದಲ್ಲಿ. 1972ರ ಆಗಸ್ಟ್ 8ರಂದು ರಚನೆಗೊಂಡ ಹಾವನೂರು ಆಯೋಗವು 1975ರ ನವೆಂಬರ್ 19ರಂದು ವರದಿ ಸಲ್ಲಿಸಿತು. ಅದರಲ್ಲಿ, ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರ ಮುತುವರ್ಜಿ, ಕಾರ್ಯಕ್ಷಮತೆ ಸ್ಪಷ್ಟವಾಗಿದೆ. 1980ರ ದಶಕದಲ್ಲಿ ಬಂದ ವೆಂಕಟಸ್ವಾಮಿ ಮತ್ತು ಚಿನ್ನಪ್ಪ ರೆಡ್ಡಿ ಆಯೋಗಗಳೂ ಮೂರು ವರ್ಷದೊಳಗೆ ವರದಿ ಸಲ್ಲಿಸಿವೆ.

ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿ ಸಿದ್ದರಾಮಯ್ಯ ಅವರು ಸದಾಶಿವ ಆಯೋಗದ ವರದಿಯನ್ನೂ ಮುಟ್ಟಲಿಲ್ಲ. ಜಾತಿ ಜನಗಣತಿಯನ್ನೂ ಪೂರೈಸಲಿಲ್ಲ. ಇದರಲ್ಲಿ ಸಾಮಾಜಿಕ ಬದ್ಧತೆಯ ಕೊರತೆ ಕಾಣುವುದಿಲ್ಲವೇ? 2023ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಾಗಲಾದರೂ ಅವರು ಕಾಂತರಾಜ ಆಯೋಗದ ವರದಿಯನ್ನು ಸ್ವೀಕರಿಸಬಹುದಿತ್ತು. ಆದರೆ, ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ಮೊರೆ ಹೋಗಿ, ಅವರಿಗೆ ಒಂದು ವರ್ಷ ಅವಧಿ ವಿಸ್ತರಣೆ ಕೊಡಿಸಿದರು. ಕಾಂತರಾಜ ಆಯೋಗದ ವರದಿಯ ದತ್ತಾಂಶಗಳ ಅಧ್ಯಯನ ನಡೆಸಿ ಜಯಪ್ರಕಾಶ್ ಹೆಗ್ಡೆ 2024ರ ಫೆಬ್ರುವರಿಯಲ್ಲಿ ವರದಿ ಕೊಟ್ಟರು. ಸಿದ್ದರಾಮಯ್ಯನವರೇ ಹೇಳುವಂತೆ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದ ಪುಟ್ಟರಂಗ ಶೆಟ್ಟಿ ನೇತೃತ್ವದಲ್ಲಿ ಕಾಂತರಾಜ ಆಯೋಗವು 2018ರಲ್ಲೇ ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ವರದಿ ಸಲ್ಲಿಸಲು ಪ್ರಯತ್ನಿಸಿದೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ರಿಪೇರಿ ಕೆಲಸ ಕೊಟ್ಟಾಗ ಪೂರ್ತಿ ಕೆಲಸ ಮುಗಿಸಿದ್ದ ಕಾಂತರಾಜ ಅವರು ಸಣ್ಣ ತಕರಾರೂ ತೆಗೆಯಲಿಲ್ಲ, ಏಕೆ? ಜಯಪ್ರಕಾಶ್ ಹೆಗ್ಡೆ ಕೊಟ್ಟ ವರದಿ, 14 ತಿಂಗಳ ತರುವಾಯ ಸಚಿವ ಸಂಪುಟದ ಎದುರು ಬಂದರೂ ಏನೂ ಆಗಲಿಲ್ಲ. ವರದಿಯ ದತ್ತಾಂಶಗಳು ಸಂಪುಟದ ಮುಂದೆ ಬರುವಾಗಲೇ ತಾಂತ್ರಿಕವಾಗಿ ಹತ್ತು ವರ್ಷ ಮುಗಿದು ಹೋಗಿತ್ತು. ಆಡಳಿತಾತ್ಮಕವಾದ ಹೊಣೆಗೇಡಿತನಕ್ಕೆ ₹165.51 ಕೋಟಿ ಅಪವ್ಯಯವಾಗಿದೆ.

ಪ್ರಬಲ ಜಾತಿಗಳ ಅಪಸ್ವರ ಪಕ್ಕಕ್ಕಿಟ್ಟು ನೋಡಿದರೂ ಜಯಪ್ರಕಾಶ್ ಹೆಗ್ಡೆ ವರದಿಯಲ್ಲಿರುವ ಅಹಿಂದ ಸಮುದಾಯಗಳ ದತ್ತಾಂಶಗಳೂ ವಿಶ್ವಾಸಾರ್ಹತೆ ಹುಟ್ಟಿಸುವಂತಿಲ್ಲ. 2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಗಳ ಜನಸಂಖ್ಯೆ 1.04 ಕೋಟಿಯಿತ್ತು. ಅದು, ಜಾತಿ ಜನಗಣತಿಯಲ್ಲಿ ಐದು ಲಕ್ಷದಷ್ಟು ಏರಿಕೆಯಾಗಿದೆ. ಅದೇ ಪರಿಶಿಷ್ಟ ಪಂಗಡಗಳಲ್ಲಿ ಏರಿಕೆಯಾಗಿರುವುದು 33 ಸಾವಿರ ಮಾತ್ರ. ಮುಸ್ಲಿಂ ಸಮುದಾಯದಲ್ಲಿ 99 ಜಾತಿಗಳಿವೆ ಎಂದು ಆಯೋಗ ಹೇಳಿದೆ. ಆದರೆ, ‘ಪ್ರವರ್ಗ 1’ ಮತ್ತು ‘2ಎ’ನಲ್ಲಿ ಬರುವ 19 ಮುಸ್ಲಿಂ ಜಾತಿಗಳ ಗಣತಿ ನಡೆದಿದೆ. ರಾಜ್ಯದಲ್ಲಿ ಮುಸ್ಲಿಂ ಸಮುದಾಯವು ಪ್ರವರ್ಗ ‘2ಬಿ’ ಪಟ್ಟಿಯಲ್ಲಿದ್ದು, ಅಲ್ಲಿರುವ 80 ಜಾತಿಗಳನ್ನೂ ಮುಸ್ಲಿಂ ಎಂದೇ ಗುರುತಿಸಲಾಗಿದೆ.

2001ರ ಜನಗಣತಿಯಲ್ಲಿ ರಾಜ್ಯದ ಮುಸ್ಲಿಂ ಸಮುದಾಯದ ಜನಸಂಖ್ಯೆ 64.63 ಲಕ್ಷ ಇದ್ದದ್ದು, 2011ರಲ್ಲಿ 78.93 ಲಕ್ಷಕ್ಕೆ ಏರಿಕೆಯಾಗಿತ್ತು. ಈಗದು 79.48 ಲಕ್ಷ, ಅಂದರೆ 55 ಸಾವಿರ ಮಾತ್ರ ಏರಿಕೆಯಾಗಿದೆ ಎಂದರೆ, ಗಣತಿಯ ವಿಶ್ವಾಸಾರ್ಹತೆ ಉಳಿಯುತ್ತದೆಯೇ? ಮುಸ್ಲಿಂ ಒಳಪಂಗಡ ಪಿಂಜಾರರ ಜನಸಂಖ್ಯೆ ಕನಿಷ್ಠ 20 ಲಕ್ಷ ಎನ್ನುತ್ತಾರೆ ಸಮಾಜದ ಅಧ್ಯಕ್ಷರಾದ ಜಲೀಲ್ ಸಾಬ್. ಆದರೆ, ಜಾತಿ ಜನಗಣತಿ ಪ್ರಕಾರ ಪಿಂಜಾರರ ಸಂಖ್ಯೆ 1.11 ಲಕ್ಷ! ‘ಪ್ರವರ್ಗ 1’ರಲ್ಲಿದ್ದ ಅತಿ ಹಿಂದುಳಿದ ಜಾತಿಗಳಿಗಿದ್ದ ಆರ್ಥಿಕ ಮಾನದಂಡದ ವಿನಾಯಿತಿ ತೆಗೆಯಬೇಕೆಂದು ವರದಿ ಸೂಚಿಸುತ್ತದೆ. ಅದೇ ವರದಿ ‘2ಎ’ನಲ್ಲಿದ್ದ ಪ್ರಮುಖ ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳಾಗಿ ಪರಿವರ್ತಿಸಿ ಅವರಿಗಾಗಿ ‘ಪ್ರವರ್ಗ 1ಬಿ’ ಹುಟ್ಟುಹಾಕಲು ಶಿಫಾರಸು ಮಾಡುತ್ತದೆ. ಇದರಲ್ಲಿ ರಾಜಕಾರಣದ ಹೊಗೆ ಕಾಣಿಸುತ್ತಿದೆ.

ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಆರಂಭಿಸಿರುವ ಗಣತಿ ನಡೆಸಲು ಆಡಳಿತಯಂತ್ರ ಏದುಸಿರು ಬಿಡುತ್ತಿದೆ. ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿಗಣತಿಯನ್ನೂ ಮಾಡುತ್ತಿರುವುದರಿಂದ ಕರ್ನಾಟಕ ಸರ್ಕಾರ ಸುಮ್ಮನಿರುವುದೇ ಜಾಣತನ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂಗವಿಕಲರಿಗೆ ಕನಸಾಗಿಯೇ ಉಳಿದ ಹಕ್ಕುಗಳು

ಅಂಗವಿಕಲರ ಹಕ್ಕುಗಳ ಬಗ್ಗೆ ದೇಶದಲ್ಲಿ ಕಾನೂನುಗಳಿವೆ. ಅವರ ಹಕ್ಕುಗಳ ರಕ್ಷಣೆಯ ಬಗ್ಗೆ ಸುಪ್ರೀಂ ಕೋರ್ಟ್ ಹಲವು ಮಹತ್ವದ ತೀರ್ಪುಗಳನ್ನೂ ನೀಡಿದೆ. ಆದರೆ, ಶಿಕ್ಷಣ, ಮೂಲಸೌಕರ್ಯ ಸೇರಿದಂತೆ ಸಾರ್ವಜನಿಕ ಬದುಕಿನ ಬಹುತೇಕ ಎಲ್ಲ ವಲಯಗಳಲ್ಲೂ ಅಂಗವಿಕಲರು ತಮ್ಮ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಮಹಿಳಾ ಅಂಗವಿಕಲರ ಪರಿಸ್ಥಿತಿಯಂತೂ ದಯನೀಯವಾಗಿದೆ. ಕೇಂದ್ರವು ಅನುದಾನ ನೀಡದಿರುವುದು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಇಚ್ಛಾಶಕ್ತಿಯ ಕೊರತೆಯಿಂದ ಕಾಯ್ದೆ ಸಮರ್ಪಕವಾಗಿ ಜಾರಿಯಾಗಿಲ್ಲ. ನ್ಯಾಯಾಲಯದ ಆದೇಶ, ಕಾಯ್ದೆಯಲ್ಲಿನ ಆಶಯಗಳಿಗೂ ಅಂಗವಿಕಲರ ಪರಿಸ್ಥಿತಿಗೂ ಅಗಾಧವಾದ ಅಂತರವಿದೆ

ಜಾರಿಯಾಗದ ಕಾಯ್ದೆ, ಪಾಲನೆಯಾಗದ ಸುಪ್ರೀಂ ಕೋರ್ಟ್ ಆದೇಶಗಳು

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

2011ರ ಜನಗಣತಿಯ ದತ್ತಾಂಶದ ಪ್ರಕಾರ, ದೇಶದಲ್ಲಿ ಅಂಗವಿಕಲರ ಪ್ರಮಾಣವು ಶೇ 2.21ರಷ್ಟಿದೆ. ಆದರೆ, ವಾಸ್ತವದಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚಿದೆ ಎನ್ನಲಾಗಿದೆ. 2019ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಭಾರತ, ತಜಿಕಿಸ್ತಾನ ಮತ್ತು ಲಾವೋಸ್‌ಗಳಲ್ಲಿ ನಡೆಸಿದ ಅಂಗವಿಕಲರ ಮಾದರಿ ಸಮೀಕ್ಷೆಯ ಪ್ರಕಾರ, ಭಾರತದ ಯುವಜನರಲ್ಲಿ ತೀವ್ರ ಅಂಗವೈಕಲ್ಯದ ಪ್ರಮಾಣವು ಶೇ 16ರಷ್ಟು ಇದೆ. ಅಂಗವಿಕಲರಿಗೆ ಸೂಕ್ತ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಮೊದಲು ಅವರ ನಿಖರ ಜನಸಂಖ್ಯೆ ತಿಳಿಯಬೇಕಿದೆ. ಆದರೆ, ಈವರೆಗೂ ಈ ದಿಸೆಯಲ್ಲಿ ಗಂಭೀರ ಪ್ರಯತ್ನಗಳೇ ನಡೆದಿಲ್ಲ.

ಅಂಗವೈಕಲ್ಯ ಆಧರಿತ ತಾರತಮ್ಯದ ವಿರುದ್ಧದ ರಕ್ಷಣೆಯ ಹಕ್ಕನ್ನು ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಇದೇ ಮಾರ್ಚ್‌ನಲ್ಲಿ ತೀರ್ಪು ನೀಡಿದೆ. ಈ ಮೂಲಕ ಅದು ಅಂಗವಿಕಲ ಹಕ್ಕುಗಳ ಕಾಯ್ದೆ 2016ರ (ಆರ್‌ಪಿಡಬ್ಲ್ಯುಡಿ) ಆಶಯಗಳನ್ನು ಎತ್ತಿಹಿಡಿದಿದೆ. ಆದರೆ, ಸರ್ಕಾರದ ಕಾಯ್ದೆ, ನ್ಯಾಯಾಲಯಗಳ ತೀರ್ಪುಗಳನ್ನು ಜಾರಿಗೊಳಿಸುವ ವಿಚಾರದಲ್ಲಿ ಲೋಪಗಳಾಗಿರುವ ಬಗ್ಗೆ ಹಲವು ಅಧ್ಯಯನಗಳು ಗಮನ ಸೆಳೆಯುತ್ತಿವೆ.

ಸಾಧ್ಯವಾಗದ ಸಮಾನ, ಮುಕ್ತ ಅವಕಾಶ: 2006ರ ವಿಶ್ವಸಂಸ್ಥೆಯ ಅಂಗವಿಕಲರ ಸಮಾವೇಶದ ನಿರ್ಣಯಗಳಿಗನುಸಾರ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಅಂಗವಿಕಲರ ಹಕ್ಕುಗಳ ಕಾಯ್ದೆ 1995ಕ್ಕೆ ತಿದ್ದುಪಡಿ ತರಲಾಗಿತ್ತು. 1995ರ ಕಾಯ್ದೆಯಲ್ಲಿ, ಅಂಗವಿಕಲರಿಗೆ ರಾಜ್ಯದ ಆರ್ಥಿಕ ಸ್ಥಿತಿಯ ಮಿತಿಯೊಳಗೆ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಹೇಳಲಾಗಿತ್ತು. 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯಲ್ಲಿ ಅದಕ್ಕೆ ತಿದ್ದುಪಡಿ ತಂದು, 'ರಾಜ್ಯದ ಆರ್ಥಿಕ ಶಕ್ತಿಯ ಮಿತಿಯೊಳಗೆ' ಎನ್ನುವ ಅಂಶವನ್ನು ತೆಗೆದುಹಾಕಲಾಗಿತ್ತು. ಅಂದರೆ, ಆರ್ಥಿಕ ಸ್ಥಿತಿಯ ಹೊರತಾಗಿಯೂ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಅಂಗವಿಕಲರಿಗೆ ಸಮಾಜದ ಎಲ್ಲ ವಲಯಗಳಲ್ಲೂ– ಸಂಚಾರ, ಕಟ್ಟಡಗಳ ಪ್ರವೇಶ, ಗ್ರಾಹಕ ಸೇವೆ ಸೇರಿದಂತೆ ಸಾಂಸ್ಥಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಸಮಾನ ಮತ್ತು ಮುಕ್ತ ಅವಕಾಶ ನೀಡಬೇಕು. ಅಂಗವಿಕಲರ ಪಾಲ್ಗೊಳ್ಳುವಿಕೆಗೆ ಅಗತ್ಯವಾದ ಮೂಲಸೌಕರ್ಯವನ್ನು ಕಲ್ಪಿಸಲು 2022ರ ಗಡುವನ್ನೂ ನೀಡಲಾಗಿತ್ತು. ಈ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಬೇಕು ಎಂದು ಕಾಯ್ದೆ ಹೇಳಿತ್ತು. ಆದರೆ, ಈ ವಿಚಾರದಲ್ಲಿ ಆದ ಕೆಲಸ ಅತ್ಯಲ್ಪ. ಒಂದು ವರದಿಯ ಪ್ರಕಾರ, ದೇಶದಲ್ಲಿ ಶೇ 3ರಷ್ಟು ಕಟ್ಟಡಗಳು ಮಾತ್ರ ಅಂಗವಿಕಲ ಸ್ನೇಹಿ ಸೌಕರ್ಯಗಳನ್ನು ಹೊಂದಿವೆ. ಬಸ್, ರೈಲು ಮತ್ತು ಇತರ ಸಂಚಾರ ವ್ಯವಸ್ಥೆಗಳಲ್ಲಿ ಅಂಗವಿಕಲರಿಗಾಗಿ ಸೌಲಭ್ಯ ಕಲ್ಪಿಸಿದ ಅಂಕಿಅಂಶಗಳೇ ಲಭ್ಯವಿಲ್ಲ.

ಅಂಗವಿಕಲರ ಕಾಯ್ದೆ 2016ರ ಜಾರಿಯು ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತಗಳ ಜವಾಬ್ದಾರಿಯಾಗಿದೆ. ಆದರೆ, ಬಹುತೇಕ ರಾಜ್ಯ ಸರ್ಕಾರಗಳು ಇಚ್ಛಾಶಕ್ತಿ ಮತ್ತು ಹಣಕಾಸಿನ ಕೊರತೆಯಿಂದಾಗಿ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡಿಲ್ಲ. 2018ರವರೆಗೆ, ಮೂರನೇ ಒಂದರಷ್ಟು ರಾಜ್ಯಗಳು ಮಾತ್ರ ಕಾಯ್ದೆ ಜಾರಿಗೆ ಅಧಿಸೂಚನೆ ಹೊರಡಿಸಿದ್ದವು. ನಂತರ ಕೆಲವು ರಾಜ್ಯಗಳಲ್ಲಿ ನೆಪಮಾತ್ರಕ್ಕೆ ಅಧಿಸೂಚನೆ ಹೊರಡಿಸಲಾಗಿದೆ.

ಕಾಯ್ದೆಯ ಅಸಮರ್ಪಕ ಜಾರಿಗೆ ಕಾರಣಗಳು ಅನೇಕ. ಕಾಯ್ದೆ ಜಾರಿಯ ಜವಾಬ್ದಾರಿಯನ್ನು ರಾಜ್ಯಗಳಿಗೆ ವರ್ಗಾಯಿಸಿರುವ ಕೇಂದ್ರ ಸರ್ಕಾರವು ಅದಕ್ಕೆ ಅಗತ್ಯವಾದ ಸಂಪನ್ಮೂಲವನ್ನು ಒದಗಿಸುತ್ತಿಲ್ಲ ಎನ್ನುವ ಆರೋಪವಿದೆ. ಇದೇ ಕಾರಣಕ್ಕೆ ರಾಜ್ಯ ಸರ್ಕಾರಗಳು ಸ್ಥಳೀಯ ಆಡಳಿತಗಳಿಗೆ ಸೂಕ್ತ ಅನುದಾನ ನೀಡುತ್ತಿಲ್ಲ. ಅಂಗವಿಕಲರ ಕಾಯ್ದೆ ಜಾರಿ ಸಂಬಂಧ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಣಕಾಸು ಹಂಚಿಕೆಯ ಸೂತ್ರವೇ ಸಿದ್ಧವಾಗಿಲ್ಲ.

ಕೇಂದ್ರದ ಅನುದಾನದಲ್ಲಿ ಕುಸಿತ: ಕೇಂದ್ರ ಸರ್ಕಾರವು ಕಾಯ್ದೆ ಜಾರಿಗೆ 2022–23ರಲ್ಲಿ ₹240.39 ಕೋಟಿ ಮೀಸಲಿಟ್ಟರೆ, 2023-24ರಲ್ಲಿ ಅದರ ಪ್ರಮಾಣ ₹150 ಕೋಟಿಗೆ ಇಳಿಯಿತು (ಶೇ 37.5ರಷ್ಟು ಕಡಿಮೆ). ಇದರಲ್ಲಿ 2024–25ನೇ ಸಾಲಿನಲ್ಲಿ ಮತ್ತೆ ಶೇ 9.78ರಷ್ಟು (₹135 ಕೋಟಿ) ಕಡಿಮೆ ಮಾಡಲಾಗಿದೆ. ಕೇಂದ್ರದ ಬಜೆಟ್‌ನಲ್ಲಿ ಅಂಗವಿಕಲರಿಗಾಗಿ ಶೇ 5ರಷ್ಟು ಹಣ ಮೀಸಲಿಡಬೇಕು ಎನ್ನುವ ಒತ್ತಾಯ ಕೇಳಿಬರುತ್ತಿದ್ದರೂ ಶೇ 0.025ರಷ್ಟು ಮಾತ್ರ ಮೀಸಲಿಡುತ್ತಿದೆ ಎನ್ನುವ ಆಕ್ಷೇಪಣೆಗಳು ಕೇಳಿಬಂದಿವೆ.

ಅಂಗವಿಕಲರ ಶಿಕ್ಷಣ ಸ್ಥಿತಿಗತಿ ದಾರುಣವಾಗಿದೆ. 2011ರ ಜನಗಣತಿಯ ಪ್ರಕಾರ, ದೇಶದಲ್ಲಿ 21.3 ಲಕ್ಷ ಮಕ್ಕಳು ಅಂಗವಿಕಲರಿದ್ದು, ಅವರಲ್ಲಿ ಶೇ 28ರಷ್ಟು ಮಂದಿ ಶಾಲೆಯಿಂದ ಹೊರಗಿದ್ದರು. 2018ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಪ್ರಕಾರ, ಶೇ 48ರಷ್ಟು ಅಂಗವಿಕಲರು ಅನಕ್ಷರಸ್ಥರು. ಅವರಲ್ಲಿ ಬಹುತೇಕರು ಪ್ರಾಥಮಿಕ ಹಂತದಲ್ಲಿಯೇ ಶಾಲೆ ತೊರೆಯುತ್ತಾರೆ. ಪ್ರೌಢಶಾಲೆ ಉತ್ತೀರ್ಣರಾದವರು ಶೇ 9ರಷ್ಟು ಮಾತ್ರ.

ಮಹಿಳೆಯರ ದಾರುಣ ಸ್ಥಿತಿ: ಅಂಗವಿಕಲರಲ್ಲಿ ಪುರುಷರಿಗಿಂತಲೂ ಮಹಿಳೆಯರು ಹೆಚ್ಚು ಶೋಷಣೆಗೆ ಗುರಿಯಾಗುತ್ತಿದ್ದಾರೆ. ನಿದರ್ಶನಕ್ಕೆ, ಅಂಗವೈಕಲ್ಯ ಹೊಂದಿರುವ ಮಹಿಳೆಯರು ಹೆಚ್ಚು ಕೌಟುಂಬಿಕ ಹಿಂಸೆಗೆ ಒಳಗಾಗುತ್ತಾರೆ. 2018ರ ವಿಶ್ವಬ್ಯಾಂಕ್ ಅಧ್ಯಯನದ ಪ್ರಕಾರ, ಅಂಗವೈಕಲ್ಯ ಹೊಂದಿರುವ ಮಹಿಳೆಯರು ಇತರೆ ಮಹಿಳೆಯರಿಗಿಂತ ಹೆಚ್ಚು ಶೋಷಣೆ/ಅತ್ಯಾಚಾರಗಳಿಗೆ ಬಲಿಯಾಗುತ್ತಿದ್ದಾರೆ. ಅನೇಕ ಮಹಿಳಾ ಅಂಗವಿಕಲರನ್ನು ಬಲವಂತವಾಗಿ ಸಂತಾನಶಕ್ತಿಹರಣ ಶಸ್ತ್ರಕ್ರಿಯೆಗಳಿಗೆ ಒಳಪಡಿಸಲಾಗುತ್ತಿದೆ. ಆದರೆ, ಕಾನೂನು ಮತ್ತು ನೀತಿ ನಿಯಮಗಳನ್ನು ರೂಪಿಸುವಾಗ ಈ ಲಿಂಗ ಸೂಕ್ಷ್ಮವನ್ನು ಯಾರೂ ಪರಿಗಣಿಸುತ್ತಿಲ್ಲ ಎನ್ನುವ ಆರೋಪ ವ್ಯಕ್ತವಾಗಿದೆ.

ಅಂಗವಿಕಲರ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ ಆಗಬೇಕಿರುವ ಕೆಲಸಗಳು ಅಗಾಧವಾಗಿವೆ. ಅಂಗವೈಕಲ್ಯದ ವ್ಯಾಖ್ಯಾನ ಬದಲಾಗಬೇಕಿದೆ, ಅವರೆಡೆಗಿನ ಜನರ ದೃಷ್ಟಿಕೋನ ಬದಲಾಗಬೇಕಿದೆ. ಮುಖ್ಯವಾಗಿ, ಶಿಕ್ಷಣ, ಮೂಲಸೌಕರ್ಯಗಳ ನಿರ್ಮಾಣ, ಸವಲತ್ತುಗಳನ್ನು ಒದಗಿಸುವುದು ಸೇರಿದಂತೆ ಇಡೀ ಸಾರ್ವಜನಿಕ ವ್ಯವಸ್ಥೆಯನ್ನೇ ಅಂಗವಿಕಲರ ದೃಷ್ಟಿಯಿಂದ ಪುನರ್ ರೂಪಿಸಬೇಕಿದೆ ಎನ್ನುವ ಒತ್ತಾಯ ಕೇಳಿಬಂದಿದೆ. ಈ ದಿಸೆಯಲ್ಲಿ ನ್ಯಾಯಾಲಯದ ಆದೇಶ ಪಾಲನೆ ಮತ್ತು 2016ರ ಕಾಯ್ದೆ ಜಾರಿ ಅತ್ಯಂತ ಅಗತ್ಯವಾಗಿದೆ.

ಆಧಾರ: ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್, ಡಿಸೇಬಿಲಿಟಿರೈಟ್ಸ್‌ಇಂಡಿಯಾ.ಕಾಮ್, ಮಾಧ್ಯಮ ವರದಿಗಳು

ಅಂಗವಿಕಲಸ್ನೇಹಿ ಪಾದಚಾರಿ ಮಾರ್ಗಗಳನ್ನು ಹೊಂದುವ ಹಕ್ಕು ಸಂವಿಧಾನದ 21ನೇ ವಿಧಿ ಅನುಸಾರ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಈ ವರ್ಷದ ಮೇ 14ರಂದು ನೀಡಿದ್ದ ತೀರ್ಪಿನಲ್ಲಿ ಹೇಳಿತ್ತು

ಅಂಗವಿಕಲರಿಗೂ ಡಿಜಿಟಲ್ ಕೆವೈಸಿ ಸೌಲಭ್ಯ ಸಿಗುವಂತೆ ಮಾಡಬೇಕು ಎಂದು ಈ ವರ್ಷದ ಏಪ್ರಿಲ್ 25ರಂದು ಅಭಿಪ್ರಾಯಪಟ್ಟಿದ್ದ ಸುಪ್ರೀಂ ಕೋರ್ಟ್, ಅದು ಸಂವಿಧಾನದ 21ನೇ ವಿಧಿಯಲ್ಲಿ ಬರುವ ಮೂಲಭೂತ ಹಕ್ಕಿನ ಭಾಗ ಎಂದು ಅಭಿಪ್ರಾಯಪಟ್ಟಿತ್ತು



'ಸುಪ್ರೀಂ' ಪ್ರಮುಖ ತೀರ್ಪುಗಳು

ನ್ಯಾಯಾಂಗ ಸೇವೆಗಳಿಗೆ ಮರು ನೇಮಕ ಮತ್ತು ಮಧ್ಯಪ್ರದೇಶದ ರಿಜಿಸ್ಟ್ರಾರ್ ಜನರಲ್ ನಡುವಿನ ಪ್ರಕರಣ, 2025: ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ನ್ಯಾಯಾಂಗ ಸೇವಾ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಅಂಗವಿಕಲ ಅಭ್ಯರ್ಥಿಗಳನ್ನು ಕೈಬಿಟ್ಟಿರುವ ಪ್ರಕರಣದಲ್ಲಿ ಈ ವರ್ಷದ ಮಾರ್ಚ್ 3ರಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿತ್ತು. ಅಂಗವಿಕಲರ ಉದ್ಯೋಗ ಪಡೆಯುವ ಹಕ್ಕನ್ನು ಸಮರ್ಥಿಸಿಕೊಂಡಿತ್ತು. ಈ ನೇಮಕಾತಿಗೆ ಸಂಬಂಧಿಸಿದ ಹೈಕೋರ್ಟ್ ಆದೇಶಗಳು, ಪರೀಕ್ಷಾ ಅಧಿಸೂಚನೆಗಳನ್ನು ವಜಾಗೊಳಿಸಿತ್ತು.

ಸೀಮಾ ಗಿರಿಜಾ ಲಾಲ್ ಮತ್ತು ಕೇಂದ್ರ ಸರ್ಕಾರ ನಡುವಿನ ಪ್ರಕರಣ, 2024: 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು 'ಟುಗೆದರ್ ವಿ ಕ್ಯಾನ್' ಎಂಬ ವೇದಿಕೆಯು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಕಾಯ್ದೆಯ ಅನುಷ್ಠಾನದಲ್ಲಿ ಆಗುತ್ತಿರುವ ಲೋಪಗಳನ್ನು ಎತ್ತಿ ತೋರಿಸಿತ್ತು. ಆಂಧ್ರಪ್ರದೇಶ, ಮಹಾರಾಷ್ಟ್ರದಂತಹ ರಾಜ್ಯಗಳು, ಲಡಾಖ್ ಕೇಂದ್ರಾಡಳಿತ ಪ್ರದೇಶವು ಕಾಯ್ದೆಯ ಸೆಕ್ಷನ್ 101ರ ಅಡಿಯಲ್ಲಿ ನಿಯಮಗಳನ್ನು ರೂಪಿಸಲು ವಿಫಲವಾಗಿವೆ. ದೇಶದ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೆಕ್ಷನ್ 72ರ ಅಡಿಯಲ್ಲಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿಲ್ಲ ಎಂದು ಹೇಳಿತ್ತು. ಈ ಸಮಿತಿಗಳನ್ನು ರಚಿಸುವಂತೆ, ಅಂಗವಿಕಲರಿಗಾಗಿ ವಿಶೇಷ ನ್ಯಾಯಾಲಯಗಳು, ವೈದ್ಯಕೀಯ ಪರಿಶೀಲನಾ ಮಂಡಳಿ, ರಾಜ್ಯ ಅಂಗವೈಕಲ್ಯ ನಿಧಿ ಸ್ಥಾಪನೆ (ಸೆಕ್ಷನ್ 88), ಸ್ವತಂತ್ರ ಆಯುಕ್ತರ ನೇಮಕಾತಿ (ಸೆಕ್ಷನ್ 79) ಮಾಡುವಂತೆ ನ್ಯಾಯಪೀಠ ರಾಜ್ಯಗಳಿಗೆ ಸೂಚಿಸಿತ್ತಲ್ಲದೆ, ಈ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆಯೂ ನಿರ್ದೇಶಿಸಿತ್ತು.

ಓಂಕಾರ್ ರಾಮಚಂದ್ರ ಗೊಂಡ್ ಮತ್ತು ಕೇಂದ್ರ ಸರ್ಕಾರ ನಡುವಿನ ಪ್ರಕರಣ 2024: ಮಾತು ಮತ್ತು ಉಚ್ಚಾರಣೆಯಲ್ಲಿ ಶೇ 44ರಿಂದ 45ರಷ್ಟು ಶಾಶ್ವತ ವೈಕಲ್ಯ ಹೊಂದಿರುವ 2024ರ ನೀಟ್ ಅಭ್ಯರ್ಥಿ ಓಂಕಾರ್ ರಾಮಚಂದ್ರ ಗೊಂಡ್ ಅವರು ವೈದ್ಯಕೀಯ ಕಾಲೇಜು ಪ್ರವೇಶ ಪಡೆಯಲು ಅನರ್ಹರು ಎಂದು ಬಾಂಬೆ ಹೈಕೋರ್ಟ್ ನೀಡಿದ್ದ ಮಧ್ಯಂತರ ತೀರ್ಪಿನ ವಿರುದ್ಧ ಸಲ್ಲಿಸಲಾಗಿದ್ದ ಮೇಲ್ಮನವಿಯ ವಿಚಾರಣೆಯ ಸಂದರ್ಭದಲ್ಲಿ ಓಂಕಾರ್ ಹೊಂದಿರುವ ಅಂಗವೈಕಲ್ಯವು ಅವರು ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುವುದಕ್ಕೆ ತಡೆಯಾಗಬಾರದು ಎಂದು ತನ್ನ ಮಧ್ಯಂತರ ತೀರ್ಪಿನಲ್ಲಿ 'ಸುಪ್ರೀಂ' ಅಭಿಪ್ರಾಯಪಟ್ಟಿತ್ತಲ್ಲದೇ, ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜಿನಲ್ಲಿ ಅವರನ್ನು ಹೊಸದಾಗಿ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಿತ್ತು. ಅಲ್ಲದೇ ಓಂಕಾರ್ ಅವರು ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ನೀಡಿತ್ತು.

ವಿಶೇಷ ಕೈಪಿಡಿ

ಅಂಗವಿಕಲರಿಗೆ ಸಂಬಂಧಿಸಿದಂತೆ 2024ರಲ್ಲಿ ಸಿಜೆಐ ಡಿ.ವೈ.ಚಂದ್ರಚೂಡ್ ಅವರು ವಿಶೇಷ ಕೈಪಿಡಿಯೊಂದನ್ನು ಬಿಡುಗಡೆ ಮಾಡಿದ್ದರು. ಅಂಗವಿಕಲರನ್ನು ಗುರುತಿಸುವಾಗ, ಅವರ ಬಗ್ಗೆ ಮಾತನಾಡುವಾಗ, ಅವರೊಂದಿಗೆ ನಡೆದುಕೊಳ್ಳುವಾಗ ಬಳಸುವ ಭಾಷೆ, ಮತ್ತು ತೀರ್ಪುಗಳಲ್ಲಿ ಅವರ ಬಗ್ಗೆ ಉಲ್ಲೇಖಿಸುವ ಪದಗಳ ಬಳಕೆ ಸೇರಿದಂತೆ ಒಟ್ಟಾರೆಯಾಗಿ ಅಂಗವಿಕಲರನ್ನು ಗೌರವದಿಂದ ಕಾಣುವ, ಘನತೆಯಿಂದ ನಡೆಸಿಕೊಳ್ಳುವುದಕ್ಕೆ ಸಂಬಂಧಿಸಿದ ಅಂಶಗಳನ್ನು ಕೈಪಿಡಿ ಒಳಗೊಂಡಿದೆ.

ರಾಷ್ಟ್ರೀಯ

ದಕ್ಷಿಣದ ದೇಶಗಳ ಆದ್ಯತೆಗಳ ಚರ್ಚೆ: ಮೋದಿ

ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಕೆನಡಾದ ಕ್ಯಾಲ್ಗರಿ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲಾಯಿತು ಪಿಟಿಐ ಚಿತ್ರ

ಕ್ಯಾಲ್ಗರಿ (ಪಿಟಿಐ): 'ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಇಂಧನ ಭದ್ರತೆ, ತಂತ್ರಜ್ಞಾನ, ಮೂಲಸೌಕರ್ಯ, ಬಂಡವಾಳ ಹೂಡಿಕೆ ಸೇರಿದಂತೆ ಭೌಗೋಳಿಕವಾಗಿ ದಕ್ಷಿಣದ ದೇಶಗಳ ಆದ್ಯತೆಗಳು ಮತ್ತು ಸಮಸ್ಯೆಗಳ ಕುರಿತು ಚರ್ಚೆ ನಡೆಸುವುದಾಗಿ' ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸೈಪ್ರಸ್, ಕೆನಡಾ, ಕ್ರೊಯೇಷಿಯಾ ಸೇರಿ ಮೂರು ದೇಶಗಳ ನಾಲ್ಕು ದಿನಗಳ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, ಕೆನಡಾದ ಕೆನಾನಸ್ಕಿಸ್‌ನಲ್ಲಿ ನಡೆಯಲಿರುವ ಜಿ–7 ಶೃಂಗಸಭೆಯಲ್ಲಿ ಭಾಗವಹಿಸಲು ಸೋಮವಾರ ಸಂಜೆ ಇಲ್ಲಿಗೆ ಬಂದಿಳಿದರು.

ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಶೃಂಗಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿದಂತೆ ಭಾರತ ಮತ್ತು ಕೆನಡಾ ನಡುವೆ ಹದಗೆಟ್ಟಿರುವ ಸಂಬಂಧದ ಮರುಸ್ಥಾಪನೆಯಲ್ಲೂ ಪ್ರಧಾನಿ ಮೋದಿ ಅವರ ಕೆನಡಾ ಭೇಟಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ನಿರೀಕ್ಷಿಸಲಾಗಿದೆ.

'ಜಿ–7 ಶೃಂಗಸಭೆಯ ಜತೆಯಲ್ಲೇ ಪ್ರಧಾನಿ ಅವರು ಜಿ–7 ರಾಷ್ಟ್ರಗಳ ಮುಖಂಡರ ಜತೆಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಏಪ್ರಿಲ್ 22ರ ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಂತರ ಭಾರತವು, ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಜಾಗತಿಕ ಮುಖಂಡರ ಬೆಂಬಲವನ್ನು ಕೋರುತ್ತಿದೆ. ಈ ನಿಟ್ಟಿನಲ್ಲಿ ಜಿ–7 ರಾಷ್ಟ್ರಗಳ ಮುಖಂಡರ ಜತೆಗಿನ ದ್ವಿಪಕ್ಷೀಯ ಮಾತುಕತೆಯೂ ಮಹತ್ವ ಪಡೆದುಕೊಂಡಿದೆ.

ವಿಶ್ವಗುರುವಿಗೆ ಹಿನ್ನಡೆ: ಕಾಂಗ್ರೆಸ್

ನವದೆಹಲಿ (ಪಿಟಿಐ): ಜಿ7 ರಾಷ್ಟ್ರಗಳ ಶೃಂಗಸಭೆಯಿಂದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದು ದಿನ ಮುಂಚಿತವಾಗಿ ನಿರ್ಗಮಿಸಿರುವ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಇದು ಸ್ವಯಂ ಘೋಷಿತ, ಅಪ್ಪುಗೆಪ್ರಿಯ ರಾಜತಾಂತ್ರಿಕ ವಿಶ್ವಗುರು'ವಿಗೆ ಆಗಿರುವ ಹಿನ್ನಡೆ' ಎಂದು ಟೀಕಿಸಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರ ಇತ್ತೀಚಿನ ಅಮೆರಿಕ ಭೇಟಿಯನ್ನು ಪ್ರಸ್ತಾಪಿಸಿರುವ ಕಾಂಗ್ರೆಸ್, ಪಹಲ್ಗಾಮ್ ದಾಳಿಯ ಜತೆಗೆ ನೇರ ಸಂಬಂಧ ಹೊಂದಿರುವ ವ್ಯಕ್ತಿಯೇ ಈಗ ಅಧಿಕೃತವಾಗಿ ಅಮೆರಿಕದಲ್ಲಿದ್ದಾರೆ. ಆದರೆ, ಪಾಕಿಸ್ತಾನದ ವಿಚಾರದಲ್ಲಿ ಅಮೆರಿಕದ ಇತ್ತೀಚಿನ ನಿಲುವಿನ ಕುರಿತು ಪ್ರಧಾನಿ ಮೋದಿ ಮತ್ತು ವಿದೇಶಾಂಗ ಸಚಿವ ಜೈಶಂಕರ್ ಮೌನಕ್ಕೆ ಶರಣಾಗಿದ್ದಾರೆ' ಎಂದು ವಾಗ್ದಾಳಿ ನಡೆಸಿದೆ.

'ಸುಪ್ರೀಂ' ಮೆಟ್ಟಿಲೇರಿದ ಎಡಿಜಿಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮನ್ನು ಬಂಧಿಸುವಂತೆ ಮದ್ರಾಸ್ ಹೈಕೋರ್ಟ್ ಪೊಲೀಸರಿಗೆ ನೀಡಿದ ನಿರ್ದೇಶನದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ತಮಿಳುನಾಡಿನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಚ್.ಎಂ. ಜಯರಾಮ್ ಅವರು ಮಂಗಳವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು.

ಬಾಲಕನೊಬ್ಬನ ಅಪಹರಣಕ್ಕೆ ಸಹಕಾರ ನೀಡಿದ ಆರೋಪದಲ್ಲಿ ಅವರನ್ನು ಬಂಧಿಸಲು ಮದ್ರಾಸ್ ಹೈಕೋರ್ಟ್ ನಿರ್ದೇಶನ ನೀಡಿತ್ತು. ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸುವುದಾಗಿ ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಮನ್‌ಮೋಹನ್ ಅವರಿದ್ದ ಪೀಠ ಹೇಳಿತು.

'ಪ್ರಕರಣ ಸಂಬಂಧ ಬಂಧಿಸಲಾಗಿದ್ದ ಆರೋಪಿಗಳ ತಪ್ಪೊಪ್ಪಿಗೆ ಹೇಳಿಕೆ ಆಧಾರದಲ್ಲಿ ಜಯರಾಮ್ ಬಂಧನಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ತಕ್ಷಣವೇ ಅರ್ಜಿಯ ವಿಚಾರಣೆ ನಡೆಸಬೇಕು' ಎಂದು ಎಡಿಜಿಪಿ ಪರ ವಕೀಲರು ವಾದಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಾರಾಟ ನಡೆಸುತ್ತಿದ್ದ ವಿಮಾನವೊಂದರ ಒಳಗಡೆ ದಟ್ಟ ಹೊಗೆ ಆವರಿಸಿದ ಮತ್ತು ಪ್ರಯಾಣಿಕರು ಆತಂಕಗೊಂಡು ಕಿರುಚಾಡುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಅಹಮದಾಬಾದ್‌ನಲ್ಲಿ ಅಪಘಾತಕ್ಕೆ ಈಡಾದ ಏರ್ ಇಂಡಿಯಾ ವಿಮಾನದ ಒಳಗಡೆ ಪತನಕ್ಕೂ ಮುನ್ನ ಕಂಡು ಬಂದ ದೃಶ್ಯ ಇದು ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಇದೇ ಪ್ರತಿಪಾದನೆಯೊಂದಿಗೆ ಹಲವರು ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ @TheWapplehouse ಎಂಬ 'ಎಕ್ಸ್' ಖಾತೆಯಲ್ಲಿ 2023ರ ಮಾರ್ಚ್ 17ರಂದು ಇದೇ ವಿಡಿಯೊ ಪೋಸ್ಟ್ ಮಾಡಿರುವುದು ಕಂಡು ಬಂತು. ಆ ಪೋಸ್ಟ್‌ನಲ್ಲಿ ನೀಡಲಾಗಿರುವ ವಿವರಣೆಯಂತೆ, ಅದು 2020ರ ಜನವರಿಯಲ್ಲಿ ನಡೆದ ಘಟನೆಯಾಗಿದ್ದು, ಐರ್ಲೆಂಡ್‌ನ ವಿಮಾನಯಾನ ಸಂಸ್ಥೆ ರ‍್ಯಾನ್‌ಏರ್‌ನ ವಿಮಾನವೊಂದು ಟೇಕಾಫ್ ಆದ ಕೆಲವೇ ಹೊತ್ತಿನಲ್ಲಿ ಅದರ ಒಳಗಡೆ ಹೊಗೆ ಆವರಿಸಿಕೊಂಡು ಪ್ರಯಾಣಿಕರಲ್ಲಿ ಆತಂಕ, ಗೊಂದಲ ಸೃಷ್ಟಿಯಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ ಈ ಘಟನೆ ಸಂಬಂಧ ಪ್ರಕಟವಾದ ಮಾಧ್ಯಮ ವರದಿಗಳು ದೊರೆತವು. ಐದು ವರ್ಷಗಳಷ್ಟು ಹಿಂದೆ ನಡೆದಿದ್ದ ಘಟನೆಯ ವಿಡಿಯೊವನ್ನು ಅಹಮದಾಬಾದ್ ದುರಂತಕ್ಕೆ ಸಂಬಂಧಿಸಿದ್ದು ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಕಾಯುವ ತಪ

ನುಡಿ ಬೆಳಗು

ವಾಸುದೇವ ನಾಡಿಗ್

ಇಂದಲ್ಲ ನಾಳೆ ಕಂಸನ ಊರಾದ ಮಥುರೆಗೆ ಕೃಷ್ಣ ಬಂದೇ ಬರುತ್ತಾನೆ ಎಂಬ ಭರವಸೆಯಲ್ಲಿದ್ದಾಳೆ ವೃದ್ಧೆ ಕುಬ್ಜೆ. ಅನುದಿನ ಅವಳದು ಒಂದೇ ಕೆಲಸ; ಗಂಧವನ್ನು ತೇಯ್ದಿಟ್ಟು ಕಾಯುವುದು. ಎಂದಾದರೊಮ್ಮೆ ಕೃಷ್ಣ ಬಂದರೆ ಅವನ ಕೈ ಮತ್ತು ಹಣೆಗೆ ಈ ಪರಿಮಳ ದ್ರವ್ಯವನ್ನು ತೀಡುವುದೇ ಅವಳ ಬಾಳಿನ ಆತ್ಯಂತಿಕ ಗುರಿ. ಊರವರಿಗೆಲ್ಲ ಇವಳು ಮಾತಿಗೆ ಆಹಾರ. ಎಂದೂ ಬಾರದ ಕೃಷ್ಣನಿಗಾಗಿ ಕಾಯುವ ಇವಳ ಹುಚ್ಚುತನ.

ನಿಜ ಹೇಳಬೇಕು ಎಂದರೆ ಈಕೆ ಆಕಾಶವನ್ನು ಒಮ್ಮೆಯೂ ನೋಡಿದವಳಲ್ಲ. ತಲೆ ಎತ್ತೋದು ಒತ್ತಟ್ಟಿಗೆ ಇರಲಿ. ನೆಟ್ಟಗೆ ನಿಲ್ಲಲಾಗದ ಅಸಹಾಯಕತೆ ಕುಬ್ಜೆಯದು. ಹೇಗೆ ಆಕಾಶ ನೋಡಬಲ್ಲಳು? ಉಸಿರಾಡಲು ತಲೆ ತಗ್ಗಿಸಿ ತಿನ್ನುವುದಕ್ಕಾಗೇ ಹೀಗೆ ಬೆನ್ನು ಗೂನಾಗಿದೆಯೇ ಎನಿಸುತ್ತದೆ. ಒಂದು ರೀತಿಯಲ್ಲಿ ಲೋಕದ ವಿಕಾರಗಳನ್ನು ನೋಡದ ಕುಬ್ಜೆ ನೆಲವನ್ನು ಮಾತ್ರ ನೋಡುವ ಧ್ಯಾನಸ್ಥಳೇ ಸರಿ.

'ಮಗುವಾಗಿದ್ದಾಗಲೇ ಕಂಸ ಕೃಷ್ಣನನ್ನು ಕೊಂದಿರುವಾಗ ಅವನು ಬರುವುದಾದರೂ ಹೇಗೆ ಮಥುರೆಗೆ' ಎಂಬ ದಟ್ಟವಾದ ನಂಬಿಕೆಯಲ್ಲಿ ಲೋಕ ಮುಳುಗಿದ್ದರೆ ಕುಬ್ಜೆ, ಕೃಷ್ಣ ಎಂಬ ಒಂದೇ ಹೆಸರಿನ ಭರವಸೆಯಲ್ಲಿ ಮಾಗಿದ ಜೀವ. ಕಂಸ ಏರ್ಪಡಿಸಿದ್ದ ಬಿಲ್ಲ ಹಬ್ಬದ ದಿನದಂದು ಕೃಷ್ಣ ಬಂದೇ ಬರುತ್ತಾನೆ ಎಂಬ ಒಂಟಿಕಾಲಿನ ನಿರೀಕ್ಷೆಯ ತಪ ಆಕೆಯದು. ಲೋಕದಲ್ಲಿ ಈ ಮಾತೂ ಇತ್ತು... ಕಂಸನನ್ನು ಕೊಲ್ಲಲು ಕೃಷ್ಣ ಮತ್ತೆ ಹುಟ್ಟಿ ಬರಲೂಬಹುದು.

ನಾಳೆ ಬಿಲ್ಲ ಹಬ್ಬ. ಹಿಂದಿನ ರಾತ್ರಿ ಇಡೀ ಕುಬ್ಜೆಗೆ ನಿದ್ದೆ ಇಲ್ಲ. ಕೊಡಗಟ್ಟಲೆ ಗಂಧವನ್ನು ತೇಯಲು ಕೂತಳು. ಹಗಲಾದದ್ದೇ ಗೊತ್ತಾಗದ ಹಾಗೆ. ಎಲ್ಲೆಡೆ ಕೃಷ್ಣನ ಆಗಮನದ ಕೂಗು. ಅವನು ಬಂದನಂತೆ. ಮಥುರೆಯ ಅರಮನೆಯ ಅಂಗಳ ಪ್ರವೇಶಿಸುವ ರಾಜಬೀದಿಯಲ್ಲಿ ಪರಿಮಳದ ದ್ರವ್ಯ ಹೊತ್ತು ನಿಂತಳು ಕುಬ್ಜೆ. ಇದನ್ನು ಮೊದಲೇ ಬಲ್ಲ ಕೃಷ್ಣ ನೆಟ್ಟಗೆ ನಿಲ್ಲಲಾಗದ ಕುಬ್ಜೆಯ ಎದುರು ಮೊಣಕಾಲೂರಿ ಕುಳಿತು ಹಣೆಗೆ ಗಂಧವನ್ನು ಹಚ್ಚಿಸಿಕೊಂಡು, ಕುಬ್ಜೆಯ ಬೆನ್ನು ಸವರಿದಾಗ ಕುಬ್ಜೆಯ ಗೂನು ಕರಗಿ ಸಹಜವಾದಳು. ಅವಳ ಎದುರು ಕಂಡದ್ದು ಆಕಾಶದ ಹೊಳಪಿನ ಕೃಷ್ಣನೇ.

ಇದನ್ನೆ ಅಲ್ಲವೇ ಕಾಯುವುದಕ್ಕಿಂತ ತಪವು ಬೇರಿಲ್ಲ ಎಂದಿರುವುದು. ಬಾಳು ತಾಳ್ಮೆಯನ್ನು ಬಯಸಿದರೆ, ತಾಳ್ಮೆ ಬಾಳನ್ನು ಗೆಲ್ಲಿಸುತ್ತದೆ.

ಗುಂಡಣ್ಣ

ಪದಬಂಧ 6077

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3. ಅದೇ ತಾನೆ ಮೂಡುತ್ತಿರುವ ಸೂರ್ಯ (4)
5. ಕೊನೆಗೆ ಫಲವಿಟ್ಟರೆ ಇದು ಸೋಲು! (3)
6. ಮಣ್ಣು ಕಲೆಸಿದ ನೀರು (3)
8. ಸಾಮರ್ಥ್ಯ ಇಲ್ಲಿ ಕಾಣುತ್ತಿದೆ (3)
9. ಅರ್ಚನೆ ಮಾಡುತ್ತಿರುವ ಪೂಜಾರಿ (3)
10. ರೀತಿಯೊಡಗೂಡುವ ಜೋಡು ನುಡಿ (3)
12. ಜಗಳಕ್ಕೊಂದು ಪರ್ಯಾಯ ಪದ (3)
14. ಕಣದಲ್ಲಿರುವ ಲಗಾಮು (4)
15. ಖೈದಿಗಳನ್ನು ಕೂಡಿಹಾಕುವ ಜಾಗ (4)

ಮೇಲಿಂದ ಕೆಳಕ್ಕೆ

1. ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2. ಈತ ಕವಿತೆ ಬರೆಯುವವನು (2)
3. ಬಾಲಕನಿಗೆ ಮೂಡಿರುವ ಲಾಂಗೂಲ (2)
4. ತೊಂದರೆ ಹೀಗೆ ಬಂದಿದೆ (3)
7. ದುಃಖಾಂತವಾದ ಪ್ರಹಸನ (5)
8. ಅನುಪಸ್ಥಿತಿಯನ್ನು ಹೀಗೆನ್ನಿ (5)
9. ಎಂಟು ಭಾಗಗಳುಳ್ಳದ್ದು (3)
11. ತಪ್ಪಿಗಾಗಿ ತೆರಬೇಕಾದ ದಂಡ (3)
12. ಕಬ್ಬಿಣದಲ್ಲಿರುವ ಚಿಕ್ಕಚೂರು (2)
13. ಹಾವಸೆಯಿರುವ ಜಾಗದಲ್ಲಿನ ರಂಗೋಲಿ (2)



6076 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಣಾಹಣಿ 3.ಉಪವಾಸ 5.ವಿಷಯ 6.ಖಡ್ಗಧಾರೆ 7.ನದೀಮುಖಜಭೂಮಿ 10.ತಟಾವಟ 11.ಸಂಧಾನ 14.ಮೆಲುನುಡಿ 15.ವಾತರೋಗ

ಮೇಲಿಂದ ಕೆಳಕ್ಕೆ: 1.ಹಣೆ 2.ಹರುಷ 4.ಸಕ್ಕರೆ 5.ವಿಮಾನ 6.ಖನಿಜ 8.ಮುಕುಟ 9.ಮಿಥುನ 10.ತರ್ಜುಮೆ 12.ಧಾವಂತ 13.ಜಾಗ

ಸುಡೊಕು 6461

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	

6460 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

18 ಜೂನ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಸಪ್ತಮಿ ಗಂ. 13-35 ನಕ್ಷತ್ರ: ಪೂರ್ವಾಭಾದ್ರ ಗಂ. 24-23 ಯೋಗ: ಪ್ರೀತಿ ಗಂ. 7-40, ಮಿಥುನ ಮಾಸದ 04 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 – 01-30. ಸೂರ್ಯೋದಯ : 06-08 ಸೂರ್ಯಾಸ್ತ : 06-55 ಮುಸ್ಲಿಂ ದಿನಾಂಕ : 21 ಜುಲ್‌ಹಿಜಾ, ಅದೃಷ್ಟ ಸಂಖ್ಯೆ : 4, 11

ಮೇಷ: ಸ್ವಂತ ಉದ್ಯೋಗಿಗಳಿಗೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಹೊಸ ಅವಕಾಶಗಳು ದೊರೆಯಲಿವೆ. ದೈಹಿಕ ಶ್ರಮದ ಜೊತೆ ಧಾರ್ಮಿಕ ಕಾರ್ಯಗಳೂ ಸೇರಿದಾಗ ಶುಭಫಲ ಅನುಭವಕ್ಕೆ ಬರುತ್ತದೆ.

ವೃಷಭ: ಮಾಡಿ ಮುಗಿಸಬೇಕೆಂದು ಆಲೋಚಿಸಿದ್ದ ಕೆಲಸಗಳು ಶುಭಾರಂಭಗೊಳ್ಳಲಿವೆ. ವಿದ್ಯಾರ್ಥಿಗಳು ಓದಿನಲ್ಲಿ ಅಪರಿಮಿತ ಆಸಕ್ತಿ ತೋರುವಿರಿ. ಉದರವ್ಯಾಧಿ ಕಾಣಿಸಿಕೊಳ್ಳಬಹುದು.

ಮಿಥುನ: ವ್ಯವಹಾರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಅನುಷ್ಠಾನಕ್ಕೆ ತರಲು ಸಕಾಲ. ಕಷ್ಟಪಟ್ಟು ದುಡಿಯುವ ಸ್ವಭಾವದವರು, ವ್ಯವಹಾರದಲ್ಲಿ ಜೀವನಕ್ಕೇನೂ ಕೊರತೆ ಕಾಣುವುದಿಲ್ಲ.

ಕರ್ಕಾಟಕ: ಜೀವನದಲ್ಲಿ ಅತಿಯಾಗಿ ನಂಬುವ ವ್ಯಕ್ತಿ ಜತೆ ಸಮಯ ಕಳೆಯುವಿರಿ. ಕಲ್ಪನಾಶಕ್ತಿ ಚುರುಕಾಗಿ ಕೆಲಸ ಮಾಡಲಿದೆ. ಕೈಮಗ್ಗದ ವಸ್ತುಗಳ ವ್ಯಾಪಾರಿಗಳಿಗೆ ಪ್ರಾಮುಖ್ಯತೆ ಸಿಗಲಿದೆ. ಉತ್ತಮ ಆದಾಯ ಇರಲಿದೆ.

ಸಿಂಹ: ಮೇಲಧಿಕಾರಿಗಳಿಂದ ಅವಕಾಶಗಳು ಹಾಗೂ ಪ್ರಶಂಸೆಯ ಮಾತುಗಳನ್ನು ಕೇಳುವಿರಿ. ಸ್ವಾರ್ಥ ಬುದ್ಧಿಯನ್ನು ಬಿಟ್ಟು ಇತರರ ಕುರಿತು ಕಾಳಜಿ ವಹಿಸುವುದನ್ನೂ ಅಭ್ಯಾಸ ಮಾಡಿಕೊಳ್ಳಿ.

ಕನ್ಯಾ: ಹುಡುಕಾಟದ ಸತತ ಪ್ರಯತ್ನದಿಂದ ಕಳೆದು ಹೋಗಿದ್ದ ದಾಖಲೆಪತ್ರಗಳು ಸಿಕ್ಕಿ ಮನಸ್ಸಿಗೆ ಸಮಾಧಾನವಾಗುವುದು. ಪತ್ರಿಕಾ ವರದಿಗಾರರಿಗೆ ಈ ದಿನ ಸದಾಕಾಲ ನೆನಪಿನಲ್ಲಿ ಉಳಿಯಲಿದೆ.

ತುಲಾ: ಮೇಲಧಿಕಾರಿಗಳ ಅಥವಾ ಪರಿಣತರ ಸಲಹೆ, ಸೂಚನೆಗಳೊಂದಿಗೆ ಮುಂದುವರಿದರೆ ಗೊಂದಲದ ಪರಿಸ್ಥಿತಿ ತಿಳಿಯಾಗುತ್ತದೆ. ದೇವಿಯ ಆರಾಧನೆಯಿಂದ ನೆಮ್ಮದಿ ತಂದುಕೊಳ್ಳಬಹುದು. ಧನಲಾಭ ಪ್ರಾಪ್ತಿ.

ವೃಶ್ಚಿಕ: ಜಮೀನಿನ ಕೆಲಸಗಳು ತೊಂದರೆ ಇಲ್ಲದೆ ನೆರವೇರಲಿವೆ. ಅದೃಷ್ಟದ ಕೊರತೆಯಿಂದ ಅಗತ್ಯಕ್ಕಿಂತ ಹೆಚ್ಚು ಸಂಪಾದನೆ ಆಗುವುದು ಕಷ್ಟವೆನಿಸುವುದು. ಅರಣ್ಯ ಅಧಿಕಾರಿಗಳಿಗೆ ಕೆಲಸ ಎದುರಾಗುತ್ತದೆ.

ಧನು: ಸರ್ಕಾರಿ ಅಧಿಕಾರಿಗಳಿಗೆ ಶುಭ ದಿನ. ಆಫೀಸಿನ ತುರ್ತು ಕೆಲಸಗಳತ್ತ ಗಮನ ಕೊಡಿ. ಕೆಲಸದಲ್ಲಿ ವಿವೇಚನೆಯ ಕೊರತೆ ಕಂಡುಬರಲಿದೆ. ಗೆಲುವು ಸಾಧಿಸಲು ಹೆಜ್ಜೆಹೆಜ್ಜೆಗೂ ವಿವೇಚನೆ ಅಗತ್ಯ.

ಮಕರ: ನಿಮ್ಮನ್ನು ರೂಪಿಸಿಕೊಳ್ಳಲು ಶ್ರಮ ಹಾಕಬೇಕೆನ್ನುವ ವಿಚಾರ ಕೋಪ ಹಾಗೂ ಅಸಹನೆಯನ್ನು ಉಂಟುಮಾಡಲಿದೆ. ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ಈ ದಿನ ತಿಳಿಯುವುದು.

ಕುಂಭ: ಬೃಹತ್ ಮೊತ್ತದ ವ್ಯವಹಾರವನ್ನು ಹೊಂದಿರುವವರು ನಿಮ್ಮ ಎದುರಾಳಿಗಳ ಮೇಲಿನ ಗಮನವನ್ನು ಹೆಚ್ಚು ಮಾಡಿಕೊಳ್ಳುವುದು ಒಳ್ಳೆಯದು. ಹಣ ಸಹಾಯ ಮಾಡುತ್ತೇವೆ ಎಂದ ಸ್ನೇಹಿತರು ನೀಡದೆ ಸತಾಯಿಸುವ ಸಾಧ್ಯತೆ.

ಮೀನ: ಉದ್ಯೋಗಾಪೇಕ್ಷಿಗಳು ಇಷ್ಟ ಕ್ಷೇತ್ರದಲ್ಲಿ ಕೆಲಸ ಹೊಂದುವುದರಿಂದ ಲೀಲಾಜಾಲವಾಗಿ ಉತ್ತಮ ಹೆಸರು ಪಡೆಯುವಿರಿ. ಆರೋಗ್ಯದ ಏರುಪೇರುಗಳಾಗುವ ಸಾಧ್ಯತೆ ಇದೆ. ಎಚ್ಚರವಹಿಸಿ.

ವಿನಿಮಯ ದರ: ಡಾಲರ್ 86.34 | ಪೌಂಡ್ 116.83 | ಯೂರೊ 99.68

ಷೇರುಪೇಟೆ ವಹಿವಾಟು



ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹585
	12 ಕ್ಕೆ	₹78
ಮೈಸೂರು:	100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹330-535
ದ್ವಿತಳಿ (ಬಿ.ವಿ)	₹341-695

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹188.50
ಗುಡ್ ಲಾಟ್	₹177.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1400)
ಸೋಯಾ (ರಿಫೈನ್ಡ್)	₹1210 (1220)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೊಲಿನ್	₹1200 (1200)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,946
ಇಂದಿನ ಅಂತ್ಯ:	24,853
ದಿನದ ಗರಿಷ್ಠ:	24,982

93 (ಇಳಿಕೆ)

ಮುಂಬೈ ಧಾರಣೆ (ಶೇಂಗಾ)

17-06-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1410)
ಒಂದು ವಾರದ ಡೆಲಿವರಿ	1415 (1405)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1280)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,850 (98,900)
ಬೆಳ್ಳಿ ಕೆ.ಜಿಗೆ	1,09,300 (1,06,750)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ತೆರಿಗೆ ಭೀತಿಗೆ ಸೂಚ್ಯಂಕ ಇಳಿಕೆ

‘ಜಾಗತಿಕ ಬೆಳವಣಿಗೆಗಳನ್ನು ಹೂಡಿಕೆದಾರರು ಗಮನಿಸುತ್ತಿದ್ದಾರೆ’

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ದೇಶದ ಷೇರುಪೇಟೆಗಳಲ್ಲಿ ಹೂಡಿಕೆದಾರರು ಎಚ್ಚರಿಕೆಯಿಂದ ಹೆಜ್ಜೆ ಇರಿಸುವಂತೆ ಮಾಡಿದೆ.

ಹೂಡಿಕೆದಾರರು ಲೋಹ, ತೈಲ ಮತ್ತು ಅನಿಲ, ಔಷಧ ವಲಯಗಳ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ ಕಾರಣಕ್ಕೆ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ತುಸು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆಯಲ್ಲಿ ಸೆನ್ಸೆಕ್ಸ್ 212 ಅಂಶ ಇಳಿಕೆಯಾಗಿದೆ. ರಾಷ್ಟ್ರೀಯ ಷೇರುಪೇಟೆಯಲ್ಲಿ ನಿಫ್ಟಿ ಸೂಚ್ಯಂಕವು 93 ಅಂಶ ಇಳಿಕೆ ಕಂಡಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಆಗುತ್ತಿದೆ. ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರದ ಬಗ್ಗೆ ಈ ವಾರ ನಿರ್ಣಯ ಕೈಗೊಳ್ಳಲಿದೆ. ಹೀಗಾಗಿ, ಹೂಡಿಕೆದಾರರು ಎಚ್ಚರಿಕೆಯಿಂದ ವಿದ್ಯಮಾನಗಳನ್ನು ಗಮನಿಸುತ್ತಿದ್ದಾರೆ ಎಂದು ತಜ್ಞರು ಹೇಳಿದ್ದಾರೆ.

ಔಷಧ ವಸ್ತುಗಳ ಮೇಲೆ ಹಾಗೂ ಸೆಮಿಕಂಡಕ್ಟರ್ ಉತ್ಪನ್ನಗಳ ಮೇಲೆ ಶೀಘ್ರದಲ್ಲಿಯೇ ತೆರಿಗೆ ವಿಧಿಸಲಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ ನಂತರದಲ್ಲಿ ಔಷಧ ವಲಯದ ಷೇರುಗಳು ಕುಸಿದಿವೆ.

‘ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು ತೀವ್ರವಾಗುತ್ತಿರುವ ಕಾರಣ ಸೂಚ್ಯಂಕಗಳು ತುಸು ಇಳಿಕೆ ಕಂಡಿವೆ. ಅನಿಶ್ಚಿತತೆಯ ಕಾರಣದಿಂದಾಗಿ ಬ್ರೆಂಟ್ ಕಚ್ಚಾ ತೈಲ ಬೆಲೆಯು ಏರಿಕೆಯಾಗಿದೆ. ಇದು ಭಾರತಕ್ಕೆ ಒಳ್ಳೆಯ ಸುದ್ದಿಯೇನೂ ಅಲ್ಲ. ತೈಲ ಬೆಲೆ ಏರಿಕೆಯು ಭಾರತದ ಕಂಪನಿಗಳ ವರಮಾನ ಗಳಿಕೆ ಹೆಚ್ಚಳದ ಮೇಲೆ ಪರಿಣಾಮ ಉಂಟುಮಾಡಬಹುದು’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ ದಕ್ಷಿಣ ಕೊರಿಯಾದ ಕೊಸ್ಪಿ ಮತ್ತು ಜಪಾನ್‌ನ ನಿಕ್ಕೈ ಸೂಚ್ಯಂಕಗಳು ಏರಿಕೆ ಕಂಡಿವೆ. ಶಾಂಘೈ, ಹಾಂಗ್ ಕಾಂಗ್‌ನ ಸೂಚ್ಯಂಕಗಳು ಇಳಿಕೆ ಆಗಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇ 1.69ರಷ್ಟು ಏರಿಕೆ ಆಗಿದ್ದು, ಬ್ಯಾರೆಲ್‌ಗೆ 74.47 ಡಾಲರ್‌ಗೆ ತಲುಪಿದೆ.

ತೈಲ ಬೇಡಿಕೆ 10 ಲಕ್ಷ ಬ್ಯಾರಲ್ ಏರಿಕೆ



ನವದೆಹಲಿ (ಪಿಟಿಐ): ತೈಲ ಬಳಕೆಯಲ್ಲಿ ವಿಶ್ವದಲ್ಲಿ ಮೂರನೆಯ ಸ್ಥಾನದಲ್ಲಿರುವ ಭಾರತವು ಜಾಗತಿಕ ಇಂಧನ ಬಳಕೆ ಹೆಚ್ಚಳದಲ್ಲಿ ದೊಡ್ಡ ಪಾತ್ರ ವಹಿಸಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ) ಹೇಳಿದೆ.

ಆರ್ಥಿಕ ಚಟುವಟಿಕೆಗಳ ವಿಸ್ತರಣೆಯ ಕಾರಣದಿಂದಾಗಿ 2030ರ ವೇಳೆಗೆ ಭಾರತದಲ್ಲಿ ತೈಲ ಬಳಕೆಯು ಪ್ರತಿದಿನ 10 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಾಗಲಿದೆ ಎಂದು ಅದು ಅಂದಾಜು ಮಾಡಿದೆ.

ಪ್ರಸಕ್ತ ದಶಕದ ಅಂತ್ಯದ ವೇಳೆಗೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲದ ಬೇಡಿಕೆಯು 25 ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಳ ಕಾಣುವ ನಿರೀಕ್ಷೆ ಇದೆ ಎಂದು ಮಂಗಳವಾರ ಬಿಡುಗಡೆ ಮಾಡಿರುವ ವರದಿಯನ್ನು ಐಇಎ ಹೇಳಿದೆ.

ಪಂಗಲ್ ಸಮುದಾಯದ ವ್ಯಕ್ತಿ ಮೃತದೇಹ ಪತ್ತೆ: ಕೆರಳಿದ ಜನ

ಪ್ರಜಾವಾಣಿ ವಾರ್ತೆ

ಗುವಾಹಟಿ: ‘ಪಂಗಲ್’ ಎಂಬ ಮೈತೇಯಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಅಂಗವಿಕಲ ವ್ಯಕ್ತಿ ಚೆಲಾಬ್ ಅಬ್ದುಲ್ ಖಾದಿರ್ ಅವರ ಮೃತದೇಹವು ಮಂಗಳವಾರ ಬೆಳಿಗ್ಗೆ ದೊರೆತಿದ್ದು, ಮೈತೇಯಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದೆ. ಇವರು ಜೂನ್ 10ರಂದು ಕಾಣೆಯಾಗಿದ್ದರು.

‘ಹತ್ಯೆಯ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು. ಖಾದಿರ್ ಅವರ ಮೃತದೇಹವನ್ನು ಹೊರತೆಗೆಯುತ್ತಿದ್ದಂತೆಯೇ, ಘಟನಾ ಸ್ಥಳದಲ್ಲಿದ್ದ ಜನರು ಭದ್ರತಾ ಪಡೆಗಳತ್ತ ಕಲ್ಲೆಸೆದರು. ಪ್ರತಿಭಟನಾಕಾರರನ್ನು ಚದುರಿಸಲು ಪಡೆಗಳು ಅಶ್ರುವಾಯು ಸಿಡಿಸಿದವು.

ಈ ಪ್ರಕರಣಕ್ಕೆ ಸಂಬಂಧಿಸಿ ಮೈತೇಯಿ ಬಂಡುಕೋರ ಸಂಘಟನೆ ‘ಅರಂಬಾಯ್ ಟೆಂಗೋಲ್’ನ ಆರು ಸದಸ್ಯರನ್ನು ಹಾಗೂ ಇತರ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ‘ಇನ್ನಷ್ಟು ಜನರನ್ನು ಬಂಧಿಸುವ ಸಾಧ್ಯತೆ ಇದೆ’ ಎಂದು ಪೊಲೀಸರು ಹೇಳಿದರು.

‘ಮೈತೇಯಿ ಮತ್ತು ಪಂಗಲ್ ಸಮುದಾಯಗಳ ಮಧ್ಯೆ ಇರುವ ಸೌಹಾರ್ದವನ್ನು ಹದಗೆಡಿಸಲು ಈ ಹತ್ಯೆ ನಡೆಸಲಾಗಿದೆ’ ಎಂದು ಮೈತೇಯಿ ಪಂಗಲ್ ಒಕ್ಕೂಟ ಸಮಿತಿಯು ಹೇಳಿಕೆ ನೀಡಿದೆ.

ಮಣಿಪುರದ ಒಟ್ಟು ಜನಸಂಖ್ಯೆಯಲ್ಲಿ ಪಂಗಲ್ ಸಮುದಾಯವು ಶೇ 9ರಷ್ಟಿದೆ. 2023ರಿಂದ ಆರಂಭವಾದ ಜನಾಂಗೀಯ ಸಂಘರ್ಷದಲ್ಲಿ ಈ ಸಮುದಾಯದ ಜನರು ಸಾಕಷ್ಟು ಸಂಕಷ್ಟ ಅನುಭವಿಸಿದ್ದಾರೆ. ಸಂಘರ್ಷದ ವೇಳೆ ಹಲವರು ಮೃತಪಟ್ಟಿದ್ದರೆ, ಹಲವರು ತಮ್ಮ ಮನೆ ಕಳೆದುಕೊಂಡಿದ್ದರು. ಆದರೂ ಈ ಸಮುದಾಯದ ಜನರು ಸಂಘರ್ಷದಿಂದ ದೂರ ಉಳಿದಿದ್ದರು. ಆದರೆ, ಖಾದಿರ್ ಅವರ ಹತ್ಯೆಯು ಈ ಸಮುದಾಯದವರನ್ನು ಕೆರಳಿಸಿದೆ.

ಅಡಿಕೆ ಧಾರಣೆ

ಪುತ್ತೂರು			
ಕೋಕ	20000-31000		
ಹೊಸ	26000-47500		
ಸಾಗರ			
ಬಿಳಿಗೋಟು	21055-24522		
ಚಾಲಿ	32419-35811		
ಕೋಕ	19899-19899		
ಕೆಂಪುಗೋಟು	21899-27989		
ರಾಶಿ	23819-51349		
ಸಿಪ್ಪೆಗೋಟು	13851-15111		
ಶಿವಮೊಗ್ಗ			
ಬೆಟ್ಟೆ	51532-58399		
ಗೊರಬಲು	17410-31196		
ರಾಶಿ	46009-57599		
ಸರಕು	55559-92969		
ಸಿದ್ದಾಪುರ			
ಬಿಳಿಗೋಟು	23699-29889		
ಚಾಲಿ	33289-40099		
ಕೋಕ	16669-25229		
ಹೊಸಚಾಲಿ	33289-40099		
ಕೆಂಪುಗೋಟು	18000-22199		
ರಾಶಿ	42099-46699		
ತಟ್ಟಿಬೆಟ್ಟೆ	27099-36659		
ಶಿರಸಿ			
ಬೆಟ್ಟೆ	26399-39699		
ಬಿಳಿಗೋಟು	16219-32199		
ಚಾಲಿ	35181-42299		
ಕೆಂಪುಗೋಟು	11699-24289		
ರಾಶಿ	44208-47499		
ಯಲ್ಲಾಪುರ			
ಬಿಳಿಗೋಟು	16899-31896		
ಚಾಲಿ	32099-40670		
ಕೋಕ	8899-18399		
ಕೆಂಪುಗೋಟು	17016-26306		
ರಾಶಿ	42210-55915		
ತಟ್ಟಿಬೆಟ್ಟೆ	29806-36819		

ಆರು ‘ಡ್ರೀಮ್‌ಲೈನರ್’ ಸಂಚಾರ ರದ್ದು

ಒಂದನೇ ಪುಟದಿಂದ...

ಈ ಎಲ್ಲಾ ವಿಮಾನಗಳೂ ‘787-8 ಡ್ರೀಮ್‌ಲೈನರ್’ ವಿಮಾನಗಳು’ ಎಂದು ಏರ್ ಇಂಡಿಯಾ ಮೂಲಗಳು ತಿಳಿಸಿವೆ.

ಅಹಮದಾಬಾದ್ ದುರಂತದ ಬಳಿಕ ಏರ್ ಇಂಡಿಯಾ ಸಂಸ್ಥೆಯ ವಿಮಾನಗಳು ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಅವುಗಳ ನಿರ್ವಹಣೆ, ಸುರಕ್ಷತೆಯ ಕುರಿತು ಆಕ್ಷೇಪಗಳೂ ವ್ಯಕ್ತವಾಗಿವೆ. ಈ ನಡುವೆಯೇ ತಾಂತ್ರಿಕ ದೋಷದ ಕಾರಣಗಳಿಂದಾಗಿ ವಿಮಾನ ಹಾರಾಟಗಳು ರದ್ದಾಗಿವೆ.

ವಿಮಾನ ವಿಳಂಬ– ಸಂಸದೆ ಸುಪ್ರಿಯಾ ಗರಂ: ದೆಹಲಿ–ಮುಂಬೈ ಏರ್ ಇಂಡಿಯಾ ‘ಎಐ2971’ ವಿಮಾನ ಸಂಚಾರು ವಿಳಂಬವಾಗಿದ್ದು, ಈ ಬಗ್ಗೆ ಎನ್‌ಸಿಪಿ (ಎಸ್‌ಪಿ) ಸಂಸದೆ ಸುಪ್ರಿಯಾ ಸುಳೆ ಕಿಡಿಕಾರಿದ್ದಾರೆ.

ಏರ್ ಇಂಡಿಯಾದ ಸೇವೆಗಳ ಕುರಿತು ‘ಎಕ್ಸ್’ನಲ್ಲಿ ಆಕ್ಷೇಪ ವ್ಯಕ್ತಪಡಿಸಿರುವ ಅವರು, ‘ಕಳಪೆ ನಿರ್ವಹಣೆ ಮತ್ತು ವಿಳಂಬ ಏರ್ ಇಂಡಿಯಾಗೆ ಸಾಮಾನ್ಯವಾಗಿಬಿಟ್ಟಿದೆ’ ಎಂದಿದ್ದಾರೆ. ಅಲ್ಲದೇ, ಈ ವಿಮಾನದಲ್ಲಿ ನಾನೂ ಪ್ರಯಾಣಿಸಬೇಕಿದ್ದು, 3 ಗಂಟೆ ವಿಳಂಬವಾಗಿದೆ. ಆದರೂ ಸಂಸ್ಥೆಯಿಂದ ಯಾವುದೇ ಸ್ಪಷ್ಟ ಸಂವಹನವಾಗಲಿ, ಸಹಾಯವಾಗಲಿ ದೊರೆತಿಲ್ಲ. ಪ್ರಯಾಣಿಕರನ್ನು ಅಸಹಾಯಕ ಸ್ಥಿತಿಗೆ ದೂಡಲಾಗಿದೆ. ಇದು ಸರಿಯಲ್ಲ ಎಂದು ನಾಗರಿಕ ವಿಮಾನಯಾನ ಸಚಿವ ರಾಮ ಮೋಹನ ನಾಯ್ಡು ಹಾಗೂ ಟಾಟಾ ಗ್ರೂಪ್ ಕಂಪನಿಯನ್ನು ಟ್ಯಾಗ್ ಮಾಡಿ, ಸುಪ್ರಿಯಾ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಮೀರ್ ಮಲ್ದಾರ್

• **ಪ್ರಶ್ನೆ: ನಾನು ನನ್ನ ವೇತನದ ನಾಲ್ಕನೇ ಒಂದು ಭಾಗವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡುತ್ತಿದ್ದೇನೆ. ಈಗ ನನಗೆ ತುರ್ತು ಸಾಲದ ಅಗತ್ಯವಿದೆ. ಈ ಸಾಲವನ್ನು ಕಡಿಮೆ ಅವಧಿಯಲ್ಲಿ ತೀರಿಸಲು ನಾನು ಎಸ್‌ಐಪಿ ಸ್ಥಗಿತಗೊಳಿಸಬೇಕೇ ಎಂಬ ಪ್ರಶ್ನೆ ಎದುರಾಗಿದೆ. ನನ್ನ ದ್ವಂದ್ವ ಏನೆಂದರೆ, ಎಸ್‌ಐಪಿ ಸ್ಥಗಿತಗೊಳಿಸಿ ಕಡಿಮೆ ಅವಧಿಯಲ್ಲಿ ಸಾಲವನ್ನು ಮುಗಿಸಬಹುದೇ ? ಅಥವಾ ಎಸ್‌ಐಪಿ ಮುಂದುವರಿಸಿ ಒಂದೆರಡು ವರ್ಷ ಹೆಚ್ಚುವರಿ ಸಮಯ ತೆಗೆದುಕೊಂಡು ಸಾಲ ತೀರಿಸಬಹುದೇ?**

ಉತ್ತರ: ನಿಮ್ಮ ಪ್ರಶ್ನೆ ಅತ್ಯಂತ ಸಹಜವಾದುದು. ಆರ್ಥಿಕ ವಿಚಾರದ ತೀರ್ಮಾನದಲ್ಲಿ ಇದು ನಿರ್ಣಾಯಕ. ಸಾಲ ತೆಗೆದುಕೊಳ್ಳುವ ಸಂದರ್ಭದಲ್ಲಿ ಎಸ್‌ಐಪಿಯನ್ನು ಸ್ಥಗಿತಗೊಳಿಸಬೇಕೇ ಅಥವಾ ಬೇಡವೇ ಎಂಬುದು ನಿಮ್ಮ ಪ್ರಮುಖ ಪ್ರಶ್ನೆ. ಇಂತಹ ವಿಚಾರ ಬಂದಾಗ ಸಮತೋಲನ ಅವಶ್ಯಕ. ಕೆಲವು ಯೋಜಿತ ಹಾಗೂ ನಿರೀಕ್ಷಿತ ಅಂಶಗಳ ಪರಿಗಣನೆಯ ಆಧಾರದಲ್ಲಿ ನಿರ್ಣಯ ಕೈಗೊಳ್ಳಬೇಕು. ಅವುಗಳಲ್ಲಿ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

1. **ಸಾಲದ ಬಡ್ಡಿದರ ಹಾಗೂ ಎಸ್‌ಐಪಿಯ ಲಾಭ:** ಸಾಲದ ಬಡ್ಡಿದರ ಹೆಚ್ಚಾಗಿದ್ದರೆ (ಉದಾಹರಣೆಗೆ: ಶೇ 10–12) ಹಾಗೂ ನಿಮಗೆ ಮ್ಯೂಚುವಲ್ ಫಂಡ್‌ಗಳಿಂದ ಸಿಗಬಹುದಾದ ಅಂದಾಜು ಲಾಭ (ಉದಾಹರಣೆಗೆ: ಶೇ 8–10) ಕಡಿಮೆ ಇದ್ದರೆ, ಅಂತಹ ಪರಿಸ್ಥಿತಿಯಲ್ಲಿ ಸಾಲವನ್ನು ಬೇಗ ತೀರಿಸುವುದು ಹಣಕಾಸು ದೃಷ್ಟಿಯಿಂದ ಲಾಭದಾಯಕ. ಇದಕ್ಕೆ ನೀವು ತಾತ್ಕಾಲಿಕವಾಗಿ ಮ್ಯೂಚುವಲ್ ಫಂಡ್ ಹೂಡಿಕೆ ಸ್ಥಗಿತಗೊಳಿಸಬಹುದು ಅಥವಾ ನಿಮ್ಮ ಆರ್ಥಿಕ ಅಗತ್ಯಗಳನ್ನು ಪೂರೈಸಲು ಬೇಕಿರುವ ಒಟ್ಟು ಮೊತ್ತದಲ್ಲಿ ಅಗತ್ಯವಿರುವಷ್ಟೇ ಸಾಲ ಪಡೆದು ಉಳಿದ ಹಣವನ್ನು ನಿಮ್ಮ ಒಟ್ಟಾರೆ ಹೂಡಿಕೆಗಳಲ್ಲಿ ಅತಿ ಕಡಿಮೆ ಲಾಭ ನೀಡುತ್ತಿರುವ ಫಂಡ್‌ಗಳಿಂದ ಹಿಂಪಡೆದು ಭರಿಸಿಕೊಳ್ಳುವುದು ಸೂಕ್ತವಾಗಬಹುದು.

ಇದಕ್ಕಾಗಿ ನಿಮ್ಮ ಒಟ್ಟು ಹೂಡಿಕೆ, ಅವುಗಳ ಮೇಲಿನ ಪ್ರತ್ಯೇಕಿತ ಲಾಭದ ಪ್ರತಿಶತ ಪ್ರಮಾಣ ಇತ್ಯಾದಿಗಳ ಮಾಹಿತಿಯನ್ನು ನಿಮ್ಮ ಬ್ರೋಕರ್ ಅಥವಾ ಫಂಡ್ ಹೌಸ್‌ಗಳಿಂದ ಪಡೆದು ನಿರ್ಣಯ ಕೈಗೊಳ್ಳಿ.

2. **ಲಾಭದಾಯಕ ಫಂಡ್‌ಗಳು:** ಇನ್ನೊಂದು ಪ್ರಮುಖ ಅಂಶವೆಂದರೆ, ನಿಮ್ಮ ಈಗಿರುವ ಫಂಡ್‌ಗಳು ಉತ್ತಮ ಲಾಭ ನೀಡುತ್ತಿದ್ದು (ಉದಾಹರಣೆಗೆ: ಶೇ 15-20) ಮುಂದೆಯೂ ಅದೇ ಪ್ರಮಾಣದ ಲಾಭದ ನಿರೀಕ್ಷೆ ನಿಮಗಿದ್ದರೆ, ಹೂಡಿಕೆಗಳನ್ನು ಮೊಟಕುಗೊಳಿಸದೆ ಹೆಚ್ಚಿನ ಅವಧಿಯ ಸಾಲ ಪಡೆದು ಹೂಡಿಕೆಯನ್ನು ಮುಂದುವರಿಸುತ್ತಲೇ ಇಎಂಐ ಪಾವತಿ ಮಾಡಬಹುದು.

ಮೇಲಿನ ಎರಡೂ ಆಯ್ಕೆಗಳನ್ನು ನಿರೀಕ್ಷಿತ ಲಾಭದ ಅಂದಾಜಿನ ಆಧಾರದಲ್ಲಿ ಲೆಕ್ಕ ಹಾಕಿ ಹಾಗೂ ಇವನ್ನು ಪಾವತಿಸುವ ಬಡ್ಡಿ ಹಾಗೂ ನಿರೀಕ್ಷಿಸುವ ಲಾಭದೊಡನೆ ತುಲನೆ ಮಾಡಿ. ಸಾಮಾನ್ಯವಾಗಿ ಈಕ್ವಿಟಿ ಫಂಡ್‌ಗಳು ಷೇರು ಮಾರುಕಟ್ಟೆಯ ಏರಿಳಿತಕ್ಕೆ ಹೊಂದಿಕೊಂಡಿರುವುದರಿಂದ ಭವಿಷ್ಯದ ಲಾಭವನ್ನು ನಿಖರವಾಗಿ ಅಂದಾಜಿಸುವುದು ಕಷ್ಟ. ಹಾಗಿದ್ದರೂ, ನಮ್ಮ ನಿರ್ಣಯಗಳು ಆಯಾ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗುವ ಅಂಶಗಳನ್ನು ಪರಿಗಣಿಸಿ ಕೈಗೊಳ್ಳುವುದಾಗಿರಬೇಕು.

ತುಳಜಾರಾಮ್ ಸಿ. ಸತ್ಪುತೆ, ವಿಜಯಪುರ

• **ಪ್ರಶ್ನೆ: ನಾನು ರಾಜ್ಯ ಸರ್ಕಾರದ ನಿವೃತ್ತ ಉದ್ಯೋಗಿ, ನನ್ನ ವಯಸ್ಸು 74 ವರ್ಷ. ನಾನು ನಿಯಮಿತವಾಗಿ ಅಂಚೆ ಕಚೇರಿ ಆರ್‌ಡಿ, ಎಸ್‌ಸಿಎಸ್‌ಎಸ್, ಎನ್‌ಎಸ್‌ಸಿ ಇತ್ಯಾದಿಗಳಲ್ಲಿ ಹೂಡಿಕೆ ಮಾಡುತ್ತಿರುತ್ತೇನೆ. 2014ರಲ್ಲಿ ನಾನು ಎರಡು ಆರ್‌ಡಿ ಖಾತೆಗಳಲ್ಲಿ ಪ್ರತಿ ತಿಂಗಳು ₹4,000 ಹೂಡಿಕೆ ಆರಂಭಿಸಿದ್ದೆ. ಅವು 10 ವರ್ಷಗಳ ಅವಧಿಯನ್ನು ಪೂರೈಸಿದ ನಂತರ, 2024ರಲ್ಲಿ ಆ ಎರಡು ಆರ್‌ಡಿ ಖಾತೆಗಳಿಂದ ₹5,43,254 ಬಡ್ಡಿ ಮೊತ್ತ ಒಂದೇ ಬಾರಿಗೆ ಪಡೆದಿದ್ದೇನೆ. ಈ ಹಣವನ್ನು ಸೇರಿಸಿ ನನ್ನ ಒಟ್ಟು ಆದಾಯ ₹14,74,326 ಆಗಿದೆ. ನಾನು ಈ ಆರ್‌ಡಿ ಮೇಲಿನ ಬಡ್ಡಿಯನ್ನು ಹೇಗೆ ಲೆಕ್ಕ ಹಾಕಬೇಕು ಹಾಗೂ ಅದು ಆದಾಯ ತೆರಿಗೆ ವಿವರ ನೀಡುವಾಗ (AY 2025-26) ಎಲ್ಲಿ ಸೇರಿಸಬೇಕು ಎಂಬುದನ್ನು ದಯವಿಟ್ಟು ವಿವರಿಸಿ. ಆದಾಯ ತೆರಿಗೆ ನಿಯಮ 80ಸಿ ಅಡಿಯಲ್ಲಿ, ನಾನು 2024ರ ಆಗಸ್ಟ್‌ನಲ್ಲಿ ₹2,00,000 ಮೌಲ್ಯದ ಎನ್‌ಎಸ್‌ಸಿ ಖರೀದಿಸಿದ್ದೇನೆ.**

ಉತ್ತರ: ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ ಆರ್‌ಡಿ ಖಾತೆಗಳ ಬಡ್ಡಿ ಮೊತ್ತ ₹5,43,254ನ್ನು ನೀವು ಆರ್ಥಿಕ ವರ್ಷ 2024-25ರಲ್ಲಿ ಒಂದೇ ಬಾರಿಗೆ ಪಡೆದಿದ್ದೀರಿ. ಆದರೆ, ಈ ಗಳಿಕೆ ಒಂದೇ ವರ್ಷದ್ದಲ್ಲ. ಅದು ಕಳೆದ ಹತ್ತು ವರ್ಷಗಳ ಸಂಚಿತ ಮೊತ್ತ. ಹೀಗಾಗಿ, ಬ್ಯಾಂಕಿನವರು ನಿಮ್ಮಿಂದ ಆಯಾ ವರ್ಷಕ್ಕೆ ಗಳಿಕೆಯಾದ ಮೊತ್ತದ ಮೇಲೆ ತೆರಿಗೆ ಅನ್ವಯವಾಗುವುದಿದ್ದರೆ, ಆಯಾ ವರ್ಷದಲ್ಲೇ ತೆರಿಗೆ ಕಡಿತಗೊಳಿಸಿರುತ್ತಾರೆ ಅಥವಾ ನೀವು ನಿಮ್ಮ ಹಿಂದಿನ ವಾರ್ಷಿಕ ವಿವರ ಸಲ್ಲಿಸಿದ್ದಾಗ ಅಂತಹ ವಾರ್ಷಿಕ ಬಡ್ಡಿಯನ್ನು ಆಯಾ ವರ್ಷದಲ್ಲೇ ಘೋಷಣೆ ಮಾಡಿರಬೇಕಾಗಿರುತ್ತದೆ. ನಗದು ರೂಪದಲ್ಲಿ ಒಟ್ಟಾಗಿ ಬಡ್ಡಿ ಗಳಿಸಿದಾಗ (ಪ್ರಸ್ತುತ ವರ್ಷ) ಹಾಗೂ ನಿಮ್ಮ ಖಾತೆಗೆ ವಾರ್ಷಿಕ ಬಡ್ಡಿ ಸಂಚಿತಗೊಂಡಾಗ, ಒಂದೇ ಆದಾಯಕ್ಕೆ ಎರಡು ಬಾರಿ ತೆರಿಗೆ ಪಾವತಿಸುವ ಅಗತ್ಯವಿಲ್ಲ. ಇದನ್ನು ಖಚಿತಪಡಿಸಿಕೊಳ್ಳಲು, ನಿಮ್ಮ ಹಳೆಯ ಹಾಗೂ ಪ್ರಸ್ತುತ ವರ್ಷದ ಎಐಎಸ್ ಹಾಗೂ ಎಎಸ್ 26 ಇವೆರಡನ್ನೂ ನಿಮ್ಮ ಆದಾಯ ತೆರಿಗೆ ಖಾತೆಗೆ ಲಾಗಿನ್ ಆಗಿ ಮಾಹಿತಿ ಪಡೆಯಿರಿ. ಈ ಮಾಹಿತಿಯ ಆಧಾರದಲ್ಲಿ ಅಗತ್ಯ ಬಿದ್ದರೆ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಯಾವುದಾದರೂ ಆದಾಯ ಅಘೋಷಿತವಾಗಿ ಉಳಿದಿದೆಯೇ, ತೆರಿಗೆ ಪಾವತಿ ಅಗತ್ಯವೇ ಎಂಬುದನ್ನು ಧೃಢಪಡಿಸಿಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

‘ಸದ್ದಾಂಗೆ ಆದ ಗತಿಯೇ ಖಮೇನಿಗೂ ಆಗಬಹುದು’

ಇರಾನ್‌ನ ಮತ್ತೊಬ್ಬ ಸೇನಾಧಿಕಾರಿ ಅಲಿ ಹತ್ಯೆ: ಇಸ್ರೇಲ್

ಟೆಲ್‌ಅವೀವ್/ದುಬೈ/ನವದೆಹಲಿ (ಎಎಫ್‌ಪಿ/ ರಾಯಿಟರ್ಸ್/ ಪಿಟಿಐ): ಇರಾಕ್ ಸರ್ವಾಧಿಕಾರಿ ಆಗಿದ್ದ ಸದ್ದಾಂ ಹುಸೇನ್‌ಗೆ ಆದ ಗತಿಯೇ ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರಿಗೂ ಆಗಬಹುದು ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕ್ಯಾಟ್ಜ್ ಎಚ್ಚರಿಸಿದ್ದಾರೆ.

ಇಸ್ರೇಲ್ ಸೇನೆ ಮತ್ತು ಕಮಾಂಡರ್‌ಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಕ್ಯಾಟ್ಜ್, ‘ಇಸ್ರೇಲ್ ವಿರುದ್ಧವಾಗಿ ಇರಾನ್ ರೀತಿ ನಡೆದುಕೊಂಡ ನೆರೆಯ ದೇಶದ ಸರ್ವಾಧಿಕಾರಿಯ ಪರಿಸ್ಥಿತಿ ಏನಾಯಿತು ಎಂಬುವುದನ್ನು ನೆನಪಿಸಿಕೊಳ್ಳಲಿ’ ಎಂದು ಕ್ಯಾಟ್ಜ್ ಹೇಳಿದ್ದಾರೆ.

ಯುದ್ಧ ಅಪರಾಧಗಳನ್ನು ಎಸಗುತ್ತಿರುವ ಮತ್ತು ಇಸ್ರೇಲ್ ನಾಗರಿಕರ ವಿರುದ್ಧ ಕ್ಷಿಪಣಿ ದಾಳಿಯನ್ನು ಮುಂದುವರಿಸುತ್ತಿರುವ ಇರಾನ್ ಸರ್ವೋಚ್ಚ ನಾಯಕರಿಗೆ ಮುಂದಿನ ಪರಿಸ್ಥಿತಿ ಬಗ್ಗೆ ಎಚ್ಚರಿಕೆ ನೀಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಹತ್ಯೆ: ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ (ಐಆರ್‌ಜಿ) ಉನ್ನತ ಅಧಿಕಾರಿ ಹಾಗೂ ಆಯತೊಲ್ಲಾ ಅಲಿ ಖಮೇನಿ ಆಪ್ತ ಜನರಲ್ ಅಲಿ ಶಾದ್‌ಮಾನಿ ಅವರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಹೇಳಿದೆ.

ಶಾದ್‌ಮಾನಿ ಅವರನ್ನು ಐಆರ್‌ಜಿಯ ಖತಮ್ ಅಲ್ ಅನ್‌ಬಿಯಾ ಕೇಂದ್ರ ಕಚೇರಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು.

ಭಾರತಕ್ಕೆ ಸ್ಥಳಾಂತರ ಇಂದು: ‘ಭಾರತದ ಎಲ್ಲ ವಿದ್ಯಾರ್ಥಿಗಳು ಇರಾನ್–ಅರ್ಮೇನಿಯಾ ಗಡಿಯನ್ನು ದಾಟಿ ಯರೆವಾನ್ ನಗರ ತಲುಪಿದ್ದಾರೆ. ಅವರಿಗೆ ಹೋಟೆಲ್ ಹಾಗೂ ನಿಗದಿತ ಸ್ಥಳಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳನ್ನು ಅರ್ಮೇನಿಯಾದಿಂದ ದೆಹಲಿಗೆ ವಿಮಾನದ ಮೂಲಕ ಬುಧವಾರ ಕರೆದೊಯ್ಯಲಾಗುತ್ತದೆ. ಭಾರತೀಯ ಅಧಿಕಾರಿಗಳ ಸಮನ್ವಯದೊಂದಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ’ ಎಂದು ಜಮ್ಮು ಮತ್ತು ಕಾಶ್ಮೀರ ವಿದ್ಯಾರ್ಥಿಗಳ ಸಂಘ ತಿಳಿಸಿದೆ.

ಪ್ರಮುಖ ಬೆಳವಣಿಗೆಗಳು

ಇರಾನ್ ಪಡೆಗಳು ಕ್ಷಿಪಣಿ ದಾಳಿ ನಡೆಸಿದ ಸ್ಥಳದಲ್ಲಿ ಇಸ್ರೇಲ್‌ನ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು ಎಪಿ ಚಿತ್ರ

ಇರಾನ್‌ನಿಂದಲೂ ದಾಳಿ

ಇರಾನ್ ಕೂಡ ಇಸ್ರೇಲ್ ಮೇಲೆ ಪ್ರತಿದಾಳಿ ನಡೆಸಿದೆ. ಈ ವರೆಗೆ ಇಸ್ರೇಲ್ ಮೇಲೆ 400 ಬ್ಯಾಲಿಸ್ಟಿಕ್ ಕ್ಷಿಪಣಿಗಳು ಹಾಗೂ ನೂರಾರು ಮಾನವ ರಹಿತ ವೈಮಾನಿಕ ಸಾಧನಗಳನ್ನು (ಯುಎವಿ) ಬಳಸಿ, ದಾಳಿ ನಡೆಸಲಾಗಿದೆ ಎಂದು ಇರಾನ್ ಹೇಳಿದೆ.

ಇಸ್ರೇಲ್‌ನ ಮಿಲಿಟರಿ ಗುಪ್ತಚರ ನಿರ್ದೇಶನಾಲಯ ಹಾಗೂ ಮೊಸಾದ್‌ನ ಕಚೇರಿ ಮೇಲೆ ದಾಳಿ ನಡೆಸಲಾಗಿದೆ ಎಂದಿದೆ.

ಇಸ್ರೇಲ್ ಪಡೆಗಳಿಂದ ‘ಡಿಜಿಟಲ್ ಟ್ರ್ಯಾಕಿಂಗ್’ ಸಾಧ್ಯತೆ ಕಾರಣ, ಸರ್ಕಾರಿ ಅಧಿಕಾರಿಗಳು ಹಾಗೂ ಅವರ ಅಂಗರಕ್ಷಕರು ಮೊಬೈಲ್, ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಸೇರಿ ಎಲ್ಲ ಬಗೆಯ ಸಂವಹನ ಸಾಧನಗಳನ್ನು ಬಳಕೆ ಮಾಡುವುದನ್ನು ನಿಷೇಧಿಸಿದೆ.

- ‘ಇಸ್ರೇಲ್ ಪಡೆಗಳು ನಡೆಸಿದ ದಾಳಿಗಳಿಂದ ಇರಾನ್‌ನ ನಟಾನ್ಜ್ ಅಣು ಸ್ಥಾವರಕ್ಕೆ ಹಾನಿಯಾಗಿದೆ ಎಂದು ಐಎಇಎ ಹೇಳಿದೆ
- ‘ಉದ್ವಿಗ್ನತೆ ಕಡಿಮೆ ಮಾಡಬೇಕು’ ಎನ್ನುವ ಮೂಲಕ ಜಿ–7 ರಾಷ್ಟ್ರಗಳು ಇಸ್ರೇಲ್ ಪರವಾಗಿ ನಿಂತಂತಾಗಿದೆ ಎಂದು ಇರಾನ್ ಟೀಕಿಸಿದೆ

ಶ್ರೀನಾಥ್ ಮನೆಯಲ್ಲಿ ಶೋಧ

ಒಂದನೇ ಪುಟದಿಂದ...

‘ಲೋಕಾಯುಕ್ತ ಪೊಲೀಸ್‌ನ ಬೆಂಗಳೂರು ನಗರ–1ರ ಅಧಿಕಾರಿಗಳು ಪ್ರಕರಣದ ತನಿಖೆ ನಡೆಸುತ್ತಿದ್ದು, ಡಿವೈಎಸ್‌ಪಿ ಮಟ್ಟದ ಅಧಿಕಾರಿ ನೇತೃತ್ವದ ತಂಡವು ಶ್ರೀನಾಥ್ ಅವರ ಮನೆಗೆ ಶೋಧಕ್ಕೆ ತೆರಳಿತ್ತು. ಕೋರಮಂಗಲದ ಪೊಲೀಸ್ ವಸತಿಗೃಹದಲ್ಲಿರುವ ಮನೆಗೆ ತನಿಖಾಧಿಕಾರಿಗಳು ತೆರಳಿದ್ದಾಗ ಶ್ರೀನಾಥ್ ಅವರು ಮನೆಯಲ್ಲಿ ಇರಲಿಲ್ಲ’ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

‘ಶೋಧ ಕಾರ್ಯದ ವೇಳೆ ಚಿನ್ನಾಭರಣ, ಆಸ್ತಿ ಪತ್ರಗಳು ಪತ್ತೆಯಾಗಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 19ರಂದು (ಗುರುವಾರ) ವಿಚಾರಣೆಗಾಗಿ ಲೋಕಾಯುಕ್ತ ಕಚೇರಿಗೆ ಬರುವಂತೆ ಸೂಚಿಸಿ, ಅವರ ಮನೆಯ ಗೋಡೆಗೆ ನೋಟಿಸ್ ಅಂಟಿಸಲಾಗಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

‘ನಿಂಗಪ್ಪನ ಮೊಬೈಲ್ ಪರಿಶೀಲನೆ ವೇಳೆ, ಲೋಕಾಯುಕ್ತ ಪೊಲೀಸ್‌ನ ಹಿರಿಯ ಅಧಿಕಾರಿಗಳ ಫೋಟೊ ಅದರಲ್ಲಿರುವುದು ಪತ್ತೆಯಾಗಿದೆ. ಒಬ್ಬ ಅಧಿಕಾರಿಯನ್ನು ಆತ ಮನೆಗೆ ಕರೆಸಿದ್ದು, ಸನ್ಮಾನಿಸಿರುವ ಚಿತ್ರವೂ ಇದೆ’ ಎಂದು ತಿಳಿಸಿವೆ.

‘ನಿಂಗಪ್ಪ ಜತೆಗೆ ರಾಜ್ಯ ಸರ್ಕಾರದ ಕೆಲ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ಕಲೆಹಾಕಲಾಗುತ್ತಿದೆ’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ಜಿಲ್ಲಾ ಸಮಿತಿ

ಒಂದನೇ ಪುಟದಿಂದ...

ಮಾರ್ಗಸೂಚಿ: ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪರಿಸರ (ರಕ್ಷಣೆ) ಕಾಯ್ದೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳಡಿ ಪ್ಲಾಸ್ಟಿಕ್ ಪ್ಯಾಕೇಜಿಂಗ್‌ಗಾಗಿ ಇಪಿಆರ್ ಕುರಿತ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) ಉತ್ಪಾದಕರು, ಆಮದುದಾರರು, ಬ್ರ್ಯಾಂಡ್ ಮಾಲೀಕರು (ಪಿಐಬಿಒ), ಪ್ಲಾಸ್ಟಿಕ್ ತ್ಯಾಜ್ಯ ಮರು ಬಳಕೆದಾರರು, ಪ್ಲಾಸ್ಟಿಕ್ ತ್ಯಾಜ್ಯದಿಂದ ಇಂಧನ ಸಂಸ್ಕಾರಕರ ನೋಂದಣಿ ಪ್ರಕ್ರಿಯೆಯನ್ನು ಕೇಂದ್ರೀಕೃತಗೊಳಿಸಿ, ಇಪಿಆರ್ ಪೋರ್ಟಲ್ ಪ್ರಾರಂಭಿಸಿದೆ. ಇದರಂತೆ ನೋಂದಣಿ ಅರ್ಜಿ ಪ್ರಕ್ರಿಯೆ ಪೂರ್ಣಗೊಳಿಸಲು ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ನಿರ್ದೇಶನ ನೀಡಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ರಾಮನಗರ
ಅಸಲು ದಾವಾ ಸಂಖ್ಯೆ: 217 /2020
ವಾದಿಗಳು ಶಿವಣ್ಣ ಮತ್ತು ಇತರರು
– ವಿರುದ್ಧ
ಪ್ರತಿವಾದಿಗಳು ಇಂದ್ರಮ್ಮ ಮತ್ತು ಇತರರು 5, ಮೆಸರ್ಸ್ ಬ್ಲೂಜಾಯ್ ಲ್ಯಾಂಡ್, ಎಲ್.ಎಲ್.ಪಿ. ಪ್ರತಿನಿಧಿಸುವವರು ಪ್ರದೀಪ್ ಕೃಷ್ಣಪ್ಪ ಕಛೇರಿ ನಂ.39, ಎಂ.ಹೆಚ್. ಟವರ್, ರೈಲ್ವೆ ಪ್ಯಾರಲೆಲ್ ರೋಡ್, ನೆಹರುನಗರ, ಶೇಷಾದ್ರಿಪುರಂ, ಬೆಂಗಳೂರು–560020.
ಪ್ರತಿಕಾ ಪ್ರಕಟಣೆ
ಈ ದಾವೆಯ ವಾದಿಗಳು ಪ್ರತಿವಾದಿಗಳ ವಿರುದ್ಧ ಹಕ್ಕು ಘೋಷಣೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ 5ನೇ ಪ್ರತಿವಾದಿಗೆ ಈ ನ್ಯಾಯಾಲಯದಿಂದ ನೋಂದಣಿ ಅಂಚೆ ಮೂಲಕ, ಸಮನ್ಸ್ ನೀಡಿದ್ದರೂ ಕೂಡ ಜಾರಿಯಾಗದೇ ಘನ ನ್ಯಾಯಾಲಯಕ್ಕೆ ವಾಪಸ್ಸು ಬಂದಿರುತ್ತದೆ. ಅದುದರಿಂದ ಸದರಿ 5ನೇ ಪ್ರತಿವಾದಿಯಾದ ನಿಮಗೆ ತಿಳಿಯಪಡಿಸುವುದೇನೆಂದರೆ: ಈ ದಾವೆಯ ವಿಚಾರಣಾ ದಿನಾಂಕ: 04–07–2025ರಂದು ಬೆಳಿಗ್ಗೆ 11.00 ಗಂಟೆಗೆ ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಮೇಲ್ಕಂಡ 5ನೇ ಪ್ರತಿವಾದಿಯಾದ ನೀವು ಖುದ್ದಾಗಿ ಯಾಗಲೀ ಅಥವಾ ನಿಮ್ಮ ವಕೀಲರ ಮೂಲಕ ವಾಗಲೀ ನಿಮ್ಮ ತಕರಾರನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸುವುದು, ಒಂದು ವೇಳೆ ಸದರಿ ದಿನಾಂಕದಂದು ನೀವು ಘನ ನ್ಯಾಯಾಲಯಕ್ಕೆ ಗೈರುಹಾಜರಾದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು 5ನೇ ಪ್ರತಿವಾದಿಯಾದ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾನ್ಯ ನ್ಯಾಯಾಲಯವು ಹೊರಡಿಸಿದ್ದಲ್ಲಿ ಅದಕ್ಕೆ ನೀವೇ ಹೊಣೆಗಾರರು ಎಂಬುದನ್ನು ತಿಳಿಯುವುದು.
ದಿನಾಂಕ 06–06–2025ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಆದೇಶಿಸಲಾಗಿದೆ.
ಷೆಡ್ಯೂಲ್ ಸ್ವತ್ತಿನ ವಿವರ
ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾದಾಪುರ ಗ್ರಾಮದ ಸರ್ವೆ ನಂಬರ್ 131ರಲ್ಲಿ ವಿಸ್ತೀರ್ಣ 4 ಎಕರೆ 05 ಜಮೀನಿಗೆ ಚೆಕ್ಕುಬಂಧಿ:–
ಪೂರ್ವಕ್ಕೆ: ಸರ್ವೆ ನಂಬರ್.132ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್.130 ರ ಜಮೀನು, ಉತ್ತರಕ್ಕೆ : ಹರಿಸಂದ್ರ ಗಡಿ, ದಕ್ಷಿಣಕ್ಕೆ : ಸರ್ವೆ ನಂ. 134 ರ ಜಮೀನು
ಅರ್ಜಿದಾರರ ಪರ ವಕೀಲರು,
ಜಿ.ರಾಘವೇಂದ್ರ, ವಕೀಲರು
ನ್ಯಾಯಾಲಯದ ಆದೇಶದ ಮೇರೆಗೆ
(ಶಿರಸ್ತೇದಾರರು),
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ರಾಮನಗರ

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಸೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

WANTED: COCOGURU is hiring for the position of Sales Officer, Contact 9591462200

ಉದ್ಯೋಗಾವಕಾಶ

General

WHOLESALE ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಬಾಯ್/ಸೇಲ್ಸ್ girls ಬೇಕಾಗಿದ್ದಾರೆ ಆಕರ್ಷಕ ಸಂಬಳ ಮತ್ತು ವಸತಿ ಕೊಡಲಾಗುವುದು.9AM To 9PM. 9886773818

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ

Business Offers

Finance

LOAN AVAILABLE @5% Yearly Interest Business Project Property Mortgage Agriculture Takeover Personal HomeLoan MSME Loan 8787091647Agents Welcome

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್‌ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
PUBLIC NOTICE
ಪ್ರಜಾವಾಣಿ
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
www.dhclassifieds.com
BOOK NOW
For more details contact:
+91 9886213331 | +91 9731810277
9845114560 | 080- 45557163 / 164
*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ. ಗಿರಿಗೌಡರು
ಸಂಸ್ಥಾಪಕರು ಮತ್ತು ಅಧ್ಯಕ್ಷರು
ಗಂಗೋತ್ರಿ ಸಮೂಹ ಶಿಕ್ಷಣ ಸಂಸ್ಥೆಗಳು
13ನೇ ಜನವರಿ 1950 – 18ನೇ ಜೂನ್ 2023
ನೀವು ನಮ್ಮನ್ನು ಬಿಟ್ಟು ಹೋಗಿ ಎರಡು ವರ್ಷಗಳು ಕಳೆದಿವೆ, ಆದರೂ ನೀವು ನೀಡಿದ ಮಾರ್ಗದರ್ಶನ ಮತ್ತು ಬುದ್ಧಿವಂತಿಕೆ ನಮ್ಮ ಮುಂದಿನ ಹೆಜ್ಜೆಗಳಿಗೆ ದಾರಿಯಾಗಿದೆ. ಕಾಲವು ಎಲ್ಲಾ ಗಾಯಗಳನ್ನು ಗುಣಪಡಿಸುತ್ತದೆ ಎಂದು ಹೇಳುತ್ತಾರೆ, ಆದರೆ ನಿಮ್ಮನ್ನು ಕಳೆದುಕೊಂಡ ನೋವು ಇನ್ನೂ ನಮ್ಮ ಹೃದಯದಲ್ಲಿ ಆಳವಾಗಿದೆ. ನಿಮ್ಮ ಪ್ರೀತಿ ಮತ್ತು ನೆನಪುಗಳು ಪ್ರತಿದಿನ ನಮಗೆ ಸ್ಫೂರ್ತಿ ಮತ್ತು ಸಾಂತ್ವನ ನೀಡುತ್ತಲೇ ಇರುತ್ತವೆ. ನಮ್ಮ ಹೃದಯದಲ್ಲಿ ನಿಮಗೆ ಯಾವಾಗಲೂ ವಿಶೇಷ ಸ್ಥಾನವಿರುತ್ತದೆ.
ನಾವು ನಿಮ್ಮನ್ನು ಎಂದೆಂದಿಗೂ ಪ್ರೀತಿಸುತ್ತೇವೆ.
ಇಂತಿ ದುಃಖತಪ್ತರು
ಶ್ರೀಮತಿ ಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

‘ವ್ಯಾಪಾರಕ್ಕಷ್ಟೆ ಸಿನಿಮಾ ಸೀಮಿತವಾಗಬಾರದು’

ಸುಚೇಂದ್ರ ಪ್ರಸಾದ ನಿರ್ದೇಶನದ ‘ಪದ್ಮಗಂಧಿ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ನಟ, ನಿರ್ದೇಶಕರಾಗಿ ಮೂರೂವರೆ ದಶಕಗಳನ್ನು ಪೂರೈಸಿರುವ ಅವರು ಈ ಚಿತ್ರದ ನೆಪದಲ್ಲಿ ಮಾತಿಗೆ ಸಿಕ್ಕರು...

• ವಿನಾಯಕ ಕೆ.ಎಸ್

‘ಗಂಧಕ್ಕೆ ಪರಿಮಳ ಎಂಬ ಇನ್ನೊಂದು ಅರ್ಥವಿದೆ. ಕಮಲದ ಪರಿಮಳವನ್ನು ಅರಸಿ ಹೊರಟ ಕಥೆ ಈ ‘ಪದ್ಮಗಂಧಿ’. ಪುರಾಣದಿಂದ ಹಿಡಿದು ಇಲ್ಲಿಯತನಕ ಕಮಲದ ಹೂವಿಗೆ ಇರುವ ಮಹತ್ವ, ಅದರ ವೈಶಾಲ್ಯ, ವಿಸ್ತಾರ, ವೈಚಾರಿಕ, ವೈಜ್ಞಾನಿಕ ನಿಲುವುಗಳನ್ನು ಅಧ್ಯಯನ ಮಾಡಿದವರು ಎಸ್.ಆರ್.ಲೀಲಾ. ಪ್ರಾಧ್ಯಾಪಕಿಯಾಗಿದ್ದ ಅವರು ಬಹಳ ಕಾಲ ಈ ವಿಷಯದ ಮೇಲೆ ಅಧ್ಯಯನ ಮಾಡಿದ್ದಾರೆ. ಅದಕ್ಕೊಂದು ರೂಪ ಕೊಡಬೇಕು ಎಂದು ನನ್ನ ಬಳಿ ಬಂದರು. ಆಗ ಈ ಚಿತ್ರದ ಆಲೋಚನೆ ಶುರುವಾಯಿತು’ ಎಂದು ಚಿತ್ರದ ವಿವರದೊಂದಿಗೆ ಮಾತು ಪ್ರಾರಂಭಿಸಿದರು ಸುಚೇಂದ್ರಪ್ರಸಾದ.

ಈ ಚಿತ್ರದ ಪರಿಕಲ್ಪನೆ, ನಿರ್ಮಾಣ ಎಸ್.ಆರ್ ಲೀಲಾ ಅವರದ್ದು. ಚಿತ್ರಕ್ಕೆ ಸುಚೇಂದ್ರ ಪ್ರಸಾದ ಚಿತ್ರಕಥೆ-ಸಂಭಾಷಣೆ-ನಿರ್ದೇಶನವಿದೆ. ಡಾ.ದೀಪಕ್ ಪರಮಶಿವನ್ ಸಂಗೀತ, ಎನ್. ನಾಗೇಶ್ ನಾರಾಯಣಪ್ಪ ಸಂಕಲನ, ಮನು ಯಾಪ್ಲಾರ್ ಮತ್ತು ನಾಗರಾಜ್ ಅದ್ವಾನಿ ಛಾಯಾಗ್ರಹಣವಿರುವ ಈ ಚಿತ್ರದಲ್ಲಿ ಮಹಾಪದ್ಮ, ಮೃತ್ಯುಂಜಯ ಶಾಸ್ತ್ರಿ ಪರಿಪೂರ್ಣ, ಪಂಡಿತ ಪ್ರಸನ್ನ ವೈದ್ಯ, ಡಾ. ದೀಪಕ್ ಪರಮಶಿವನ್ ಮುಂತಾದವರು ನಟಿಸಿದ್ದಾರೆ.

‘ಕಮಲ ಯಾಕೆ ರಾಷ್ಟ್ರೀಯ ಪುಷ್ಪವಾಯ್ತು, ಒಂದು ಪಕ್ಷಕ್ಕೆ ಲಾಂಛನವಾಯ್ತು, ಬ್ರಹ್ಮ ಯಾಕೆ ಇದರ ಮೇಲೆ ಕುಳಿತುಕೊಳ್ಳುತ್ತಾನೆ, ಆಯುರ್ವೇದಕ್ಕೆ ಇದು ಯಾಕೆ ಬೇಕು? ಎಂದು ನೋಡುತ್ತ ಹೋದಾಗ ಕಮಲಕ್ಕೆ 36000ಕ್ಕೂ ಹೆಚ್ಚು ಪರ್ಯಾಯ ನಾಮಗಳಿವೆ ಎಂದು ಕೇಳಿ ಅಚ್ಚರಿಯಾಯ್ತು. ಪದ್ಮ ಸಂಬಂಧಿ ಎಂಬ ಅರ್ಥದಲ್ಲಿ ಈ ಸಿನಿಮಾ ಮಾಡಲಾಗಿದೆ. ಕನ್ನಡ, ಸಂಸ್ಕೃತದಲ್ಲಿ ಚಿತ್ರೀಕರಿಸಿ, ಹಿಂದಿಗೂ ಡಬ್ ಮಾಡಲಾಗಿದೆ. ಇದರಲ್ಲಿ ರಂಜನೆ, ಮಾಹಿತಿ ಎರಡೂ ಇವೆ. ಮಾಹಿತಿ ತುರುಕುವ ಕೆಲಸ ಮಾಡಿಲ್ಲ. ದೃಷ್ಟಾಂತಗಳಿಗೆ ಮಾಹಿತಿಯನ್ನು ಹೊಂದಿಸಿದ್ದೇವೆ. ಈ ರೀತಿ ಚಿತ್ರಗಳನ್ನು ನೋಡುವ ಒಂದು ವರ್ಗವಿದೆ. ಹೇಳದೆ ಉಳಿದ ಅನೇಕ ಸಂಗತಿಗಳನ್ನು ಇಲ್ಲಿ ಹೇಳಿದ್ದೇವೆ’ ಎನ್ನುತ್ತಾರೆ ಅವರು.

1990ರ ದಶಕದಲ್ಲಿ ಚಿತ್ರರಂಗಕ್ಕೆ ಬಂದವರು ಇವರು. ಇಲ್ಲಿವರೆಗೆ ನೂರಾರು ಸಿನಿಮಾಗಳಲ್ಲಿ ನಟಿಸಿದ್ದಾರೆ. ಎಂ.ಎಸ್.ಸತ್ಯು ಅವರ ‘ಘಳಿಗೆ’ ಚಿತ್ರದಿಂದ ಚಿತ್ರರಂಗಕ್ಕೆ ಕಾಲಿಟ್ಟರು. ‘ಕಾನೂರು ಹೆಗ್ಗಡತಿ’ ಇವರ ನಟನೆಯನ್ನು ಗುರುತಿಸಿದ ಚಿತ್ರ. ‘ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಕಲಿತು ಬಂದವನು. ಹೀಗಾಗಿ ರಂಗದ ನಂಟು ಚೆನ್ನಾಗಿತ್ತು. ಬೆಂಗಳೂರಿನ ರಾಷ್ಟ್ರೀಯ ನಾಟಕ ಶಾಲೆಯನ್ನು ಕಟ್ಟಿ ಬೆಳೆಸುವಲ್ಲಿ ನಾವೊಂದು ನಾಲ್ಕು ಮಂದಿ ಶ್ರಮ ಹಾಕಿದ್ದೆವು. ರಂಗಭೂಮಿ, ಸಿನಿಮಾ ಜತೆಗೆ ನಿರ್ದೇಶನವೂ ಸಾಗಿ ಬಂತು. ಪ್ರಯಾಣ ದೀರ್ಘ ಎನ್ನಿಸುತ್ತಿಲ್ಲ. ಹೊಸತು ಕಲಿಯಬೇಕು, ಇನ್ನಷ್ಟು ಕೆಲಸ ಮಾಡಬೇಕೆಂಬ ಮಹತ್ವಾಕಾಂಕ್ಷಿ ನಾನು. ಹೀಗಾಗಿ ಈ ಪಯಣ ಮುಂದುವರಿಯುತ್ತಲೇ ಇದೆ’ ಎಂದು ಸಿನಿಪಯಣದ ಕುರಿತು ವಿವರಿಸಿದರು.

‘ಕೆಡಿ’, ‘ಬಡವರು ಮಕ್ಕಳು ಬೆಳಿಬೇಕು’ ಮೊದಲಾದ ಸಿನಿಮಾಗಳು ಸೇರಿದಂತೆ ಸದ್ಯ 15ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ಶಕ್ತಿಯನ್ನು ಬಳಸಿಕೊಳ್ಳಬೇಕಿತ್ತು

‘ದೃಶ್ಯ ಮಾಧ್ಯಮದ ಸದ್ಬಳಕೆ ಆಗುತ್ತಿಲ್ಲ ಎಂಬ ಆಕ್ಷೇಪ ನನಗೆ ಮೊದಲಿನಿಂದಲೂ ಇದೆ. ಒಂದು ನಿಕ್ಷೇಪವನ್ನು ವ್ಯವಹಾರಕ್ಕೆ ಮಾತ್ರ ಸೀಮಿತಗೊಳಿಸಬಾರದು. ಈ ಮಾಧ್ಯಮಕ್ಕೆ ಇರುವ ಇನ್ನೊಂದಷ್ಟು ಶಕ್ತಿಯನ್ನು ಬಳಸಿಕೊಳ್ಳಬೇಕಿತ್ತು. ಹೊಟ್ಟೆ ಹೊರೆದುಕೊಳ್ಳಲು ಮಾತ್ರ ಈ ಮಾಧ್ಯಮವನ್ನು ಬಳಸಿಕೊಂಡವೇನೋ ಎಂದು ಸಾಕಷ್ಟು ಸಲ ಅನ್ನಿಸುತ್ತದೆ. ಸಾಕಷ್ಟು ಚಿತ್ರಗಳಲ್ಲಿ ಅವಕಾಶ ನೀಡಿದ್ದಾರೆ. ಅದಕ್ಕೆ ಸದಾ ಕೃತಜ್ಞ. ಆದರೆ ಹಲವು ಸಲ ಪಾತ್ರಗಳಲ್ಲಿ ಏನು ಹೇಳಬೇಕೆಂದು ಹೊರಟಿದ್ದಾರೆ ಎಂಬ ಸ್ಪಷ್ಟತೆಯೇ ಸಿನಿಮಾ ತಂಡಗಳಿಗೆ ಇಲ್ಲವೇನೋ ಅನ್ನಿಸುತ್ತದೆ. ಪಾತ್ರ ಪೋಷಣೆ ಗಟ್ಟಿಯಾಗಬೇಕು’ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಸುಚೇಂದ್ರ ಪ್ರಸಾದ

ಅಪರಾಧ ಲೋಕದ ‘ಕಮಲ್ ಶ್ರೀದೇವಿ’

ಸಂಗೀತಾ ಭಟ್

ಸಚಿನ್ ಚೆಲುವರಾಯಸ್ವಾಮಿ, ಸಂಗೀತಾ ಭಟ್ ಮುಖ್ಯಭೂಮಿಕೆಯಲ್ಲಿರುವ ‘ಕಮಲ್ ಶ್ರೀದೇವಿ’ ಚಿತ್ರದ ಟೈಟಲ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿ.ಎ ಸುನೀಲ್ ನಿರ್ದೇಶನದ ಚಿತ್ರಕ್ಕೆ ನಟ ರಾಜವರ್ಧನ್ ಕ್ರಿಯೇಟಿವ್ ಹೆಡ್ ಆಗಿದ್ದಾರೆ.

‘ಸಿನಿಮಾ ಆರಂಭದಲ್ಲಿ ನಡೆಯುವ ಒಂದು ಅಪರಾಧವನ್ನು ಯಾರು ಮಾಡಿದ್ದಾರೆ? ಎಂಬುದರ ಹಿಂದೆ ಇದರ ಕಥೆ ಸುತ್ತುತ್ತದೆ. ನಾನು ಕಮಲ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸಂಗೀತಾ ಭಟ್ ಶ್ರೀದೇವಿಯಾಗಿದ್ದಾರೆ. ಕನ್ನಡ ಸಿನಿಮಾ ನಿರ್ದೇಶಕ ಹಾಗೂ ಕನ್ನಡಾಭಿಮಾನಿಯಾಗಿರುವ ಕಮಲ್ ಒಂದು ಸನ್ನಿವೇಶದಲ್ಲಿ ಹಲವರನ್ನು ಭೇಟಿಯಾಗುತ್ತಾರೆ. ಯಾಕೆ ಭೇಟಿಯಾಗುತ್ತಾರೆ? ಈ ಸಿನಿಮಾದಲ್ಲಿ ನಡೆಯುವ ಒಂದು ಕ್ರೈಂಗೂ ಅವರಿಗೂ ಏನು ಸಂಬಂಧ ಎಂಬುದೇ ಚಿತ್ರದ ಒನ್‌ಲೈನ್ ಸ್ಟೋರಿ’ ಎಂದರು ಸಚಿನ್.

ಸಚಿನ್ ಚೆಲುವರಾಯಸ್ವಾಮಿ

‘ಮಮ್ಮಿ’ ಖ್ಯಾತಿಯ ಲೋಹಿತ್ ಈ ಕಥೆಯ ಎಳೆ ಕೊಟ್ಟರೆ, ‘ಗೊಂಬೆಗಳ ಲವ್’ ಚಿತ್ರದ ಸಂತೋಷ್ ‘ಕಮಲ್ ಶ್ರೀದೇವಿ’ ಎಂಬ ಶೀರ್ಷಿಕೆ ಕೊಟ್ಟರು. ಎರಡು ವರ್ಷಗಳ ಹಿಂದೆ ಪ್ರಾರಂಭಗೊಂಡ ಈ ಚಿತ್ರದ ಕೊನೆಯ ಹಂತದ ಚಿತ್ರೀಕರಣ ಬಾಕಿಯಿದೆ. ಇದೇ ವರ್ಷ ತೆರೆಗೆ ಬರಲಿದೆ’ ಎಂದು ರಾಜವರ್ಧನ್ ತಿಳಿಸಿದರು.

ಸ್ವರ್ಣಾಂಬಿಕ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಶ್ರೀಮತಿ ಬಿ.ಕೆ ಧನಲಕ್ಷ್ಮೀ ಬಂಡವಾಳ ಹೂಡಿದ್ದಾರೆ. ಕೀರ್ತನ್ ಅವರ ಸಂಗೀತ, ನಾಗೇಶ್ ವಿ ಆಚಾರ್ಯ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ ಮಠದ್ ಸಂಕಲನವಿದೆ. ಕಿಶೋರ್, ರಮೇಶ್ ಇಂದಿರಾ ಮತ್ತಿತರರು ತಾರಾಗಣದಲ್ಲಿದ್ದಾರೆ.

ಹೊಸಬರ ‘ಬ್ಲ್ಯಾಕ್ ಶೀಪ್’

ನಿಶಾ ಹೆಗಡೆ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಬ್ಲ್ಯಾಕ್ ಶೀಪ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜೀವನ್ ಹಳ್ಳಿಕಾರ್ ಚಿತ್ರಕಥೆ, ನಿರ್ದೇಶನವಿದೆ. ಅಶ್ವಿನಿ ಗುರುಚರಣ್ ಬಂಡವಾಳ ಹೂಡಿದ್ದಾರೆ.

‘ಕ್ರೈಂ, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಸಿನಿಮಾ. ಉಪೇಂದ್ರ ಅಭಿಮಾನಿಯಾಗಿ, ಅವರಿಂದ ಸ್ಫೂರ್ತಿಗೊಂಡು ಈ ಸಿನಿಮಾ ಮಾಡಿರುವೆ. ಒಂದಷ್ಟು ನೈಜ ಘಟನೆಗಳನ್ನು ಸಿನಿಮಾದಲ್ಲಿ ಬಳಸಲಾಗಿದೆ. ನಾಯಕ ಮತ್ತು ಖಳನಾಯಕನ ನಡುವೆ ನಡೆಯುವ ಸಂಘರ್ಷದಲ್ಲಿ ನಾಯಕನಿಗೆ ಬದುಕಿನ ಕೆಲ ಘಟನೆಗಳು ಮರೆತು ಹೋಗುತ್ತವೆ. ನಾಯಕ ಹಾಗೆ ಮರೆತ ವಿಷಯಗಳನ್ನು ಹುಡುಕಲು ಯಾವ ರೀತಿ ಪ್ರಾರಂಭಿಸುತ್ತಾನೆ ಎಂಬುದೇ ಚಿತ್ರಕಥೆ. ಬೆಂಗಳೂರು, ಮಂಗಳೂರು, ಮುಂಬೈ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ’ ಎಂದರು ನಿರ್ದೇಶಕರು.

ವಿಶಾಲ್ ಕಿರಣ್‌ಗೆ ಶಿವಾಂಗಿ ದಾವೆ ಜೋಡಿಯಾಗಿದ್ದಾರೆ. ಖಳನಾಗಿ ಪ್ರಶಾಂತ್.ವಿ.ಹರಿ ನಟಿಸಿದ್ದಾರೆ. ನಿಶಾ ಹೆಗಡೆ, ಸಿದ್ಲುಂಗು ಶ್ರೀಧರ್, ಕೃಷ್ಣ ಹೆಬ್ಬಾಳೆ, ಸುಂದರ್ ವೀಣಾ, ಪುನೀತ್, ದೀಪಿಕಾ ಅಡ್ತಲೆ ಮುಂತಾದವರು ಅಭಿನಯಿಸಿದ್ದಾರೆ. ಅಭಿಜಿತ್ ಮಹೇಶ್-ಶೈಲೇಶ್ ಕುಮಾರ್ ಸಾಹಿತ್ಯದ ಗೀತೆಗಳಿಗೆ ಸಿದ್ಧಾರ್ಥ್ ಕಾಮತ್ ಸಂಗೀತ ಸಂಯೋಜಿಸಿದ್ದಾರೆ. ದೇವು ಛಾಯಾಚಿತ್ರಗ್ರಹಣ, ಎಸ್.ಆಕಾಶ್ ಮಹೇಂದ್ರಕರ್ ಸಂಕಲನವಿದೆ.

ಚಿಟಿಕೆ ಸುದ್ದಿ

ವಿದ್ಯುತ್ ಕಳವು ₹6 ಲಕ್ಷ ಠೇವಣಿ ಇಟ್ಟ ಎಸ್‌ಪಿ ಸಂಸದ

ಸಂಭಲ್, ಉತ್ತರ ಪ್ರದೇಶ (ಪಿಟಿಐ): ವಿದ್ಯುತ್ ಕಳ್ಳತನ ಪ್ರಕರಣದ ಸಂಬಂಧ ಹೈಕೋರ್ಟ್ ಆದೇಶದಂತೆ ಸಮಾಜವಾದಿ ಪಕ್ಷದ ಸಂಸದ ಜಿಯಾಉರ್ ರೆಹಮಾನ್ ಬರ್ಗ್ ಅವರು, ವಿದ್ಯುತ್ ಇಲಾಖೆಯಲ್ಲಿ ಮಂಗಳವಾರ ₹6 ಲಕ್ಷವನ್ನು ಠೇವಣಿ ಇರಿಸಿದರು.

ಠೇವಣಿ ಇರಿಸಿದ ಹಿಂದೆಯೇ ಸಂಸದರ ಮನೆಗೆ ವಿದ್ಯುತ್ ಸಂಪರ್ಕವನ್ನು ಮರುಕಲ್ಪಿಸಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. 2023ರಲ್ಲಿ ಈ ಪ್ರಕರಣ ದಾಖಲಾಗಿತ್ತು.

ಇಲಾಖೆಯು 2023ರ ಡಿಸೆಂಬರ್ 17ರಂದು ಸಂಸದರ ಮನೆಗೆ ಸ್ಮಾರ್ಟ್ ಮೀಟರ್ ಅಳವಡಿಸಿತ್ತು. 19ರಂದು ತಪಾಸಣೆ ನಡೆಸಿದಾಗ ವಿದ್ಯುತ್ ಕಳವು ಆಗುತ್ತಿರುವುದು ದೃಢಪಟ್ಟಿತ್ತು. ಹಿಂದೆಯೇ ಇಲಾಖೆಯು ಸಂಸದರಿಗೆ ₹1.91 ಕೋಟಿ ದಂಡ ವಿಧಿಸಿತ್ತು. ದಂಡ ವಿಧಿಸಿದ ಕ್ರಮವನ್ನು ಸಂಸದರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಸಾಮೂಹಿಕ ಅತ್ಯಾಚಾರ: ಹತ್ತು ಮಂದಿ ಬಂಧನ

ಭುವನೇಶ್ವರ್/ಬೆಹ್ರಾಂಪುರ, ಒಡಿಶಾ (ಪಿಟಿಐ): ಇಲ್ಲಿನ ಗೋಪಾಲ್‌ಪುರ್ ಕಡಲತೀರದಲ್ಲಿ 20 ವರ್ಷದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪದ ಮೇಲೆ 10 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ.

ಭಾನುವಾರ ರಾತ್ರಿ ವೇಳೆ ಘಟನೆ ನಡೆದಿದೆ. ರಾಜಾ ಉತ್ಸವದ ಸಂದರ್ಭದಲ್ಲಿ ಪದವಿ ವಿದ್ಯಾರ್ಥಿನಿಯು ತನ್ನ ಗೆಳೆಯನ ಜೊತೆ ಕಡಲತೀರಕ್ಕೆ ತೆರಳಿದ್ದಳು. ‘ಖಾಲಿ ಜಾಗದಲ್ಲಿ ಇಬ್ಬರೇ ಕೂತಿದ್ದ ವೇಳೆ 10 ಯುವಕರು ಸುತ್ತುವರಿದು ಸಾಮೂಹಿಕ ಅತ್ಯಾಚಾರವೆಸಗಿದರು’ ಎಂದು ಗೋಪಾಲ್‌ಪುರ ಪೊಲೀಸ್ ಠಾಣೆಗೆ ಯುವತಿ ನೀಡಿದ ದೂರಿನಲ್ಲಿ ತಿಳಿಸಿದ್ದಾಳೆ.

‘ಮೊದಲು ಏಳು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿತ್ತು. ನಂತರ, ಎಲ್ಲ 10 ಮಂದಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಆರೋಪಿಗಳು ಬೇರೆ ರಾಜ್ಯಕ್ಕೆ ಪರಾರಿಯಾಗಲು ಯತ್ನಿಸಿದ ವೇಳೆ ಅವರನ್ನು ಬಂಧಿಸಲಾಗಿದೆ. ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ’ ಎಂದು ಹೇಳಿದರು.

ಪ್ರಕರಣ ಕುರಿತು ಪ್ರತಿಕ್ರಿಯಿಸಿರುವ ಉಪ ಮುಖ್ಯಮಂತ್ರಿ ಪ್ರವತಿ ಪರಿದಾ, ‘ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸರವಣ ವಿವೇಕ್ ಜೊತೆ ಮಾತುಕತೆ ನಡೆಸಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದರು.

‘ಪೈಲಟ್‌ಗಳ ತರಬೇತಿ ಮಾಹಿತಿ ನೀಡಿ’

ಏರ್ ಇಂಡಿಯಾಕ್ಕೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ ಸೂಚನೆ

ನವದೆಹಲಿ (ರಾಯಿಟರ್ಸ್): ದುರಂತಕ್ಕೀಡಾದ ವಿಮಾನ ಪೈಲಟ್‌ಗಳ ತರಬೇತಿಯ ಮಾಹಿತಿ ಹಾಗೂ ಹಾರಾಟಕ್ಕೆ ಅನುಮತಿ ಕೊಟ್ಟ ಸಿಬ್ಬಂದಿಯ ವಿವರ ನೀಡುವಂತೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಏರ್ ಇಂಡಿಯಾಕ್ಕೆ ಸೂಚಿಸಿದೆ.

‘ದೇಶದಲ್ಲಿರುವ ಎಲ್ಲ ಫ್ಲೈಯಿಂಗ್ ಶಾಲೆಗಳು ತರಬೇತಿ ಪ್ರಕ್ರಿಯೆಯನ್ನು ನಿರಂತರವಾಗಿ ಪರಿಶೀಲನೆ ನಡೆಸಬೇಕು’ ಎಂದು ಗೋಪ್ಯ ಮಾಹಿತಿ ‘ರಾಯಿಟರ್ಸ್’ಗೆ ಲಭ್ಯವಾಗಿದೆ.

ಅಪಘಾತದ ಕುರಿತು ತನಿಖೆ ಕೈಗೆತ್ತಿಕೊಂಡಿರುವ ಡಿಜಿಸಿಎ ಈ ಸಂಬಂಧ ಮಾಹಿತಿ ಕೇಳಿದೆ. ಕಳೆದ ಕೆಲವು ತಿಂಗಳಿಂದ ತನ್ನ ಸೂಚನೆಯ ನಂತರ ತೆಗೆದುಕೊಂಡ ಕ್ರಮಗಳ ಬಗ್ಗೆ ಸೋಮವಾರದ ಒಳಗಾಗಿ ಮಾಹಿತಿ ನೀಡಬೇಕು ಎಂದು ತಿಳಿಸಿದೆ. ಆದರೆ, ಡಿಜಿಸಿಎ ಸೂಚನೆಯನ್ನು ಏರ್ ಇಂಡಿಯಾ ಪಾಲನೆ ಮಾಡಿದೆಯೇ ಎಂಬುದು ತಿಳಿದುಬಂದಿಲ್ಲ. ಈ ಬಗ್ಗೆ ಏರ್‌ಲೈನ್ಸ್, ಡಿಜಿಸಿಎ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪೈಲಟ್ ಸುಮೀತ್ ಸಭರ್ವಾಲ್ ಅವರು 8,200 ಗಂಟೆ ಹಾರಾಟ ನಡೆಸಿದ ಅನುಭವ ಹೊಂದಿದ್ದು, ಸಹ ಪೈಲಟ್ ಕ್ಲೈವ್ ಕುಂದರ್ 1,100 ಗಂಟೆಗಳ ಹಾರಾಟ ನಡೆಸಿದ್ದರು ಎಂದು ಭಾರತ ಸರ್ಕಾರವು ಈಗಾಗಲೇ ತಿಳಿಸಿದೆ.

ಪೈಲಟ್‌ಗಳಿಗೆ ನೀಡಿದ ತರಬೇತಿ, ಅದನ್ನು ಪುರಸ್ಕರಿಸುವ ದಾಖಲೆಗಳು, ವಿಮಾನ ಹಾರಾಟಕ್ಕೆ ಅನುಮತಿ ನೀಡಿದ ಮಾಹಿತಿ ನೀಡುವಂತೆ ಕೋರಿದೆ. ಸಾಮಾನ್ಯವಾಗಿ ಯಾವುದೇ ವಿಮಾನ ಅಪಘಾತ ಸಂಭವಿಸಿದ ವೇಳೆ, ಪೈಲಟ್‌ಗಳ ತರಬೇತಿ, ಅರ್ಹತೆ, ವಿಮಾನಗಳ ಇತಿಹಾಸ, ವೈದ್ಯಕೀಯ ದಾಖಲೆಗಳು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಂಡಿರುವ ಬಗ್ಗೆ ಮಾಹಿತಿ ಪಡೆಯುವ ಪದ್ಧತಿಯಿದೆ.

ಏರ್ ಇಂಡಿಯಾದ ದೈನಂದಿನ ಕಾರ್ಯಾಚರಣೆ ಕುರಿತಂತೆ ‘ಜ್ಞಾಪನಾ ಪತ್ರ (ಮೆಮೊ)’ದಲ್ಲಿ ಉಲ್ಲೇಖಿಸಿಲ್ಲ. ಅಪಘಾತದ ನಂತರ ಪ್ರಮುಖ ಮಾಹಿತಿಗಳನ್ನಷ್ಟೇ ಕೇಳಿದೆ. ವಿಮಾನ ಹಾರಾಟಕ್ಕೆ ಸಿದ್ಧತೆ ನಡೆಸಿ, ಒಪ್ಪಿಗೆ ಸೂಚಿಸಿದವರು, ಹವಾಮಾನ ಪರಿಸ್ಥಿತಿ, ವಾಯು ಮಾರ್ಗದ ಸ್ಥಿತಿ ಹಾಗೂ ಪೈಲಟ್‌ಗಳ ಜೊತೆ ನಿರಂತರ ಸಂವಹನ ನಡೆಸಿದವರ ಕುರಿತು ಮಾಹಿತಿ ನೀಡಲು ಡಿಜಿಸಿಎ ತಿಳಿಸಿದೆ.

ಸ್ಟೀಫನ್ ಭೇಟಿ: ಈ ಬೆಳವಣಿಗೆ ಬೆನ್ನಲ್ಲೇ, ಬೋಯಿಂಗ್ ವಾಣಿಜ್ಯ ವಿಭಾಗಗಳ ಮುಖ್ಯಸ್ಥ ಸ್ಟೀಫನ್ ಪೋಪ್ ಅವರು ಸೋಮವಾರ ನವದೆಹಲಿಯಲ್ಲಿರುವ ಏರ್ ಇಂಡಿಯಾ ಕಚೇರಿಗೆ ಭೇಟಿ ನೀಡಿದ್ದು, ವಿಮಾನ ಅಪಘಾತದ ಕುರಿತಂತೆ ಏರ್ ಇಂಡಿಯಾ ಮುಖ್ಯಸ್ಥರ ಜೊತೆ ವಿಸ್ತೃತವಾಗಿ ಚರ್ಚೆ ನಡೆಸಿದ್ದಾರೆ.

ಮುಖ್ಯಾಂಶಗಳು

- ಏರ್‌ಲೈನ್ಸ್‌ನಿಂದ ಸಿಬ್ಬಂದಿ ಮಾಹಿತಿ ಸಂಗ್ರಹ
- ಫ್ಲೈಯಿಂಗ್ ಶಾಲೆ, ವಿಮಾನ ನಿಲ್ದಾಣಗಳಲ್ಲಿ ಪರಿಶೀಲನೆಗೆ ಸೂಚನೆ
- ಪೈಲಟ್‌ಗೆ 8,200 ಗಂಟೆ ಹಾರಾಟದ ಅನುಭವ

ಏರ್ ಇಂಡಿಯಾವನ್ನು ಅತ್ಯಂತ ಸುರಕ್ಷಿತ ವಿಮಾನಯಾನ ಸಂಸ್ಥೆಯನ್ನಾಗಿ ಬದಲಿಸಲು ಈ ದುರಂತವು ವೇಗವರ್ಧಕವಾಗಲಿ

ಎನ್.ಚಂದ್ರಶೇಖರನ್, ಏರ್ ಇಂಡಿಯಾ ಮುಖ್ಯಸ್ಥ

ಪತನಕ್ಕೂ ಮುನ್ನ ಸಕ್ರಿಯವಾಗಿದ್ದ ಆರ್‌ಎಟಿ

ನವದೆಹಲಿ: ವಿಮಾನವು ಪತನಗೊಳ್ಳುವ ಮುನ್ನ, ಮೂರು ತುರ್ತು ಸಂದರ್ಭಗಳಲ್ಲಿ ಮಾತ್ರ ತೆರೆದುಕೊಳ್ಳುವ ವಿಮಾನದ ರ್‍ಯಾಮ್ ಏರ್ ಟರ್ಬೈನ್ (ಆರ್‌ಎಟಿ) ಸಾಧನವು ಸಕ್ರಿಯವಾಗಿತ್ತು ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ಜೂನ್ 12ರಂದು ವಿಮಾನ ಪತನಕ್ಕೂ ಕೆಲವೇ ಕ್ಷಣ ಮುನ್ನ ಚಿತ್ರೀಕರಿಸಲಾದ ವಿಡಿಯೊದಲ್ಲಿ ವಿಮಾನದ ರ್‍ಯಾಮ್ ಏರ್ ಟರ್ಬೈನ್ ಸಾಧನವು ತೆರೆದುಕೊಂಡಿರುವುದು ಕಾಣುತ್ತದೆ. ಸಾಮಾನ್ಯವಾಗಿ ವಿಮಾನದ ಎರಡೂ ಎಂಜಿನ್‌ಗಳು ವಿಫಲವಾದಾಗ ಅಥವಾ ಎಲೆಕ್ಟ್ರಾನಿಕ್ ಅಥವಾ ಹೈಡ್ರಾಲಿಕ್ ವ್ಯವಸ್ಥೆ ವಿಫಲವಾದಾಗ ಮಾತ್ರ ಈ ಸಾಧನ ಸ್ವಯಂಚಾಲಿತವಾಗಿ ಸಕ್ರಿಯವಾಗುತ್ತದೆ. ಆರ್‌ಎಟಿ ಸಾಧನವು ಸಕ್ರಿಯಗೊಳ್ಳುವಾಗ ಕೇಳುವ ಶಬ್ದವೂ ಸಹ ವಿಡಿಯೊದಲ್ಲಿ ದಾಖಲಾಗಿದೆ. ಹೀಗಾಗಿ ವಿಮಾನ ಪತನಕ್ಕೆ ವಿಮಾನದ ಎರಡೂ ಎಂಜಿನ್‌ಗಳು ವಿಫಲವಾಗಿರುವುದು ಅಥವಾ ಅದರ ಎಲೆಕ್ಟ್ರಾನಿಕ್ ಅಥವಾ ಹೈಡ್ರಾಲಿಕ್ ವ್ಯವಸ್ಥೆಯ ವೈಫಲ್ಯವೇ ಕಾರಣವಿರಬಹುದು ಎಂದು ವರದಿ ತಿಳಿಸಿದೆ.

ಗಂಭೀರ ಸಮಸ್ಯೆಗಳಿಲ್ಲ: ಡಿಜಿಸಿಎ

ನವದೆಹಲಿ: ಏರ್ ಇಂಡಿಯಾದ 33 ಡ್ರೀಮ್‌ಲೈನರ್ ವಿಮಾನಗಳ ಪೈಕಿ 24ರಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಯಾವುದೇ ಗಂಭೀರ ಸಮಸ್ಯೆಗಳು ಕಂಡುಬಂದಿಲ್ಲ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಮಂಗಳವಾರ ಹೇಳಿದೆ.

ಜೂ.12ರಂದು ನಡೆದ ವಿಮಾನ ದುರಂತದ ಬಳಿಕ ಡ್ರೀಮ್‌ಲೈನರ್ ವಿಮಾನಗಳ ಪರಿಶೀಲನೆಯನ್ನು ಡಿಜಿಸಿಎ ಕೈಗೆತ್ತಿಕೊಂಡಿತ್ತು. ಪರಿಶೀಲನೆ ವೇಳೆ ವಿಮಾನ ಮತ್ತು ಸಂಬಂಧಿತ ನಿರ್ವಹಣಾ ವ್ಯವಸ್ಥೆಗಳು ಅಸ್ತಿತ್ವದಲ್ಲಿರುವ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿಯೇ ಇರುವುದು ಕಂಡುಬಂದಿದೆ ಎಂದು ಡಿಜಿಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಬಾಲ್ಕನಿಯಿಂದ ಜಿಗಿಯಲು ಯತ್ನಿಸಿದ್ದ ಜನ

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನವು ಅಹಮದಾಬಾದ್‌ನ ಬಿ.ಜೆ. ವೈದ್ಯಕೀಯ ಕಾಲೇಜಿನ ಐದು ಅಂತಸ್ತಿನ ಕಟ್ಟಡಕ್ಕೆ ಅಪ್ಪಳಿಸಿದ ನಂತರ ಗಾಬರಿಗೊಂಡ ಅಲ್ಲಿನ ನಿವಾಸಿಗಳು ಕಟ್ಟಡದ ಬಾಲ್ಕನಿಯಿಂದ ಕೆಳಗೆ ಜಿಗಿಯಲು ಅಥವಾ ಇಳಿಯಲು ಮುಂದಾದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಪತನಗೊಂಡ ಸ್ಥಳದಲ್ಲಿ ದಟ್ಟ ಹೊಗೆ ಆವರಿಸಿರುವ ನಡುವೆಯೇ ಮಹಿಳೆಯೊಬ್ಬರು ಕಂಬಿಗಳನ್ನು ಹಿಡಿದು ಬಾಲ್ಕನಿಯಿಂದ ಇಳಿಯಲು ಮುಂದಾಗಿರುವ ದೃಶ್ಯ ವಿಡಿಯೊದಲ್ಲಿದೆ.

ಕ್ಯಾಂಪಸ್ ಆವರಣದಲ್ಲಿ ನಿಂತಿದ್ದ ಕೆಲವರು ಇದನ್ನು ಕಂಡು ಆತಂಕದಿಂದ ಕೂಗುವ ಹಾಗೂ ಮಹಿಳೆಯ ರೀತಿಯೇ ಮತ್ತೊಬ್ಬ ವ್ಯಕ್ತಿ ಸಹ ಬಾಲ್ಕನಿಯಿಂದ ಜಿಗಿಯುವ ದೃಶ್ಯವೂ ವಿಡಿಯೊದಲ್ಲಿ ಸೆರೆಯಾಗಿದೆ.

ಸುಮೀತ್ ಅಂತ್ಯಕ್ರಿಯೆ

ಮುಂಬೈ (ಪಿಟಿಐ): ಅಹಮದಾಬಾದ್‌ನಲ್ಲಿ ಕಳೆದ ವಾರ ಪತನಗೊಂಡ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ ಪೈಲಟ್ ಸುಮೀತ್ ಸಭರ್ವಾಲ್ ಅವರ ಅಂತ್ಯಸಂಸ್ಕಾರವನ್ನು ಮಂಗಳವಾರ ಮುಂಬೈನಲ್ಲಿ ನೆರವೇರಿಸಲಾಯಿತು.

ಚಾಕಲಾದಲ್ಲಿ ವಿದ್ಯುತ್ ಚಿತಾಗಾರದಲ್ಲಿ ಕುಟುಂಬಸ್ಥರ ಸಮ್ಮುಖದಲ್ಲಿ ಅಂತಿಮಸಂಸ್ಕಾರ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ಸುಮೀತ್ ಅವರ ಪಾರ್ಥಿವ ಶರೀರವನ್ನು ಮಂಗಳವಾರ ಬೆಳಿಗ್ಗೆ ಅಹಮದಾಬಾದ್‌ನಿಂದ ಮುಂಬೈಗೆ ವಿಮಾನದ ಮೂಲಕ ಕೊಂಡೊಯ್ಯಲಾಗಿತ್ತು. ಸುಮೀತ್ ಅವರ ನಿವಾಸದ ಎದುರು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಕುಟುಂಬಸ್ಥರು, ಬಂಧು-ಮಿತ್ರರು ಅಂತಿಮ ನಮನ ಸಲ್ಲಿಸಿದರು.

ಸುಮೀತ್ ಅವರಿಗೆ 8200 ಗಂಟೆ ವಿಮಾನ ಹಾರಾಟ ನಡೆಸಿದ ಅನುಭವವಿತ್ತು.

ಸುಮೀತ್ ಸಭರ್ವಾಲ್ ಅವರ ತಂದೆ ಪುಷ್ಕರಾಜ್ ಅವರು ಪಾರ್ಥಿವ ಶರೀರದ ಮುಂದೆ ನಿಂತು ಕಣ್ಣೀರು ಹಾಕಿದರು –ಪಿಟಿಐ ಚಿತ್ರ

120 ಮೃತದೇಹಗಳ ಹಸ್ತಾಂತರ

ಅಹಮದಾಬಾದ್ (ಪಿಟಿಐ): ಏರ್‌ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ 270 ಜನರ ಪೈಕಿ, ಈವರೆಗೆ 162 ಸಂತ್ರಸ್ತರ ಗುರುತನ್ನು ಡಿಎನ್‌ಎ ಪರೀಕ್ಷೆ ಮೂಲಕ ಪತ್ತೆ ಮಾಡಲಾಗಿದೆ. ಈ ಪೈಕಿ 120 ಮಂದಿಯ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಗುಜರಾತ್‌ನ ಗೃಹ ಸಚಿವ ಹರ್ಷ ಸಂಘ್ವಿ ಅವರು ಮಂಗಳವಾರ ತಿಳಿಸಿದರು.

ಮೃತರ ಡಿಎನ್‌ಎ ಹೊಂದಿಕೆ ಪ್ರಕ್ರಿಯೆಯು ಬುಧವಾರ ಬೆಳಿಗ್ಗೆ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ವೈದ್ಯಕೀಯ ಸೂಪರಿಂಟೆಂಡೆಂಟ್ ರಾಕೇಶ್ ಜೋಶಿ ಅವರು ತಿಳಿಸಿದರು.

ದುರಂತದಲ್ಲಿ ಮೃತಪಟ್ಟ ಆಕಾಶ್ ಪಾಟ್ನಿ ಅವರ ಮೃತದೇಹ ಹಸ್ತಾಂತರ ಸಂದರ್ಭದಲ್ಲಿ ಕುಟುಂಬಸ್ಥರು ದುಃಖಿಸಿದರು –ಪಿಟಿಐ ಚಿತ್ರ

ಗುರುತು ಪತ್ತೆಗಾಗಿ 250 ಮೃತದೇಹಗಳ ಮಾದರಿಯನ್ನು ಪಡೆಯಲಾಗಿದೆ. ಮೃತದೇಹಗಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿರುವ ಕಾರಣ ಡಿಎನ್‌ಎ ಹೊಂದಿಕೆ ಪ್ರಕ್ರಿಯೆಯು ಕ್ಲಿಷ್ಟಕರವಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತ್ತು.

ರಘುವಂಶಿ ಕೊಲೆ: ಘಟನೆ ಮರುಸೃಷ್ಟಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಉದ್ಯಮಿ ರಾಜಾ ರಘುವಂಶಿ ಅವರ ಕೊಲೆ ಪ್ರಕರಣದ ಆರೋಪಿಗಳನ್ನು ಮೇಘಾಲಯ ಪೊಲೀಸರು ಮಂಗಳವಾರ ಸೊಹ್ರಾ ಬಳಿಯ ವೀಸಾಡೊಂಗ್ ಜಲಪಾತದ ಬಳಿ ಕರೆತಂದು, ಅಪರಾಧ ಘಟನೆಯ ಮರುಸೃಷ್ಟಿ ಮಾಡಿದ್ದಾರೆ.

ಸೋನಮ್

ಪತ್ನಿ ಸೋನಮ್ ಜತೆ ಮಧುಚಂದ್ರಕ್ಕೆ ಬಂದಿದ್ದಾಗ ಮೇ 23ರಂದು ರಾಜಾ ರಘುವಂಶಿ ಕೊಲೆಯಾಗಿದ್ದರು. ಈ ಪ್ರಕರಣದಲ್ಲಿ ಆರೋಪಿಗಳಾಗಿರುವ ಪತ್ನಿ ಸೋನಮ್, ಆಕೆಯ ಪ್ರಿಯಕರ ರಾಜ್ ಕುಶ್ವಾಹ, ವಿಶಾಲ್, ಆಕಾಶ್ ಮತ್ತು ಆನಂದ್ ಅವರನ್ನು ಪೊಲೀಸರು ಅಪರಾಧ ಕೃತ್ಯ ನಡೆದ ಸ್ಥಳಕ್ಕೆ ಕರೆತಂದಿದ್ದರು.

‘ಅಪರಾಧ ಘಟನೆಯ ಮರುಸೃಷ್ಟಿಯಿಂದ, ರಘುವಂಶಿ ಹೇಗೆ ಕೊಲೆಯಾದರು ಎಂಬುದರ ಕುರಿತು ನಮಗೆ ಹೆಚ್ಚು ಸ್ಪಷ್ಟವಾದ ಚಿತ್ರಣ ದೊರೆತಿದೆ. ಜಲಪಾತದ ವ್ಯೂ ಪಾಯಿಂಟ್‌ನಿಂದ ಕಂದಕಕ್ಕೆ ತಳ್ಳುವ ಮೊದಲು ರಘುವಂಶಿ ತಲೆಗೆ ಎರಡು ಮಚ್ಚುಗಳಿಂದ ಹೇಗೆ ಹೊಡೆಯಲಾಗಿದೆ ಎಂಬುದನ್ನು ಆರೋಪಿಗಳು ತೋರಿಸಿದ್ದಾರೆ. ಕೃತ್ಯಕ್ಕೆ ಬಳಸಿದ ಒಂದು ಮಚ್ಚು ವಶಪಡಿಸಿಕೊಳ್ಳಲಾಗಿದೆ’ ಎಂದು ಪೂರ್ವ ಖಾಸಿ ಹಿಲ್ಸ್ ಎಸ್‌ಪಿ ವಿವೇಕ್ ಸೈಯೆಮ್ ತಿಳಿಸಿದರು.

‘ಪತಿ ಕೊಲೆಯಾಗುತ್ತಿರುವುದನ್ನು ಸೋನಮ್ ಪಕ್ಕದಲ್ಲೇ ನಿಂತು ನೋಡುತ್ತಿದ್ದಳು. ರಘುವಂಶಿಗೆ ಮೊದಲು ವಿಶಾಲ್ ಹೊಡೆದಿದ್ದಾನೆ. ಆ ಬಳಿಕ ಆನಂದ್ ಮತ್ತು ಆಕಾಶ್ ಅವರೂ ಹಲ್ಲೆ ಮಾಡಿದ್ದಾರೆ. ಪತಿಯ ತಲೆಗೆ ಬಿದ್ದ ಏಟಿನಿಂದ ರಕ್ತ ಸುರಿಯತೊಡಗಿದಾಗ ಸೋನಮ್ ಸ್ಥಳದಿಂದ ದೂರ ಹೋದಳು’ ಎಂದು ವಿವರಿಸಿದರು.

‘ಭಾಷೆ ಆಧಾರದಡಿ ದೇಶ ವಿಭಜನೆ ಅಸಾಧ್ಯ’

ಪುದುಚೆರಿ (ಪಿಟಿಐ): ‘ಭಾರತವು ಭಾಷೆಗಳ ಆಧಾರದ ಮೇಲೆ ವಿಭಜನೆಯಾಗಲು ಸಾಧ್ಯವಿಲ್ಲ’ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಮಂಗಳವಾರ ಪ್ರತಿಪಾದಿಸಿದರು.

ಜಗದೀಪ್ ಧನಕರ್

ಪುದುಚೆರಿ ವಿಶ್ವವಿದ್ಯಾಲಯದಲ್ಲಿ ಮಾತನಾಡಿದ ಅವರು, ‘ರಾಷ್ಟ್ರೀಯ ಶಿಕ್ಷಣ ನೀತಿ– 2020 ಶಿಕ್ಷಣ ಕ್ಷೇತ್ರದ ಗೇಮ್ ಚೇಂಜರ್ ಆಗಿದ್ದು, ದೇಶವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಉತ್ತೇಜಿಸುತ್ತದೆ. ಹೀಗಾಗಿ, ಈ ನೀತಿಯನ್ನು ಎಲ್ಲ ರಾಜ್ಯಗಳೂ ಅಳವಡಿಸಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಕಳೆದ ಒಂದು ದಶಕದಿಂದ ಕೈಗೊಂಡ ಅಭಿವೃದ್ಧಿ ಕಾರ್ಯಗಳಿಂದಾಗಿ ಭಾರತವು ವಿಶ್ವದ ಮಹತ್ವಾಕಾಂಕ್ಷಿ ರಾಷ್ಟ್ರವಾಗಿದೆ. ಭಾಷೆಗಳ ಆಧಾರದ ಮೇಲೆ ದೇಶವನ್ನು ಹೇಗೆತಾನೆ ವಿಭಜಿಸಲಾದೀತು’ ಎಂದು ಪ್ರಶ್ನಿಸಿದರು.

‘ಭಾಷೆಗಳ ವಿಷಯದಲ್ಲಿ ಜಗತ್ತಿನ ಯಾವುದೇ ದೇಶವೂ ಭಾರತದಷ್ಟು ಶ್ರೀಮಂತವಾಗಿಲ್ಲ. ಸಂಸ್ಕೃತವು ಜಾಗತಿಕ ಮಹತ್ವ ಹೊಂದಿದ್ದು, ತಮಿಳು, ಕನ್ನಡ, ತೆಲುಗು, ಮಲಯಾಳಂ, ಒಡಿಯಾ, ಮರಾಠಿ, ಪಾಲಿ, ಪ್ರಾಕೃತ, ಬೆಂಗಾಳಿ ಹಾಗೂ ಅಸ್ಸಾಮಿ ಭಾಷೆಗಳು ಶಾಸ್ತ್ರೀಯ ಭಾಷೆಗಳಾಗಿವೆ. ಸಂಸತ್ತಿನಲ್ಲಿ 22 ಭಾಷೆಗಳಲ್ಲಿ ಚರ್ಚಿಸಲು ಸದಸ್ಯರಿಗೆ ಅವಕಾಶ ಕಲ್ಪಿಸಲಾಗಿದೆ. ಇದು ನಮ್ಮ ಭಾಷೆಗಳ ಒಳಗೊಳ್ಳುವಿಕೆಯನ್ನು ತೋರಿಸುತ್ತದೆ’ ಎಂದು ಹೇಳಿದರು.

ಮೆಮು: ಬೋಗಿಗಳ ಸಂಖ್ಯೆ 20ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೆಮು ರೈಲುಗಳ ಸಂಖ್ಯೆಯನ್ನು 100ಕ್ಕೆ ಹೆಚ್ಚಿಸುವುದೂ ಸೇರಿದಂತೆ ರೈಲ್ವೆಯ ಆಧುನೀಕರಣದ ನಿಟ್ಟಿನಲ್ಲಿ ಕೆಲವೊಂದು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ತಿಳಿಸಿದರು.

‘ಈಗ ಇರುವ ಮೆಮು ರೈಲುಗಳು 8ರಿಂದ 12 ಬೋಗಿಗಳನ್ನು ಒಳಗೊಂಡಿದ್ದು, 16ರಿಂದ 20 ಬೋಗಿಗಳಿಗೆ ಹೆಚ್ಚಿಸಲಾಗುವುದು. ರೈಲು ಬೋಗಿಗಳ ನಿರ್ಮಾಣಕ್ಕೆ ಆಂಧ್ರ ಪ್ರದೇಶದ ಕಾಜಿಪೇಟ್‌ನಲ್ಲಿ ಹೊಸ ಕಾರ್ಖಾನೆ ಸ್ಥಾಪಿಸಲಾಗಿದೆ’ ಎಂದರು.

ನಮೋ ಭಾರತ್ ರೈಲುಗಳನ್ನು ಉಲ್ಲೇಖಿಸಿ, ‘ನಮೋ ಭಾರತ್ ರೈಲುಗಳಿಗೆ ಪ್ರಯಾಣಿಕರಿಂದ ಉತ್ತಮ ಸ್ಪಂದನ ದೊರೆತಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಇನ್ನೂ 50 ಹೊಸ ನಮೋ ಭಾರತ್ ರೈಲುಗಳ ಸಂಚಾರ ಆರಂಭಿಸಲು ಸರ್ಕಾರ ನಿರ್ಧರಿಸಿದೆ’ ಎಂದರು.

‘3 ಅಮೃತ್ ಭಾರತ್ ರೈಲುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. ಮುಂಬರುವ ದಿನಗಳಲ್ಲಿ ಇನ್ನೂ ಆರು ಅಮೃತ್ ಭಾರತ್ ರೈಲುಗಳ ಸಂಚಾರ ಪ್ರಾರಂಭಿಸಲಾಗುವುದು. 50 ಹೊಸ ರೈಲುಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ’ ಎಂದು ಹೇಳಿದರು.

ಕುಪ್ಪಂನ ನಾರಾಯಣಪುರದಲ್ಲಿ ಘಟನೆ; ಐವರ ಬಂಧನ

ಸಾಲ ತೀರಿಸದ ಪತಿ, ಮರಕ್ಕೆ ಕಟ್ಟಿ ಪತ್ನಿಗೆ ದೌರ್ಜನ್ಯ

ನಾರಾಯಣಪುರ, ಆಂಧ್ರಪ್ರದೇಶ (ಪಿಟಿಐ): ಕೈಸಾಲ ಬಾಕಿ ಉಳಿಸಿಕೊಂಡಿದ್ದ ಪ್ರಕರಣದಲ್ಲಿ ಗ್ರಾಮಸ್ಥರು ಮಹಿಳೆಯನ್ನು ಸಾರ್ವಜನಿಕವಾಗಿ ಮರಕ್ಕೆ ಕಟ್ಟಿಹಾಕಿ ಅವಮಾನಿಸಿರುವ ಕೃತ್ಯ ಆಂಧ್ರಪ್ರದೇಶದ ಕುಪ್ಪಂ ವಿಧಾನಸಭೆ ಕ್ಷೇತ್ರದ ನಾರಾಯಣಪುರದಲ್ಲಿ ನಡೆದಿದೆ.

ಸಿರಿಶಾ ದೌರ್ಜನ್ಯಕ್ಕೆ ಒಳಗಾದ ಮಹಿಳೆ. ಈಕೆಯ ಪತಿ ತಿಮ್ಮರಾಯಪ್ಪ ಎಂಬವರು ಗ್ರಾಮದ ಮುನಿಕಣ್ಣಪ್ಪ ಸೇರಿದಂತೆ ಕೆಲವರಿಂದ ಸಾಲ ಪಡೆದಿದ್ದು, ಮರಳಿಸಿರಲಿಲ್ಲ. ಬೆಂಗಳೂರಿನಲ್ಲಿದ್ದ ಮಹಿಳೆಯು ಮಕ್ಕಳ ಶಾಲಾ ವರ್ಗಾವಣೆ ಪ್ರಮಾಣಪತ್ರ ಪಡೆದುಕೊಳ್ಳಲು ಗ್ರಾಮಕ್ಕೆ ಮರಳಿದ್ದರು.

‘ತಿಮ್ಮರಾಯಪ್ಪ ಕೈಸಾಲ ತೀರಿಸಿಲ್ಲ, ಆತನನ್ನು ಗ್ರಾಮಕ್ಕೆ ಕರೆಸಬೇಕು’ ಎಂದು ಗ್ರಾಮಸ್ಥರು ಮಹಿಳೆಯನ್ನು ಮರಕ್ಕೆ ಕಟ್ಟಿಹಾಕಿದ್ದರು. ‘ಪತಿ ಬೆಂಗಳೂರಿನಲ್ಲಿ ನನ್ನನ್ನು ಒಂಟಿಯಾಗಿಸಿ, ಆರು ತಿಂಗಳ ಹಿಂದೆಯೇ ತಲೆಮರೆಸಿಕೊಂಡಿದ್ದಾರೆ’ ಎಂದು ಸಿರಿಶಾ ಪೊಲೀಸರಿಗೆ ತಿಳಿಸಿದ್ದಾರೆ.

ಮರಕ್ಕೆ ಕಟ್ಟಿ ಮಹಿಳೆ ಮೇಲೆ ದೌರ್ಜನ್ಯ ಎಸಗಿರುವ ಕುರಿತು ಪ್ರಕರಣ ದಾಖಲಿಸಿರುವ ಪೊಲೀಸರು, ಐವರನ್ನು ಬಂಧಿಸಿದ್ದಾರೆ.

ಕುಪ್ಪಂ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಈ ಕೃತ್ಯವನ್ನು ಖಂಡಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಮತ್ತು ಮಹಿಳೆಯ ಕುಟುಂಬಕ್ಕೆ ರಕ್ಷಣೆ ಒದಗಿಸಬೇಕು ಎಂದು ಸ್ಥಳೀಯ ಪೊಲೀಸರಿಗೆ ಸೂಚಿಸಿದ್ದಾರೆ.

ಕುಪ್ಪಂ ಕ್ಷೇತ್ರದ ಉಸ್ತುವಾರಿ ಹೊಣೆ ಹೊತ್ತಿರುವ ವೈಎಸ್‌ಆರ್‌ಸಿಪಿ ಮುಖಂಡ ಕೆ.ಆರ್.ಜೆ ಭರತ್ ಅವರು, ‘ಈ ದೌರ್ಜನ್ಯ ಕೃತ್ಯವು ಟಿಡಿಪಿ ನೇತೃತ್ವದ ಸರ್ಕಾರದ ಆಡಳಿತದಲ್ಲಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದಿರುವುದಕ್ಕೆ ನಿದರ್ಶನ’ ಎಂದು ಟೀಕಿಸಿದ್ದಾರೆ.

ಆಂಧ್ರಪ್ರದೇಶದ ಕಾಂಗ್ರೆಸ್ ಕಮಿಟಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ರೆಡ್ಡಿ, ಈ ಕೃತ್ಯ ಅಮಾನವೀಯ ಮತ್ತು ನಾಚಿಕೆ ಗೇಡಿನದು. ಮಹಿಳೆಗೆ ರಕ್ಷಣೆ ಸಿಗುತ್ತಿಲ್ಲ. ಈ ಕೃತ್ಯದ ಹೊಣೆಯನ್ನು ಸರ್ಕಾರವೇ ಹೊರಬೇಕು ಎಂದು ಒತ್ತಾಯಿಸಿದ್ದಾರೆ.

ದಾವೂದ್ ಇಬ್ರಾಹಿಂ ಗ್ಯಾಂಗ್‌ನ ಸದಸ್ಯ ಸಲೀಂ ಸಂಪರ್ಕವಿದ್ದ ವ್ಯಕ್ತಿ ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ಮುಂಬೈ: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಗ್ಯಾಂಗ್‌ನ ಸದಸ್ಯ ಹಾಗೂ ಶಾರ್ಪ್ ಶೂಟರ್ ಸಲೀಂ ಕುತ್ತಾ ಜೊತೆಗೆ ನಂಟು ಹೊಂದಿರುವ ನಾಸಿಕ್‌ನ ರಾಜಕಾರಣಿ ಸುಧಾಕರ್ ಬಡಗುಜರ್ ಮಂಗಳವಾರ ಬಿಜೆಪಿಗೆ ಸೇರ್ಪಡೆಯಾದರು.

ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ, ಉದ್ಯಮಿಯೂ ಆಗಿರುವ ಸುಧಾಕರ್ ಶಿವಸೇನಾ (ಯುಬಿಟಿ) ನಾಸಿಕ್ ಘಟಕದ ಮುಖ್ಯಸ್ಥರಾಗಿದ್ದರು. ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಕ್ಕಾಗಿ ಉಚ್ಚಾಟನೆಗೊಂಡಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಕಂದಾಯ ಸಚಿವ ಚಂದ್ರಶೇಖರ್ ಬಾವಂಕುಲೆ, ಕಾರ್ಯಾಧ್ಯಕ್ಷ ರವೀಂದ್ರ ಚವಾಣ್, ಸಚಿವ ಗಿರೀಶ್ ಮಹಾಜನ್ ಸಮ್ಮುಖದಲ್ಲಿ ಸುಧಾಕರ್ ಬಿಜೆಪಿಗೆ ಸೇರ್ಪಡೆಗೊಂಡರು. ಮಾಜಿ ಸಚಿವ ಬಬನ್‌ರಾವ್ ಘೋಲಾಪ್ ಕೂಡ ಇದೇ ಸಂದರ್ಭ ಪಕ್ಷ ಸೇರಿದರು.

‘ನಾಸಿಕ್‌ನಲ್ಲಿ ಅಧಿಕಾರಕ್ಕೆ ಬರಬೇಕು. ಅದಕ್ಕಾಗಿ ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಟ್ಟಾಗಿ ಕೆಲಸ ಮಾಡಬೇಕು’ ಎಂದು ಬಾವಂಕುಲೆ ಹೇಳಿದರು.

ನಾಯಕತ್ವ ಒಲ್ಲೆ ಎಂದಿದ್ದ ಬೂಮ್ರಾ

ರೋಹಿತ್ ಶರ್ಮಾ ನಿವೃತ್ತಿಗೆ ಮೊದಲೇ ಬಿಸಿಸಿಐಗೆ ನಿರ್ಧಾರ ತಿಳಿಸಿದ್ದ ವೇಗಿ

ಲೀಡ್ಸ್ (ಪಿಟಿಐ): 'ಕಾರ್ಯಭಾರ ನಿರ್ವಹಣೆಯ ಭಾಗವಾಗಿ ಐಪಿಎಲ್ ವೇಳೆಯಲ್ಲೇ ಭಾರತ ಟೆಸ್ಟ್ ತಂಡದ ನಾಯಕತ್ವ ಬೇಡವೆಂದು ಹೇಳಿದ್ದೆ' ಎಂದು ಭಾರತ ತಂಡದ ವೇಗದ ಬೌಲಿಂಗ್ ತಾರೆ ಜಸ್‌ಪ್ರೀತ್ ಬೂಮ್ರಾ ಬಹಿರಂಗಪಡಿಸಿದ್ದಾರೆ. ನಾಯಕತ್ವದ ಕರ್ತವ್ಯಕ್ಕಿಂತ ಬೌಲಿಂಗ್ ಹೊಣೆ ವಹಿಸುವುದಕ್ಕೆ ಆದ್ಯತೆ ನೀಡುವ ತಮ್ಮ ಇಚ್ಛೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ತಿಳಿಸಿದ್ದಾಗಿ ಅವರು ಹೇಳಿದ್ದಾರೆ.

ಸ್ಕೈ ಸ್ಪೋರ್ಟ್ಸ್ ಕ್ರಿಕೆಟ್ ಚಾನೆಲ್‌ನಲ್ಲಿ ಭಾರತ ತಂಡದ ಮಾಜಿ ವಿಕೆಟ್ ಕೀಪರ್– ಬ್ಯಾಟರ್ ದಿನೇಶ್ ಕಾರ್ತಿಕ್ ಅವರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದ ಬೂಮ್ರಾ, ನಾಯಕತ್ವದ ಜವಾಬ್ದಾರಿ ನಿರಾಕರಿಸಿರುವ ಹಿಂದಿನ ನಿರ್ಧಾರಕ್ಕೆ ವಿವರಣೆ ನೀಡಿದ್ದಾರೆ.

'ಇದರ ಹಿಂದೆ ದೊಡ್ಡ ಕಥೆಯೇನೂ ಇಲ್ಲ. ರೋಹಿತ್ ಮತ್ತು ವಿರಾಟ್ ಕೊಹ್ಲಿ ನಿವೃತ್ತರಾಗುವ ಮೊದಲು, ಐಪಿಎಲ್ ನಡೆಯುತ್ತಿದ್ದ ವೇಳೆಯೇ ನಾನು ಬಿಸಿಸಿಐ ಜೊತೆ ಮಾತನಾಡಿದ್ದೆ. ಐದು ಟೆಸ್ಟ್‌ಗಳ ಸರಣಿಗೆ ಪೂರ್ವಭಾವಿಯಾಗಿ ಕಾರ್ಯಭಾರದ ಬಗ್ಗೆ ಚರ್ಚಿಸಿದ್ದೆ' ಎಂದು ಬೂಮ್ರಾ ಹೇಳಿದ್ದಾರೆ.

'ನನ್ನ ಬೆನ್ನು ನೋವನ್ನು ನಿರ್ವಹಣೆ ಮಾಡುತ್ತಿದ್ದವರ ಜೊತೆಗೆ ಮಾತನಾಡಿದ್ದೆ. ಸರ್ಜನ್ ಜೊತೆಗೂ ಮಾತನಾಡಿದ್ದೆ. ಅವರು ಕಾರ್ಯದೊತ್ತಡ ನಿರ್ವಹಣೆಗೆ ಸಂಬಂಧಿಸಿ ನಾನು ಯಾವ ರೀತಿ ಇರಬೇಕು ಎಂದು ತಪ್ಪದೇ ಸಲಹೆ ನೀಡುತ್ತಿದ್ದರು' ಎಂದಿದ್ದಾರೆ.

'ಈ ಎಲ್ಲಾ ಸಮಾಲೋಚನೆಯ ನಂತರ ನಾನು ಒತ್ತಡ ರಹಿತವಾಗಿ ಇರಬೇಕೆಂಬ ಜಾಣ್ಮೆಯ ನಿರ್ಧಾರಕ್ಕೆ ಬಂದೆ. ನಂತರ ಬಿಸಿಸಿಐಗೆ ಕರೆ ಮಾಡಿ, ನಾಯಕತ್ವದ ಹೊಣೆಯಲ್ಲಿ ನನ್ನನ್ನು ಕಾಣಲು ಬಯಸುವುದಿಲ್ಲ. ಏಕೆಂದರೆ ಐದು ಟೆಸ್ಟ್‌ಗಳ ಸರಣಿಯ ಎಲ್ಲ ಪಂದ್ಯಗಳನ್ನು ಆಡಲು ನನಗೆ ಆಗದೇ ಹೋಗಬಹುದು ಎಂದು ತಿಳಿಸಿದ್ದೆ' ಎಂದು ದೇಶದ ಅಗ್ರಮಾನ್ಯ ಬೌಲರ್ ಹೇಳಿದ್ದಾರೆ.

ರೋಹಿತ್ ನಿವೃತ್ತಿಯ ನಂತರ ಮತ್ತು ಬೂಮ್ರಾ ರೇಸ್‌ನಿಂದ ಹಿಂದೆ ಸರಿದ ಕಾರಣ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಟೆಸ್ಟ್ ತಂಡಕ್ಕೆ ಶುಭಮನ್ ಗಿಲ್ ಅವರನ್ನು ನಾಯಕನನ್ನಾಗಿ ನೇಮಕ ಮಾಡಿತು. ಇದೇ 20ರಂದು ಆರಂಭವಾಗುವ ಐದು ಟೆಸ್ಟ್‌ಗಳ ಇಂಗ್ಲೆಂಡ್ ಸರಣಿ ಅವರ ಪಾಲಿಗೆ ನಾಯಕನಾಗಿ ಮೊದಲ ಸವಾಲು.

ಜಸ್‌ಪ್ರೀತ್ ಬೂಮ್ರಾ

'ನಾಯಕತ್ವದ ಹೊಣೆಗೆ ಬಿಸಿಸಿಐ ನನ್ನ ಕಡೆ ಮುಖಮಾಡಿತ್ತು. ಆದರೆ ನಾನು ಬೇಡವೆಂದೆ. ತಂಡದ ಹಿತದೃಷ್ಟಿಯಿಂದಲೂ ಅದು ಉಚಿತವಾಗಿರಲಿಲ್ಲ. ಐದು ಟೆಸ್ಟ್‌ಗಳ ಸರಣಿಯ ಮೂರು ಟೆಸ್ಟ್‌ಗಳಲ್ಲಿ ಒಬ್ಬರು, ಉಳಿದ ಎರಡು ಪಂದ್ಯಗಳಿಗೆ ಒಬ್ಬರು ನೇತೃತ್ವ ವಹಿಸುವುದು ಸರಿಯೆನಿಸುವುದಿಲ್ಲ' ಎಂದಿದ್ದಾರೆ.

'ನಾಯಕತ್ವ ಒಂದು ಹುದ್ದೆ. ನಾಯಕರಾಗುವವರು ತಂಡದಲ್ಲಿ ಸದಾ ಇರುತ್ತಾರೆ. ನಾನು ಈಗ ಎಚ್ಚರಿಕೆ ವಹಿಸದಿದ್ದರೆ, ಭವಿಷ್ಯದಲ್ಲಿ ಏನಾಗಬಹುದು ಎಂದು ಹೇಳಲಾರೆ. ಈ ಮಾದರಿಯ ಕ್ರಿಕೆಟ್‌ನಿಂದ ಅರ್ಧದಲ್ಲೇ ಹೊರಹೋಗುವಂತಹ ಪರಿಸ್ಥಿತಿ ತಂದುಕೊಳ್ಳಲು ನಾನು ಬಯಸುವುದಿಲ್ಲ' ಎಂದು ಬೂಮ್ರಾ ಎಚ್ಚರಿಕೆಯ ಮಾತನ್ನಾಡಿದ್ದಾರೆ.

ತಂಡವನ್ನು ಮುನ್ನಡೆಸುವುದು ದೊಡ್ಡ ಗೌರವ ಎಂದು ಒಪ್ಪಿಕೊಂಡಿರುವ 31 ವರ್ಷ ವಯಸ್ಸಿನ ಬೂಮ್ರಾ, ಆದರೆ ನಾಯಕತ್ವಕ್ಕಿಂತ ಈ ಆಟವನ್ನು ಹೆಚ್ಚು ಪ್ರೀತಿಸುವುದಾಗಿಯೂ ತಿಳಿಸಿದ್ದಾರೆ.

'ನಾಯಕತ್ವ ಎಂದರೆ ಬಹಳ ಹೆಚ್ಚಿನದು. ಅದಕ್ಕೆ ನಾನೂ ಪರಿಶ್ರಮ ಪಟ್ಟಿದ್ದೆ. ಆದರೆ ಭವಿಷ್ಯವನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೀಗಾಗಿ ಭಾರತ ತಂಡಕ್ಕೆ ಕ್ರಿಕೆಟರ್ ಆಗಿ ಹೆಚ್ಚಿನ ಕೊಡುಗೆ ನೀಡಲು ಬಯಸಿದ್ದೇನೆ' ಎಂದು ಅವರು ಹೇಳಿದ್ದಾರೆ.

ಮೂರು ಪಂದ್ಯ ಆಡಲು ಒಲವು: ಹೆಡಿಂಗ್ಲೆಯಲ್ಲಿ ನಡೆಯಲಿರುವ ಮೊದಲ ಟೆಸ್ಟ್ ಸೇರಿ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಕಡೇಪಕ್ಷ ಮೂರು ಪಂದ್ಯಗಳನ್ನು ಆಡಲು ಬೂಮ್ರಾ ಯೋಚಿಸಿದ್ದಾರೆ.

ಸರಣಿ ವಿಜೇತರಿಗೆ ಪಟೌಡಿ ಪದಕ

ನವದೆಹಲಿ (ಪಿಟಿಐ): ಪಟೌಡಿ ಅವರ ಹೆಸರು ಭಾರತ–ಇಂಗ್ಲೆಂಡ್ ಕ್ರಿಕೆಟ್ ಸರಣಿಯ ಭಾಗವಾಗಿ ಮುಂದುವರಿಯಲಿದೆ. ಇದೇ 20 ರಿಂದ ಆರಂಭವಾಗುವ ಐದು ಟೆಸ್ಟ್‌ಗಳ ಸರಣಿಯ ವಿಜೇತ ತಂಡದ ನಾಯಕನಿಗೆ ಪಟೌಡಿ ಹೆಸರಿನ ಪದಕ ಪ್ರದಾನ ಮಾಡಲಾಗುವುದು.

ಭಾರತ–ಇಂಗ್ಲೆಂಡ್ ಸರಣಿಗೆ ಆ್ಯಂಡರ್ಸನ್–ತೆಂಡೂಲ್ಕರ್ ಸರಣಿ ಎಂದು ಮರು ನಾಮಕರಣ ಮಾಡುವ ನಿರ್ಧಾರವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಮಂಡಳಿ (ಇಸಿಬಿ) ಕೈಗೊಂಡಿತ್ತು. ಲಾರ್ಡ್ಸ್‌ನಲ್ಲಿ ಕಳೆದ ವಾರ ಡಬ್ಲ್ಯುಟಿಸಿ ಫೈನಲ್ ಪಂದ್ಯದ ವೇಳೆ ಅಧಿಕೃತ ಘೋಷಣೆ ಮಾಡುವ ಕಾರ್ಯಕ್ರಮವಿತ್ತು. ಆದರೆ ಅಹಮದಾಬಾದಿನಲ್ಲಿ ವಿಮಾನ ದುರಂತದ ಕಾರಣ ಇದು ಮುಂದಕ್ಕೆ ಹೋಯಿತು.

ಟ್ರೋಫಿಗೆ ಮರುನಾಮಕರಣ ನಿರ್ಧಾರವನ್ನು ಭಾರತ ತಂಡದ ಮಾಜಿ ನಾಯಕ ಸುನೀಲ್ ಗಾವಸ್ಕರ್ ಸೇರಿ ಕೆಲವು ಮಾಜಿ ಆಟಗಾರರು ಟೀಕಿಸಿದ್ದರು. ಸ್ವತಃ ತೆಂಡೂಲ್ಕರ್ ಅವರೇ ಇಸಿಬಿಯನ್ನು ಸಂಪರ್ಕಿಸಿ ಪಟೌಡಿ ಅವರ ಹೆಸರನ್ನು ಉಳಿಸಿಕೊಳ್ಳುವಂತೆ ಅಭಿಪ್ರಾಯ ತಿಳಿಸಿದ್ದರು.

'ನಾಮಕರಣ ಪ್ರಕ್ರಿಯೆ ಹಾದಿಯಲ್ಲಿ ಸಚಿನ್ ಅವರೇ ಇಸಿಬಿಯನ್ನು ಸಂಪರ್ಕಿಸಿ, ಪಟೌಡಿ ಹೆಸರು ಭಾರತ–ಇಂಗ್ಲೆಂಡ್ ಸರಣಿಯ ಭಾಗವಾಗಿಬೇಕೆಂಬ ಇಂಗಿತ ವ್ಯಕ್ತಪಡಿಸಿದ್ದರು. ಐಸಿಸಿ ಅಧ್ಯಕ್ಷ ಜಯ್ ಶಾ ಅವರೂ ಈ ಚರ್ಚೆಯಲ್ಲಿ ಒಳಗೊಂಡಿದ್ದರು. ಇಸಿಬಿ ಈ ವಿನಂತಿಗೆ ಒಪ್ಪಿಕೊಂಡು, ಸರಣಿ ಗೆದ್ದ ನಾಯಕನಿಗೆ ಪಟೌಡಿ ಪದಕ ಪ್ರದಾನ ಮಾಡಲು ನಿರ್ಧರಿಸಿದೆ' ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ.

ಟ್ರೋಫಿಗೆ ಮರುನಾಮಕರಣವನ್ನು ಮೊದಲ ಟೆಸ್ಟ್ ಪಂದ್ಯದ ಮುನ್ನಾದಿನವಾದ 19ರಂದು ಲೀಡ್ಸ್‌ನಲ್ಲಿ ಅಧಿಕೃತವಾಗಿ ಪ್ರಕಟಿಸಲಾಗುವುದು.

ಮನ್ಸೂರ್ ಅಲಿ ಖಾನ್ ಪಟೌಡಿ ಭಾರತ ತಂಡದ ನಾಯಕರಾಗಿದ್ದರು. ಮನ್ಸೂರ್ ಹಾಗೂ ಅವರ ತಂದೆ ಇಫ್ತಿಕಾರ್ ಅಲಿ ಖಾನ್ ಪಟೌಡಿ ಇಬ್ಬರೂ ಇಂಗ್ಲೆಂಡ್‌ನಲ್ಲಿ ಕೌಂಟಿ ಕ್ರಿಕೆಟ್ ಆಡಿದ್ದರು.

ಲೀಡ್ಸ್‌ಗೆ ಬಂದಿಳಿದ ಭಾರತ ತಂಡ

ಲೀಡ್ಸ್ (ಪಿಟಿಐ): ಐದು ಟೆಸ್ಟ್ ಸರಣಿಯ ಮೊದಲ ಪಂದ್ಯವನ್ನಾಡಲು ಭಾರತ ತಂಡ ಮಂಗಳವಾರ ಲಂಡನ್‌ನಿಂದ ರೈಲಿನಲ್ಲಿ ಪಯಣಿಸಿ ಲೀಡ್ಸ್ ತಲುಪಿತು. ವೇಗದ ಬೌಲರ್ ಹರ್ಷಿತ್ ರಾಣಾ ಅವರು ಬದಲಿ ಆಟಗಾರನಾಗಿ ತಂಡದ ಜೊತೆಗಿದ್ದಾರೆ.

ನೀಳಕಾಯದ ರಾಣಾ ಅವರು ಇತ್ತೀಚೆಗೆ ಇಂಗ್ಲೆಂಡ್ ಪ್ರವಾಸ ಮಾಡಿದ್ದ ಭಾರತ 'ಎ' ತಂಡದಲ್ಲಿದ್ದು ಕ್ಯಾಂಟರ್‌ಬರಿಯಲ್ಲಿ ಇಂಗ್ಲೆಂಡ್ ಲಯನ್ಸ್ ವಿರುದ್ಧ ಮೊದಲ 'ಟೆಸ್ಟ್' ಪಂದ್ಯದಲ್ಲಿ ಆಡಿದ್ದರು. ಆದರೆ ಅವರು ಐದು ಟೆಸ್ಟ್ ಆಡಲಿರುವ 18 ಮಂದಿಯ ಸೀನಿಯರ್ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ.

23 ವರ್ಷದ ರಾಣಾ ಎರಡು ಟೆಸ್ಟ್, ಒಂದು ಟಿ20 ಮತ್ತು ಐದು ಏಕದಿನ ಪಂದ್ಯಗಳನ್ನು ಆಡಿದ್ದಾರೆ.

4 ದಿನಗಳ ಟೆಸ್ಟ್‌ಗೆ ಐಸಿಸಿ ಚಿಂತನೆ

2027–29ರ ಆವೃತ್ತಿ: ಸಾಂಪ್ರದಾಯಿಕ ಸರಣಿ ಯಥಾಸ್ಥಿತಿ

ಲಂಡನ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) 2027-29ರ ಆವೃತ್ತಿಯಲ್ಲಿ ಕೆಳ ಕ್ರಮಾಂಕದ ತಂಡಗಳ ಮಧ್ಯೆ ನಾಲ್ಕು ದಿನಗಳ ಟೆಸ್ಟ್ ಪಂದ್ಯಗಳನ್ನು ಆಡಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಹಸಿರು ನಿಶಾನೆ ತೋರಲು ಸಜ್ಜಾಗಿದೆ. ಆದರೆ ಭಾರತ, ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ತಂಡಗಳ ನಡುವೆ ಸಾಂಪ್ರದಾಯಿಕ ರೀತಿಯಲ್ಲಿ ಐದು ದಿನಗಳ ಪಂದ್ಯಗಳು ಇರಲಿವೆ ಎಂದು ವರದಿಯೊಂದು ತಿಳಿಸಿದೆ.

ಪಂದ್ಯವನ್ನು ಒಂದು ದಿನ ಕಡಿಮೆ ಮಾಡುವ ಕ್ರಮವು ಕ್ರಿಕೆಟ್ ಲೋಕದಲ್ಲಿ ಗಮನಾರ್ಹ ಬದಲಾವಣೆ ಎಂದೇ ವಿಶ್ಲೇಷಿಸಲಾಗುತ್ತಿದೆ. ರ‍್ಯಾಂಕಿಂಗ್‌ನಲ್ಲಿ ಕೆಳಗಿನ ಸ್ಥಾನದಲ್ಲಿರುವ ರಾಷ್ಟ್ರಗಳಿಗೂ ಹೆಚ್ಚು ಟೆಸ್ಟ್ ಮತ್ತು ದೀರ್ಘ ಸರಣಿಯನ್ನು ಆಡಲು ಇದರಿಂದ ನೆರವಾಗಲಿದೆ.

'ಕಳೆದ ವಾರ ಲಾರ್ಡ್ಸ್‌ನಲ್ಲಿ ಡಬ್ಲ್ಯುಟಿಸಿ ಫೈನಲ್ ವೇಳೆ ನಡೆದ ಚರ್ಚೆಯ ಸಂದರ್ಭದಲ್ಲಿ ಐಸಿಸಿ ಅಧ್ಯಕ್ಷ ಜಯ್ ಶಾ ಅವರು 2027-29ರ ಆವೃತ್ತಿಯಲ್ಲಿ ಜಾರಿಯಾಗುವಂತೆ ನಾಲ್ಕು ದಿನಗಳ ಟೆಸ್ಟ್ ಕ್ರಿಕೆಟ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದು 'ದಿ ಗಾರ್ಡಿಯನ್' ಪತ್ರಿಕೆ ವರದಿ ಮಾಡಿದೆ.

ಈ ಮಧ್ಯೆ ಐದು ಪಂದ್ಯಗಳ ಸರಣಿಯ ಆಸ್ಟ್ರೇಲಿಯಾ-ಇಂಗ್ಲೆಂಡ್ ನಡುವಣ 'ಆ್ಯಷಸ್', ಭಾರತ- ಆಸ್ಟ್ರೇಲಿಯಾ ನಡುವಣ 'ಬಾರ್ಡರ್-ಗಾವಸ್ಕರ್' ಮತ್ತು ಭಾರತ-ಇಂಗ್ಲೆಂಡ್ ನಡುವಣ ಹೊಸದಾಗಿ ಹೆಸರಿಸಿರುವ 'ಆ್ಯಂಡರ್ಸನ್-ತೆಂಡೂಲ್ಕರ್' ಟ್ರೋಫಿಯಲ್ಲಿ ಐದು ದಿನಗಳ ಆಟಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿದು ಬಂದಿದೆ.

2017ರಲ್ಲಿ ಐಸಿಸಿ ಮೊದಲ ಬಾರಿ ನಾಲ್ಕು ದಿನಗಳ ಟೆಸ್ಟ್‌ಗೆ ಅನುಮತಿ ನೀಡಿತ್ತು. ಇಂಗ್ಲೆಂಡ್ ತಂಡವು 2019 ಹಾಗೂ 2023ರಲ್ಲಿ ಐರ್ಲೆಂಡ್ ವಿರುದ್ಧದ ಬಳಿಕ ಕಳೆದ ತಿಂಗಳಲ್ಲಿ ಟ್ರೆಂಟ್ ಬ್ರಿಡ್ಜ್‌ನಲ್ಲಿ ಜಿಂಬಾಬ್ವೆ ವಿರುದ್ಧ ನಾಲ್ಕು ದಿನಗಳ ಪಂದ್ಯ ಆಡಿತ್ತು.

'ಕೆಲ ರಾಷ್ಟ್ರಗಳು ಟೆಸ್ಟ್ ಕ್ರಿಕೆಟ್‌ಗೆ ಆತಿಥ್ಯ ವಹಿಸಲು ಉತ್ಸುಕವಾಗಿವೆ. ಆದರೆ, ಸಮಯ, ವೇಳಾಪಟ್ಟಿ ಹಾಗೂ ವೆಚ್ಚದ ದೃಷ್ಟಿಯಿಂದ ಆಯೋಜಿಸಲು ಹಿಂಜರಿಯುತ್ತಿವೆ. ನಾಲ್ಕು ದಿನಗಳ ಟೆಸ್ಟ್ ಕ್ರಿಕೆಟ್‌ನ ದಿನದಾಟದಲ್ಲಿ 90 ಓವರ್ ಬದಲಿಗೆ ಕನಿಷ್ಠ 98 ಓವರ್‌ಗಳಿಗೆ ಆಡಬೇಕಾಗುತ್ತದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಡಬ್ಲ್ಯುಟಿಸಿ 2025–27: ಭಾರತದ ಪಂದ್ಯಗಳು

ಒಟ್ಟು ಪಂದ್ಯ	ಎದುರಾಳಿ ತಂಡ	ವರ್ಷ/ತಿಂಗಳು	ಆತಿಥ್ಯ
ಐದು	ಇಂಗ್ಲೆಂಡ್	2025ರ ಜೂನ್–ಆಗಸ್ಟ್	ಇಂಗ್ಲೆಂಡ್
ಎರಡು	ವೆಸ್ಟ್‌ಇಂಡೀಸ್	2025ರ ಅಕ್ಟೋಬರ್	ಭಾರತ
ಎರಡು	ದಕ್ಷಿಣ ಆಫ್ರಿಕಾ	2025ರ ಡಿಸೆಂಬರ್	ಭಾರತ
ಎರಡು	ಶ್ರೀಲಂಕಾ	2026ರ ಆಗಸ್ಟ್	ಶ್ರೀಲಂಕಾ
ಎರಡು	ನ್ಯೂಜಿಲೆಂಡ್	2026ರ ಅಕ್ಟೋಬರ್	ನ್ಯೂಜಿಲೆಂಡ್
ಐದು	ಆಸ್ಟ್ರೇಲಿಯಾ	2027ರ ಜನವರಿ–ಫೆಬ್ರುವರಿ	ಭಾರತ

ಹಾಲಿ ಆವೃತ್ತಿ ಆರಂಭ

2025-27ರ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವಂತೆಯೇ ಐದು ದಿನಗಳ ಆಟ ಮುಂದುವರಿಯಲಿವೆ. ಶ್ರೀಲಂಕಾವು ಮಂಗಳವಾರ ಬಾಂಗ್ಲಾದೇಶ ವಿರುದ್ಧ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡುವುದರೊಂದಿಗೆ ಹಾಲಿ ಆವೃತ್ತಿಗೆ ಚಾಲನೆ ದೊರಕಿದೆ.

2025-27ರ ಆವೃತ್ತಿಯಲ್ಲಿ ಒಂಬತ್ತು ದೇಶಗಳು 27 ಟೆಸ್ಟ್ ಸರಣಿಗಳಲ್ಲಿ ಒಟ್ಟು 131 ಪಂದ್ಯಗಳನ್ನು ಆಡಲಿವೆ. ಆಸ್ಟ್ರೇಲಿಯಾ ಗರಿಷ್ಠ 22 ಪಂದ್ಯ, ಭಾರತ 18 ಪಂದ್ಯಗಳನ್ನು ಆಡಲಿದೆ.

ನಜ್ಮುಲ್, ಮುಷ್ಫಿಕರ್ ಶತಕ: ಬಾಂಗ್ಲಾ ಪ್ರಾಬಲ್ಯ

ಗಾಲೆ (ಎಎಫ್‌ಪಿ): ನಾಯಕ ನಜ್ಮುಲ್ ಹುಸೇನ್ ಶಾಂತೊ (ಔಟಾಗದೇ 136;260ಎ) ಮತ್ತು ಮುಷ್ಫಿಕರ್ ರಹೀಮ್ (ಔಟಾಗದೇ 105; 186ಎ) ಅವರ ನಡುವಣ ಮುರಿಯದ ನಾಲ್ಕನೇ ವಿಕೆಟ್ ದ್ವಿಶತಕದ ಜೊತೆಯಾಟದ ನೆರವಿನಿಂದ ಬಾಂಗ್ಲಾದೇಶ ತಂಡವು ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೊದಲ ದಿನವಾದ ಮಂಗಳವಾರ 3 ವಿಕೆಟ್‌ಗೆ 292 ರನ್‌ಗಳಿಸಿ ಉತ್ತಮ ಸ್ಥಿತಿಯಲ್ಲಿದೆ.

ಗಾಲೆಯಲ್ಲಿ ಬಾಂಗ್ಲಾ ತಂಡದ ಆರಂಭ ಉತ್ತಮವಾಗಿ ಇರಲಿಲ್ಲ. 45 ರನ್ ಗಳಿಸುವಷ್ಟರಲ್ಲಿ ಪ್ರಮುಖ ಮೂರು ವಿಕೆಟ್‌ಗಳು ಪತನವಾದವು. ನಂತರನಜ್ಮುಲ್ ಮತ್ತು ಮುಷ್ಫಿಕರ್ ಅಮೋಘ ಶತಕ ದಾಖಲಿಸಿದರು. ಅವರಿಬ್ಬರು ಇದುವರೆಗೆ 247 ರನ್ ಸೇರಿಸಿದ್ದು, ಇದು ಶ್ರೀಲಂಕಾ ವಿರುದ್ಧ ನಾಲ್ಕನೇ ವಿಕೆಟ್‌ಗೆ ಬಾಂಗ್ಲಾದೇಶದ ಪರ ದಾಖಲೆಯ ಜೊತೆಯಾಟ ಎನಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 90 ಓವರ್‌ಗಳಲ್ಲಿ 3ಕ್ಕೆ 292 (ಮೋಮಿನುಲ್ ಹಕ್ 29, ನಜ್ಮುಲ್ ಹುಸೇನ್ ಶಾಂತೊ ಔಟಾಗದೇ 136, ಮುಷ್ಫಿಕರ್ ರಹೀಮ್ ಔಟಾಗದೇ 105; ಥರಿಂದು ರಥ್ನಾಯಕೆ 124ಕ್ಕೆ 2).

ಚಿಟಿಕೆ ಸುದ್ದಿ

ಜೂನಿಯರ್ ಮಹಿಳಾ ಹಾಕಿ ತಂಡಕ್ಕೆ ಸೋಲು

ಉಟ್ರೆಕ್ಟ್ (ನೆದರ್ಲೆಂಡ್ಸ್): ಸತತ ನಾಲ್ಕು ಪಂದ್ಯಗಳಲ್ಲಿ ಗೆದ್ದಿದ್ದ ಭಾರತ ಜೂನಿಯರ್ ಮಹಿಳಾ ಹಾಕಿ ತಂಡವು ಯುರೋಪ್ ಪ್ರವಾಸದ ಕೊನೆಯ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡಕ್ಕೆ ಮಣಿಯಿತು.

ಮಂಗಳವಾರ ನಡೆದ ನಿಗದಿತ ಅವಧಿಯಲ್ಲಿ ಪಂದ್ಯವು ಗೋಲುರಹಿತ ಡ್ರಾ ಆಗಿತ್ತು. ಬಳಿಕ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ 3–2 ರಿಂದ ಜಯಿಸಿತು.

ಶೂಟೌಟ್‌ನಲ್ಲಿ ಭಾರತದ ಲಾಲರಿನ್‌ಪುಯಿ ಹಾಗೂ ಪ್ರಿಯಾಂಕಾ ಯಾದವ್ ಚೆಂಡನ್ನು ಗುರಿ ಸೇರಿಸಿದರು. ಎದುರಾಳಿ ತಂಡದ ಇಮ್ಮೆ ಡಿ ಲ್ಯೂ, ರೂಸ್ ಆಲ್ಕಿಮೇಡ್ ಹಾಗೂ ಲಾಟ್ ರಸ್ಟ್ ಗೆಲುವಿನಲ್ಲಿ ಮಿಂಚಿದರು.

ಡಿಸೆಂಬರ್‌ನಲ್ಲಿ ನಡೆಯಲಿರುವ ಜೂನಿಯರ್ ಮಹಿಳಾ ವಿಶ್ವಕಪ್‌ಗೆ ಸಿದ್ಧತೆಯ ಭಾಗವಾಗಿ ಭಾರತವು ಈ ಪ್ರವಾಸ ಕೈಗೊಂಡಿತ್ತು. ಬೆಲ್ಜಿಯಂ ವಿರುದ್ಧ ಹ್ಯಾಟ್ರಿಕ್ ಗೆಲುವು ದಾಖಲಿಸಿದ್ದ ಭಾರತದ ವನಿತೆಯರು, ಆಸ್ಟ್ರೇಲಿಯಾಕ್ಕೂ ಸೋಲಿನ ರುಚಿ ತೋರಿಸಿದ್ದರು.

ಫುಟ್‌ಬಾಲ್ ಕೊಂಕಣ್‌ಗೆ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಆಗರಂ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 9–2 ಗೋಲುಗಳಿಂದ ಬೆಂಗಳೂರು ಯಂಗ್‌ಸ್ಟರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮತ್ತೊಂದು ಪಂದ್ಯದಲ್ಲಿ ಕೊಂಕಣ್ ಎಫ್‌ಸಿ ತಂಡವು 8–0 ಅಂತರದಿಂದ ಬೆಂಗಳೂರು ರೆಡ್ಸ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

'ವೃತ್ತಿಪರತೆಗೆ ವಿರುದ್ಧ'ವಾದ ಹೇಳಿಕೆ ನೀಡಿದ್ದಕ್ಕೆ ವಿಷಾದ
ಗಾಫ್‌ಗೆ ಕ್ಷಮೆಯಾಚಿಸಿದ ಸಬಲೆಂಕಾ

ಕೊಕೊ ಗಾಫ್

ಬರ್ಲಿನ್ (ಎಪಿ): ಫ್ರೆಂಚ್ ಓಪನ್ ಚಾಂಪಿಯನ್‌ಷಿಪ್ ಫೈನಲ್ ನಂತರ, 'ವೃತ್ತಿಪರತೆಗೆ ವಿರುದ್ಧ'ವಾದ ಹೇಳಿಕೆ ನೀಡಿದ್ದಕ್ಕೆ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಅಮೆರಿಕದ ಆಟಗಾರ್ತಿ ಕೊಕೊ ಗಾಫ್ ಅವರಿಗೆ ಪತ್ರ ಬರೆದು ಕ್ಷಮೆ ಯಾಚಿಸಿದ್ದಾರೆ.

ಫ್ರೆಂಚ್ ಓಪನ್ ಫೈನಲ್‌ನಲ್ಲಿ ಗಾಫ್ 6–7 (5), 6–2, 6–4 ರಿಂದ ಸಬಲೆಂಕಾ ಅವರನ್ನು ಸೋಲಿಸಿದ್ದರು. ಪ್ಯಾರಿಸ್‌ನಲ್ಲಿ ಫೈನಲ್ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ್ದ ಬೆಲರೂಸ್‌ನ ಆಟಗಾರ್ತಿ, 'ಗಾಫ್ ಅವರ ಉತ್ತಮ ಆಟಕ್ಕಿಂತ ಹೆಚ್ಚಾಗಿ ನನ್ನ ತಪ್ಪುಗಳಿಂದಲೇ ಪಂದ್ಯ ಸೋತಿದ್ದೆ' ಎಂಬರ್ಥದಲ್ಲಿ ಮಾತನಾಡಿದ್ದರು.

'ಈ ಹೇಳಿಕೆ ವೃತ್ತಿಘನತೆಗೆ ತಕ್ಕುದಾಗಿರಲಿಲ್ಲ' ಎಂದು ಯುರೊಸ್ಪೋರ್ಟ್ ಜರ್ಮನಿ ಚಾನೆಲ್‌ಗೆ ನೀಡಿದ ಹೇಳಿಕೆಯಲ್ಲಿ ಸಬಲೆಂಕಾ ತಿಳಿಸಿದ್ದಾರೆ. 'ಭಾವನಾತ್ಮಕವಾಗಿ ಮಾತನಾಡುವ ಭರದಲ್ಲಿ ಆಗ ಆ ರೀತಿ ಹೇಳಿದ್ದೆ. ಹಾಗೆ ಹೇಳಿದ್ದಕ್ಕೆ ನನಗೆ ಅತೀವ ವಿಷಾದವಿದೆ. ಮನುಷ್ಯಳಾಗಿ ನನ್ನಿಂದ ತಪ್ಪಾಗಿದೆ. ನಾನು ಬದುಕಿನ ಪಾಠ ಕಲಿಯುತ್ತಿರುವವಳು. ನಂತರ ನಾನು ಕೊಕೊ ಅವರಿಗೆ ಪತ್ರ ಬರೆದಿದ್ದೆ. ಅಂದೇ ಅಲ್ಲ; ಇತ್ತೀಚೆಗೆ ಬರೆದಿದ್ದೆ' ಎಂದು ಹೇಳಿದ್ದಾರೆ.

ಫೈನಲ್ ಪಂದ್ಯದಲ್ಲಿ ಸಬಲೆಂಕಾ 37 'ವಿನ್ನರ್'ಗಳನ್ನು ಆಡಿದ್ದರು. ಆದರೆ ತಾವೇ ಆಗಿ 70 ತಪ್ಪುಗಳನ್ನು ಮಾಡಿದ್ದರು. ಗಾಫ್ ಅವರಿಂದ 30 ತಪ್ಪುಗಳಾಗಿದ್ದವು.

'ಕ್ಷಮೆ ಕೇಳಲು ಪತ್ರ ಬರೆದೆ. ಆ ಮೂಲಕ ಅವರು ಟೂರ್ನಿಯ ಗೆಲುವಿಗೆ ಸಂಪೂರ್ಣವಾಗಿ ಯೋಗ್ಯರಾಗಿದ್ದರು ಎನ್ನುವುದನ್ನು ನನಗೆ ಹೇಳಬೇಕಿತ್ತು. ಅವರ ಬಗ್ಗೆ ನನಗೆ ಗೌರವವಿದೆ' ಎಂದಿದ್ದಾರೆ.


ಅರಿನಾ ಸಬಲೆಂಕಾ

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಸಬಲೆಂಕಾ, 2023ರ ಅಮೆರಿಕ ಓಪನ್ ಫೈನಲ್‌ನಲ್ಲೂ ಮೊದಲ ಸೆಟ್ ಗೆದ್ದ ನಂತರ ಗಾಫ್ ಅವರಿಗೆ ಸೋತಿದ್ದರು.

ವಿಶ್ವಕಪ್ ಬಳಿಕ ಏಕದಿನ ಕ್ರಿಕೆಟ್‌ಗೆ ಸೋಫಿ ವಿದಾಯ

ಆಕ್ಲೆಂಡ್ (ಪಿಟಿಐ): ನ್ಯೂಜಿಲೆಂಡ್ ಮಹಿಳಾ ತಂಡದ ನಾಯಕಿ ಸೋಫಿ ಡಿವೈನ್ ಅವರು ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಬಳಿಕ ಏಕದಿನ ಕ್ರಿಕೆಟ್‌ಗೆ ವಿದಾಯ ಘೋಷಿಸುವುದಾಗಿ ಹೇಳಿದ್ದಾರೆ. ಈ ವಿಶ್ವಕಪ್ ಭಾರತದಲ್ಲಿ ಸೆ.30 ರಿಂದ ನ. 2ರವರೆಗೆ ನಡೆಯಲಿದೆ.

35 ವರ್ಷ ವಯಸ್ಸಿನ ಆಲ್‌ರೌಂಡರ್ ಸೋಫಿ ಅವರು 152 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನಾಡಿದ್ದು, 3,990 ರನ್‌ಗಳಿಸಿದ್ದಾರೆ. ಇದರಲ್ಲಿ ಎಂಟು ಶತಕಗಳೂ ಸೇರಿವೆ. ಬೌಲಿಂಗ್‌ನಲ್ಲಿ 107 ವಿಕೆಟ್ ಪಡೆದಿದ್ದಾರೆ.

ಸೋಫಿ ನಾಯಕತ್ವದಲ್ಲಿ ನ್ಯೂಜಿಲೆಂಡ್ ತಂಡವು 2024ರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿತ್ತು.

ಸ್ಮೃತಿ ಮಂದಾನಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಮಂಗಳವಾರ ಪ್ರಕಟವಾದ ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಮರಳಿ ಪಡೆದುಕೊಂಡಿದ್ದಾರೆ.

ಈವರೆಗೆ ಅಗ್ರಸ್ಥಾನದಲ್ಲಿದ್ದ ದಕ್ಷಿಣ ಆಫ್ರಿಕಾ ಆಟಗಾರ್ತಿ ಲೋರಾ ವೊಲ್ವಾರ್ಟ್ ಅವರು ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲಿ ಕಳಪೆ ಪ್ರದರ್ಶನದಿಂದಾಗಿ 19 ಅಂಕಗಳನ್ನು ಕಳೆದುಕೊಂಡಿದ್ದಾರೆ. ಶ್ರೀಲಂಕಾದಲ್ಲಿ ಇತ್ತೀಚೆಗೆ ನಡೆದ ತ್ರಿಕೋನ ಸರಣಿಯಲ್ಲಿ ಭಾರತ ಪ್ರಶಸ್ತಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಂದಾನ ಅವರು, 2019ರ ಬಳಿಕ ಅಗ್ರಸ್ಥಾನಕ್ಕೆ ಮರಳಿದ್ದಾರೆ.

ಮಂದಾನ ಅವರು 727 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ, ಇಂಗ್ಲೆಂಡ್ ತಂಡದ ನಾಯಕಿ ನತಾಲಿ ಶಿವರ್ ಬ್ರಂಟ್ ಅವರು 719 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಹಾಗೂ ಅಷ್ಟೇ ಅಂಕಗಳನ್ನು ಹೊಂದಿರುವ ಲೋರಾ ವೊಲ್ವಾರ್ಟ್ ಮೂರನೇ ಸ್ಥಾನದಲ್ಲಿದ್ದಾರೆ.

ಪಟ್ಟಿಯಲ್ಲಿ, ಭಾರತದ ಜೆಮಿಮಾ ರಾಡ್ರಿಗಸ್ 14ನೇ ಸ್ಥಾನ ಹಾಗೂ ಹರ್ಮನ್‌ಪ್ರೀತ್ ಕೌರ್ 15ನೇ ಸ್ಥಾನದಲ್ಲಿದ್ದಾರೆ.

ಮಂದಾನ ಅವರು ಐಸಿಸಿ ಮಹಿಳಾ ಟಿ20 ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲೂ ಅಗ್ರ ಐದರೊಳಗೆ ಸ್ಥಾನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸದ್ಯ ಅವರು 753 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಎಫ್‌ಐಎಚ್ ಪ್ರೊ ಹಾಕಿ ಲೀಗ್ ಟೆಟೆ ಬಳಗಕ್ಕೆ ಹ್ಯಾಟ್ರಿಕ್ ಸೋಲು

ಲಂಡನ್ (ಪಿಟಿಐ): ಭಾರತದ ವನಿತೆಯರು ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನ ಯುರೋಪಿಯನ್ ಲೆಗ್‌ನಲ್ಲಿ ಸತತ ಮೂರನೇ ಸೋಲು ಅನುಭವಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಸಲೀಮಾ ಟೆಟೆ ಬಳಗವು 1-4 ಗೋಲುಗಳಿಂದ ಅರ್ಜೆಂಟೀನಾ ತಂಡಕ್ಕೆ ಮಣಿಯಿತು. ಕಳೆದ ವಾರದ ಕೊನೆಯಲ್ಲಿ ಭಾರತ ತಂಡವು 1–2 ಮತ್ತು 2–3ರಿಂದ ಆಸ್ಟ್ರೇಲಿಯಾ ಎದುರು ಸೋಲು ಕಂಡಿತ್ತು.

ಭಾರತದ ಪರ ಏಕೈಕ ಗೋಲನ್ನು ದೀಪಿಕಾ (30ನೇ ನಿ.) ದಾಖಲಿಸಿದರು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಅವರು ಚೆಂಡನ್ನು ಗುರಿ ಸೇರಿಸಿದರು. ಎದುರಾಳಿ ತಂಡದ ಪರ ಗೊರ್ಜೆಲಾನಿ ಅಗಸ್ಟಿನಾ (40ನೇ, 54ನೇ ಮತ್ತು 59ನೇ ನಿ.) ಹ್ಯಾಟ್ರಿಕ್ ಗೋಲು ಗಳಿಸಿದರೆ, ಫಲಾಸ್ಕೊ ವಿಕ್ಟೋರಿಯಾ (29ನೇ ನಿ.) ಒಂದು ಗೋಲು ಹೊಡೆದರು.

ಭಾರತ ತಂಡದ ಆಟಗಾರ್ತಿ ದೀಪಿಕಾ

ಭಾರತ ತಂಡವು ಬುಧವಾರ ರಿವರ್ಸ್ ಲೆಗ್‌ನ ಪಂದ್ಯದಲ್ಲಿ ಅರ್ಜೆಂಟೀನಾ ವಿರುದ್ಧ ಆಡಲಿದೆ.

ತಲ್ಲೂರು ಗ್ರಾಮದ ಸುನೀಲ್ ಡಿಫೆಂಡರ್ ಆಗಿ ಆಯ್ಕೆ
ಯುವ ಹಾಕಿ ತಂಡಕ್ಕೆ ಗ್ರಾಮೀಣ ಪ್ರತಿಭೆ

• ರವಿ ಆರ್.ತಿಮ್ಮಾಪುರ

ಆನವಟ್ಟಿ (ಶಿವಮೊಗ್ಗ): ಸೊರಬ ತಾಲ್ಲೂಕಿನ ತಲ್ಲೂರು ಗ್ರಾಮದ ಪ್ರತಿಭಾನ್ವಿತ ಆಟಗಾರ ಪಿ.ಬಿ. ಸುನೀಲ್ ಅವರು 21 ವರ್ಷದೊಳಗಿನವರ ಭಾರತ ಹಾಕಿ ತಂಡಕ್ಕೆ ಆಯ್ಕೆಯಾಗಿದ್ದಾರೆ.

20 ವರ್ಷ ವಯಸ್ಸಿನ ಸುನೀಲ್ ಆನವಟ್ಟಿ ಬಳಿಯ ತಲ್ಲೂರು ಗ್ರಾಮದ ಕೃಷಿಕ ಫಾಲಾಕ್ಷಪ್ಪ ಮತ್ತು ರತ್ನಮ್ಮ ಅವರ ಪುತ್ರ. ಅಣ್ಣನೊಂದಿಗೆ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದ ಹುಡುಗ ಈಗ ಭಾರತ ಕಿರಿಯರ ಹಾಕಿ ತಂಡಕ್ಕೆ ಆಯ್ಕೆಯಾಗಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ತಮಿಳುನಾಡಿನ ಚೆನ್ನೈ ಮತ್ತು ಮದುರೈನಲ್ಲಿ 2025ರ ನವೆಂಬರ್ 28ರಿಂದ ಡಿಸೆಂಬರ್ 10ರವರೆಗೆ ನಡೆಯಲಿರುವ ಎಫ್‌ಐಎಚ್ ಜೂನಿಯರ್ ಹಾಕಿ ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಜರ್ಮನಿಯ ಬರ್ಲಿನ್‌ನಲ್ಲಿ ನಡೆಯುವ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಆಡಲಿದ್ದಾರೆ. ಅವರು ರಕ್ಷಣೆ ವಿಭಾಗದ ಆಟಗಾರನಾಗಿ ಆಡಲಿದ್ದಾರೆ. ಈ ಟೂರ್ನಿ ಇದೇ ತಿಂಗಳ 21 ರಿಂದ 25ರವರೆಗೆ ನಡೆಯಲಿದೆ.

ತಲ್ಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಸುನೀಲ್ ಅವರನ್ನು ತರಬೇತುದಾರ ಸುಂದರೇಶ್ ಅವರು 2016ರಲ್ಲಿ ಶಿವಮೊಗ್ಗದ ಕ್ರೀಡಾ ಹಾಸ್ಟೆಲ್‌ಗೆ ಸೇರಿಸಿ ಕೈಗೆ ಹಾಕಿ ಸ್ಟಿಕ್ ಕೊಟ್ಟಿದ್ದರು. ಸುಂದರೇಶ್ ಅವರ ನಿರೀಕ್ಷೆಯಂತೆ ಪ್ರಾಥಮಿಕ ಹಾಗೂ ಪ್ರೌಢಶಾಲೆ ಹಂತದ ಹಾಕಿ ಸ್ಪರ್ಧೆಗಳಲ್ಲಿ ಸುನೀಲ್ ಉತ್ತಮ ಆಟವಾಡಿದರು. ಕೊಡಗಿನ ಕ್ರೀಡಾಶಾಲೆ ಸೇರಿದಾಗ ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತುದಾರರ ಕಣ್ಣಿಗೆ ಬಿದ್ದ ಸುನೀಲ್, ಬೆಂಗಳೂರು ಸೇರಿದ ನಂತರ ಅವರ ಆಟದ ದಿಕ್ಕು ಬದಲಾಯಿತು.

ಕರ್ನಾಟಕ 19 ವರ್ಷದೊಳಗಿನವರ ತಂಡಕ್ಕೆ ಸುನೀಲ್ 2022ರಲ್ಲಿ ಆಯ್ಕೆಯಾದರು. 2024ರಲ್ಲಿ ತಂಡದ ನಾಯಕನಾಗಿ ಬಡ್ತಿ ಪಡೆದರು. 2025ರಲ್ಲಿ ಕರ್ನಾಟಕ ಸೀನಿಯರ್ ತಂಡಕ್ಕೆ ಆಯ್ಕೆಯಾಗಿ ಉತ್ತರಾಖಂಡದಲ್ಲಿ ನಡೆದ ರಾಷ್ಟ್ರೀಯ ಹಾಕಿ ಕ್ರೀಡಾಕೂಟದಲ್ಲಿ ಕರ್ನಾಟಕ ಚಾಂಪಿಯನ್ ಆಗಲು ಇವರ ಉತ್ತಮ ಪ್ರದರ್ಶನ ಕಾರಣವಾಗಿತ್ತು. ಈ ಪ್ರದರ್ಶನವೇ ಸುನೀಲ್ ಅವರನ್ನು ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಕರೆದೊಯ್ದಿದೆ.

ಹಾಕಿ ಅಂಕಣದಲ್ಲಿ ಸುನೀಲ್

> ಸುನೀಲ್‌ಗೆ ಕ್ರೀಡೆ ಬಗ್ಗೆ ಇರುವ ಆಸಕ್ತಿ, ಸಾಧಿಸಬೇಕೆಂಬ ಛಲ, ಕೋಚ್‌ಗಳ ಸಹಕಾರದಿಂದ ಭಾರತ ಯುವ ಹಾಕಿ ತಂಡಕ್ಕೆ ಆಯ್ಕೆಯಾಗಿರುವುದು ಹೆಮ್ಮೆ ತಂದಿದೆ
> **ಎಚ್.ಟಿ.ಹುಚ್ಚಪ್ಪ,** ಸುನೀಲ್ ಚಿಕ್ಕಪ್ಪ

> ಸುನೀಲ್ ಅವರ ಚುರುಕುತನ, ಚಾಕಚಕ್ಯತೆ ಹಾಗೂ ಕೌಶಲ್ಯವನ್ನು ನೋಡಿ ಭಾರತ ಯುವ ತಂಡಕ್ಕೆ ಆಯ್ಕೆ ಮಾಡಲಾಗಿದೆ
> **ಆರ್.ಸುಂದರೇಶ್,** ಶಿವಮೊಗ್ಗ ಸ್ಪೋರ್ಟ್ಸ್ ಸ್ಕೂಲ್ ಕೋಚ್

> ಕೋಚ್ ಸುಂದರೇಶ್ ಅವರು ಕ್ರೀಡಾ ಹಾಸ್ಟೆಲ್‌ಗೆ ಸೇರುವಂತೆ ಹೇಳಿದಾಗ ಬಡ ಕುಟುಂಬದಿಂದ ಬಂದ ನನಗೆ ಊಟ, ಬಟ್ಟೆ ಜೊತೆಗೆ ಶಿಕ್ಷಣ ಸಿಗುತ್ತದೆ ಎಂಬ ಕಾರಣದಿಂದ ಒಪ್ಪಿಕೊಂಡಿದ್ದೆ. ಶಿವಮೊಗ್ಗಕ್ಕೆ ಬಂದ ನಂತರ ಕೋಚ್‌ಗಳಾದ ಸುಂದರೇಶ್, ಬಿ.ಜಿ. ಅಂಕಿತಾ, ಕೆ.ವಿ. ಅರಸನ್, ಹರಿಹರನ್ ಅವರು ನನ್ನ ಪ್ರತಿಭೆಯನ್ನು ಗುರುತಿಸಿ, ತರಬೇತಿ ನೀಡಿ, ಆಟಗಾರನನ್ನಾಗಿ ರೂಪಿಸಿದರು. ಭಾರತ ತಂಡದಲ್ಲಿ ಉತ್ತಮ ಪ್ರದರ್ಶನ ನೀಡುವ ದೊಡ್ಡ ಕನಸು ಹೊಂದಿದ್ದೇನೆ
> **ಪಿ.ಬಿ.ಸುನೀಲ್,** ಭಾರತ ಯುವ ಹಾಕಿ ತಂಡದ ಆಟಗಾರ

ನೇಪಾಳ ವಿರುದ್ಧ 3ನೇ ಸೂಪರ್ ಓವರಿನಲ್ಲಿ ಗೆದ್ದ ನೆದರ್ಲೆಂಡ್ಸ್!

ಗ್ಲಾಸ್ಗೊ (ಪಿಟಿಐ): ಟಿ20 ಅಂತರರಾಷ್ಟ್ರೀಯ ಅಥವಾ ಲಿಸ್ಟ್ ಎ ಕ್ರಿಕೆಟ್ ಇತಿಹಾಸದಲ್ಲೇ ಮೊದಲ ಬಾರಿ ಪಂದ್ಯವೊಂದು ಮೂರು ಸೂಪರ್ ಓವರ್‌ಗಳನ್ನು ಕಂಡಿದೆ! ಸೋಮವಾರ ರಾತ್ರಿ ನಡೆದ ಟಿ20 ಅಂತರರಾಷ್ಟ್ರೀಯ ತ್ರಿಕೋನ ಸರಣಿಯ ಪಂದ್ಯದಲ್ಲಿ ನೆದರ್ಲೆಂಡ್ಸ್ ಮೂರನೇ ಸೂಪರ್ ಓವರ್‌ನಲ್ಲಿ ನೇಪಾಳ ತಂಡವನ್ನು ಸೋಲಿಸಿತು.

ಮೊದಲು ಆಡಿದ ಡಚ್ ತಂಡ 20 ಓವರುಗಳಲ್ಲಿ 7 ವಿಕೆಟ್‌ಗೆ 152 ರನ್ ಬಾರಿಸಿತು. ನೇಪಾಳ ಹೋರಾಟ ತೋರಿದ್ದು, ಕೊನೆಯ ಓವರಿನಲ್ಲಿ 16 ರನ್ ಗಳಿಸಬೇಕಿತ್ತು. ಕೈಲ್ ಕ್ಲೀನ್ ಬೌಲಿಂಗ್‌ನಲ್ಲಿ ನಂದನ್ ಯಾದವ್ ಅವರ ಬಿರುಸಿನ ಆಟದಿಂದ (ಕೊನೆಯ 4 ಎಸೆತಗಳಲ್ಲಿ 4,2,2,4) ನೇಪಾಳ ಕೂಡ 8 ವಿಕೆಟ್‌ಗೆ 152 ರನ್ ಗಳಿಸಿತು. ಹೀಗಾಗಿ ಸ್ಕೋರ್ ಸಮನಾಯಿತು.

ಕುಶಲ್ ಭುರ್ತೆಲ್ ಅವರ ಅಜೇಯ 18 ರನ್ ನೆರವಿನಿಂದ ನೇಪಾಳ ಮೊದಲ ಸೂಪರ್ ಓವರಿನಲ್ಲಿ 19 ರನ್ ಗಳಿಸಿತು. ಆದರೆ ಮ್ಯಾಕ್ಸ್ ಓಡೌಡ್ ಅವರ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿಯ ಸಹಾಯದಿಂದ ಡಚ್ಚರ ತಂಡ ಕೂಡ 19 ರನ್ ಗಳಿಸಿತು.

ಎರಡನೇ ಸೂಪರ್ ಓವರಿನಲ್ಲಿ ಮೊದಲು ಆಡಿದ ನೆದರ್ಲೆಂಡ್ಸ್ 17 ರನ್ ಗಳಿಸಿತು. ಆದರೆ ದೀಪೇಂದ್ರ ಸಿಂಗ್ ಐರಿ ಅವರು ಕೈಲ್ ಕ್ಲೀನ್ಸ್ ಅವರ ಬೌಲಿಂಗ್ ಕೊನೆಯ ಎಸೆತವನ್ನು ಮಿಡ್‌ವಿಕೆಟ್‌ಗೆ ಸಿಕ್ಸರ್‌ಗಟ್ಟಿದರಿಂದ ನೇಪಾಳ ಕೂಡ 17 ರನ್ ಗಳಿಸಿದ್ದರಿಂದ ಪಂದ್ಯ ಮೊದಲ ಬಾರಿ ಮೂರನೇ ಸೂಪರ್ ಓವರಿಗೆ ಬೆಳೆಯಿತು.

ಆದರೆ ಮೂರನೇ ಸೂಪರ್ ಓವರಿನಲ್ಲಿ ಡಚ್ ಆಫ್ ಸ್ಪಿನ್ ಆಲ್‌ರೌಂಡರ್ ಝ್ಯಾಕ್ ಲಯನ್–ಕ್ಯಾಷೆ ಅವರು ನಾಲ್ಕು ಎಸೆತಗಳಲ್ಲಿ ಒಂದೂ ರನ್ ನೀಡದೇ ಎರಡು ವಿಕೆಟ್ ಪಡೆದ ಕಾರಣ ನೇಪಾಳ ಆಲೌಟ್ ಆಯಿತು. ಹೀಗಾಗಿ ಡಚ್ ತಂಡದ ಗೆಲುವಿಗೆ ಒಂದು ರನ್ ಸಾಕಿತ್ತು. ಮೈಕೆಲ್ ಲೆವಿಟ್ ಮೊದಲ ಎಸೆತದಲ್ಲೇ ಸಿಕ್ಸರ್ ಬಾರಿಸಿ ಈ ರೋಮಾಂಚಕ ಪಂದ್ಯಕ್ಕೆ ಕೊನೆಗೂ ತೆರೆಯೆಳೆದರು.

ಚೆಸ್: ಹರ್ಷಿತ್, ಲಿಯಾಗೆ ಪ್ರಶಸ್ತಿ

ಚಿಕ್ಕಬಳ್ಳಾಪುರ: ಬೆಂಗಳೂರು ನಗರದ ಹರ್ಷಿತ್ ರಾಮ್ ಬಿ ಮತ್ತು ಲಿಯಾ ಆರ್. ಜೋಸೆಫ್ ಅವರು ಕರ್ನಾಟಕ ರಾಜ್ಯ ಓಪನ್ 11 ವರ್ಷದೊಳಗಿನವರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಓಪನ್ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಓಪನ್ ವಿಭಾಗದಲ್ಲಿ 153 ಮಂದಿ ಮತ್ತು ಬಾಲಕಿಯರ ವಿಭಾಗದಲ್ಲಿ 82 ಮಂದಿ ಕಣದಲ್ಲಿದ್ದರು. ಭಾನುವಾರ ಮುಕ್ತಾಯಗೊಂಡ ಮೂರು ದಿನಗಳ ಈ ಟೂರ್ನಿಯು 9 ಸುತ್ತುಗಳನ್ನು ಒಳಗೊಂಡಿತ್ತು. ಓಪನ್ ವಿಭಾಗದಲ್ಲಿ ಸಮಕ್ಷ್ ಅಶೋಕ್ ಎರಡನೇ, ಸ್ರಗ್ವಿದ ಎಸ್., ವೆಂಕಟನಾಗ ಮಲ್ಲಾದಿ ಮತ್ತು ತರುಣ್ ಬಿ ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

ಬಾಲಕಿಯರ ವಿಭಾಗದಲ್ಲಿ ರಿಶ್ವಿತಾ ಮಹಾಜನ್, ಸೌಖ್ಯಾ ಕೆ.ಆರ್., ರಾಜೇಶ್ವರಿ ಅಯ್ಯಪ್ಪನ್, ರಿಧ್ಯಲ್ ಅಲಿಡಾ ಡಿಸೋಜಾ ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನ ಪಡೆದರು.

ಹರ್ಷಿತ್ ಮತ್ತು ಸಮಕ್ಷ್, ಲಿಯಾ ಮತ್ತು ರಿಶ್ವಿತಾ ಅವರು ಆಗಸ್ಟ್‌ನಲ್ಲಿ ನಡೆಯುವ ರಾಷ್ಟ್ರೀಯ 11 ವರ್ಷದೊಳಗಿನ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ.